ಸಂಪುಟ: 05 ಸಂಚಿಕೆ: 329 ಪುಟಗಳು: 08 ಬುಧವಾರ 11 ಫೆಬ್ರವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು

ಜ್ಞಾನ ನಮ್ಮ ಮಧ್ಯೆ ಇರುವಂತಹುದೇ, ಆದರೆ ಮನುಷ್ಯ ಅದನ್ನು ಆವಿಷ್ಕರಿಸಿ, ಅನಾವರಣಗೊಳಿಸುವ ಮಹತ್ಕಾರ್ಯದಲ್ಲಿ ತೊಡಗಬೇಕು.

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9448225696

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## ಬಂಡೀಪುರ, ನಾಗರಹೊಳೆ ಪ್ರವಾಸಿಗರಿಗೆ ಸಫಾರಿ ನಿರ್ಬಂಧ

• ಉದಯವಾಹಿನಿ, ಬೆಂಗಳೂರು

ಬೇಸಿಗೆಯ ಸಮಯದಲ್ಲಿ ಅರಣ್ಯ ಪ್ರದೇಶಗಳಲ್ಲಿ ಚಾರಾಣಿಗರ ಚಟುವಟಿಕೆಗಳಿಂದ ಕಾಡ್ಗಿಚ್ಚು, ವನ್ಯಜೀವಿಗಳಿಗೆ ಅಪಾಯ ಎಂಬ ಕಾರಣ ನೀಡಿ ರಾಜ್ಯದ ಬಹುತೇಕ ಕಾಡು ಮೇಡುಗಳಲ್ಲಿ ನಿರ್ಬಂಧ ಹೇರಲಾಗುತ್ತದೆ. ಸುರಕ್ಷತೆಯ ದೃಷ್ಟಿಯಿಂದ ಈ ಕ್ರಮಕ್ಕೆ ತರ್ಕವಿದೆ. ಆದರೆ ವಿಚಿತ್ರವೆಂದರೆ, ಬೇಸಿಗೆ ಅವಧಿಗೆ ಮುನ್ನವೇ ಇದು ಆರಂಭ ಆಗುತ್ತಿರುವುದು. ಡಿಸೆಂಬರ್ ತಿಂಗಳಿಂದಲೇ ಆರಂಭವಾಗುವ ಪ್ರವಾಸಿಗರ ಸೀಸನ್'ನಲ್ಲೇ, ಪ್ರವಾಸಿಗರ ಅತಿ ಪ್ರಿಯತಾಣಗಳಾದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿ ಅರಣ್ಯ ಸಫಾರಿಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದು ಎಷ್ಟರ ಮಟ್ಟಿಗೆ ವೈಜ್ಞಾನಿಕ? ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇಲಿಗೆ ಜೀವಸಂಕಟದಲ್ಲಿದ್ದರೆ, ಬೆಕ್ಕಿಗೆ ಅದು ಆಟವಾದಂತೆ, ಈ ನಿರ್ಧಾರ ಪ್ರವಾಸೋದ್ಯಮದ ಮೇಲೆ ಅವಲಂಬಿತ ಸಾವಿರಾರು ಕುಟುಂಬಗಳನ್ನು ನೇರವಾಗಿ ಸಂಕಟಕ್ಕೆ ದೂರುತ್ತದೆ. ಆದರೆ, ಪರ್ಯಾಯ ಪರಿಹಾರ ನೀಡಬೇಕಾದವರಿಗೆ, ನಿರ್ಬಂಧ ಹೇರುವುದು ಸುಲಭವಾದ ಪರಿಹಾರವಾಗಿದೆ. ಕರ್ನಾಟಕದ ಹೆಮ್ಮೆಯ ಈ ಪ್ರತಿಷ್ಠಿತ ಅರಣ್ಯ ತಾಣಗಳು ಕೇವಲ ಪ್ರವಾಸಿ ಆಕರ್ಷಣೆಗಳಲ್ಲ. ಅವು ಸಂರಕ್ಷಣೆ, ಸಂಶೋಧನೆ, ಸ್ಥಳೀಯ ಉದ್ಯೋಗ, ಮತ್ತು ರಾಜ್ಯದ ಪರಿಸರ ಆರ್ಥಿಕತೆಯ ಅವಿಭಾಜ್ಯ ಅಂಗಗಳು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಅರಣ್ಯ ಪ್ರವಾಸೋದ್ಯಮ ಗುರುತಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ಇಲ್ಲಿನ ನೀತಿಗಳಲ್ಲಿ ಈ ರೀತಿಯ ಮೌಢ್ಯ ಏಕೆ? ಎಂಬ ಪ್ರಶ್ನೆ ಕೂಲಿ ಕಾರ್ಮಿಕರಿಂದ ಹಿಡಿದು ಪ್ರವಾಸೋದ್ಯಮ ಉದ್ಯಮಿಗಳವರೆಗೂ ಕಾಡುತ್ತಿದೆ.

## ಐಪಿಎಸ್ ಮತ್ತು ಐಎಎಸ್ ಅಧಿಕಾರಿಗಳ ವರ್ಗಾವಣೆ ಆದೇಶ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳ ವರ್ಗಾವಣೆ ಸರಣಿ ನಡೆಯುತ್ತಿದೆ. ದಾವಣಗೆರೆ ಜಿಲ್ಲೆಗೆ ಹೊಸ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ), ಧಾರವಾಡಕ್ಕೆ ಹೊಸ ಜಿಲ್ಲಾಧಿಕಾರಿ ನೇಮಕ ಮಾಡಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. ಬೆಂಗಳೂರಿನಲ್ಲಿ ಗುಪ್ತಚರ ಇಲಾಖೆಯ ಎಸ್‌ಪಿಯಾಗಿದ್ದ ಶೇಖರ್ ಎಚ್ ತೆಕ್ಕಣ್ಣನವರ್ ಅವರನ್ನು ದಾವಣಗೆರೆ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಇನ್ನು ಮುಂದೆ ಜಿಲ್ಲಾ ಪೊಲೀಸ್ ವಿಭಾಗದ ಮುಖ್ಯಸ್ಥರಾಗಿ, ಭದ್ರತೆ ನಿಭಾಯಿಸಲಿದ್ದಾರೆ.

ಕಳೆದ ಕೆಲ ವರ್ಷಗಳಿಂದ ದಾವಣಗೆರೆ ಎಸ್‌ಪಿ ಆಗದಿದ್ದ ಹಿರಿಯ ಐಪಿಎಸ್ ಅಧಿಕಾರಿ ಉಮಾ ಪ್ರಶಾಂತ್ ಅವರನ್ನು ಎತ್ತಂಗಡಿ ಮಾಡಲಾಗಿದೆ. ಆದರೆ, ಸ್ಥಳ ನಿಯೋಜನೆಯನ್ನು ಮಾಡಿಲ್ಲ. ವರ್ಗಾವಣೆಗೆ ನಿಖರ ಕಾರಣಗಳು ತಿಳಿದುಬಂದಿಲ್ಲ.

ಧಾರವಾಡದ ಜಿಲ್ಲಾಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ದಿವ್ಯ ಪ್ರಭು ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರ ಜಾಗಕ್ಕೆ ಐಎಎಸ್ ಅಧಿಕಾರಿ ಸ್ನೇಹಲ್ ಅವರನ್ನು ನೇಮಕ ಮಾಡಲಾಗಿದೆ. ಸ್ನೇಹಲ್ ಅವರು ಇದಕ್ಕೂ ಮುನ್ನ ರಾಷ್ಟ್ರೀಯ ಜೀವನೋಪಾಯ ಮಿಷನ್ (ಎನ್‌ಎಲ್‌ಎಂ) ನಿರ್ದೇಶಕರಾಗಿದ್ದರು.


ಎಲ್ಲರೂ ಬಾಯಿ ಮುಚ್ಚಿಕೊಂಡು ಇದ್ದರೆ ಒಳ್ಳೆಯದು ಎಂದು ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಹೇಳಿದ್ದಾರೆ. ಅದನ್ನು ನಾವು ಪಾಲನೆ ಮಾಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಸದಾಶಿವನಗರ ನಿವಾಸದ ಬಳಿ ಮಾತನಾಡಿದ ಅವರು, ಅಧಿಕಾರ ಹಂಚಿಕೆ ಕುರಿತು ನಾಯಕರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸುತ್ತಾ, ನನ್ನ ಪರ ವಿರುದ್ಧ ಹೇಳಿಕೆಗಳನ್ನು ಶಾಸಕರು, ಸಚಿವರು ಯಾರೇ ನೀಡುತ್ತಿರಬಹುದು. ಈ ಹೇಳಿಕೆಗಳು ಪಕ್ಷಕ್ಕೆ ಹಾನಿ ಮಾಡುವ ಹೇಳಿಕೆಗಳೇ ಹೊರತು ಪಕ್ಷಕ್ಕೆ ಒಳ್ಳೆಯದನ್ನು ಮಾಡುವ ಹೇಳಿಕೆಗಳಲ್ಲ ಎಂದರು.

# ಖರ್ಗೆ ಸಾಹೇಬ್ರು ಹೇಳ್ಯಾರಲ್ಲ ಕದ್ದು ಮುಚ್ಚಿ ಮಾತಾಡಿಲ್ಲ

## ಬಾಯಿ ಮುಚ್ಚಿಕೊಂಡು ಇರಬೇಕು ಎಂಬ ಆದೇಶ ಎಲ್ಲರೂ ಪಾಲಿಸಬೇಕು

## ಕೊನೆಗೂ ಪವರ್ ಶೇರಿಂಗ್ ಒಪ್ಪಂದದ ಬಗ್ಗೆ ಸ್ಫೋಟಕ ಹೇಳಿಕೆ!

### ಡಿಕೆಶಿ ಖಡಕ್ ವಾರ್ನಿಂಗ್



### ದೆಹಲಿ ಭೇಟಿ ಕುತೂಹಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಸಿದ್ಧತಾ ಸಭೆಗಳನ್ನು ನಡೆಸಿರುವಾಗಲೇ ಬಜೆಟ್ ಸಭೆಗಳನ್ನು ಬಿಟ್ಟು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿಗೆ ತೆರಳಿರುವುದು ರಾಜಕೀಯವಾಗಿ ಕುತೂಹಲ ಮೂಡಿಸಿದೆ. ನಮ್ಮ ನಾಯಕರನ್ನು ಭೇಟಿಯಾಗುವುದು ಕರ್ತವ್ಯ. ಈ ಭೇಟಿ ವೇಳೆ ನಮ್ಮ ಕಷ್ಟ, ಧುಃಖ ದುಮ್ಮಾನ, ಬಯಕೆ ಎಲ್ಲವನ್ನೂ ಅವರಿಗೆ ಹೇಳಿಕೊಳ್ಳುತ್ತೇನೆ ಎಂದರು. ದೆಹಲಿಗೆ ನನ್ನನ್ನು ದೊಡ್ಡ ನಾಯಕರು ಆಹ್ವಾನಿಸಿದ್ದಾರೆ. ಅವರನ್ನು ಭೇಟಿ ಮಾಡುತ್ತೇನೆ. ಎಲ್ಲವನ್ನೂ ಹೇಳುತ್ತೇನೆ ಎಂದಿದ್ದ ಅವರು, ದೆಹಲಿಗೆ ಆಹ್ವಾನಿಸಿರುವ ಆ ದೊಡ್ಡ ನಾಯಕರ ಹೆಸರನ್ನು ಬಹಿರಂಗಗೊಳಿಸಲಿಲ್ಲ. ಎರಡು ದಿನಗಳ ಕಾಲ ದೆಹಲಿಯಲ್ಲೆ ವಾಸ್ತವ್ಯ ಹೂಡುವ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್‌ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ನಾಯಕತ್ವ ವಿಚಾರದ ಬಗ್ಗೆ ಸ್ಪಷ್ಟನೆ ನೀಡುವಂತೆ ಪಟ್ಟು ಹಿಡಿಯಲಿದ್ದಾರೆ ಎಂದು ಹೇಳಲಾಗಿದೆ.

1. ಬಾಯಿ ಮುಚ್ಚಿಕೊಂಡು ಇರಬೇಕು ಎಂದಿದೆ ಕಾಂಗ್ರೆಸ್ ಹೈಕಮಾಂಡ್
2. ಇದನ್ನು ಎಲ್ಲರೂ ಪಾಲನೆ ಮಾಡಿ ಎಂದ ಡಿಕೆ ಶಿವಕುಮಾರ್
3. ಯತೀಂದ್ರ ಸಿದ್ದರಾಮಯ್ಯ ಹೇಳಿಕೆಗೆ ಡಿಕೆ ಶಿವಕುಮಾರ್ ಪ್ರತಿಕ್ರಿಯೆ

• ಉದಯವಾಹಿನಿ, ಬೆಂಗಳೂರು

ಒಂದಷ್ಟು ಕಾಂಗ್ರೆಸ್ ನಾಯಕರು ನೀವು ಶುಭಸುದ್ದಿ ತರುವಿರಿ ಎಂದಿರುವ ಬಗ್ಗೆ ಪ್ರತಿಕ್ರಿಯಿಸುತ್ತಾ, ಪ್ರತಿದಿನವೂ ನನಗೆ ಶುಭ ದಿನ, ಶುಭ ಜೀವನ, ಶುಭ ಪ್ರಾರಂಭ, ಯಶಸ್ಸಿನ ದಿನ, ಪ್ರತಿ ದಿನವೂ ಕಷ್ಟದ ದಿನವೇ. ಪ್ರತಿ ದಿನವೂ ಏನೂ ಸುಲಭವಾಗಿ ಇರುವುದಿಲ್ಲ. ಜನರ ಕಷ್ಟಗಳನ್ನು ಬಗೆಹರಸಿಬೇಕಾದರೆ ಕಷ್ಟ ಕಾರ್ಪಣ್ಯಗಳು, ಅಡಚಣೆಗಳು, ತೊಡಕುಗಳು ಇದ್ದೇ ಇರುತ್ತವೆ. ಟೀಕೆಗಳು ಬರುತ್ತಲೇ ಇರುತ್ತವೆ. ಟೀಕೆಗಳನ್ನು ಎದುರಿಸಲೇಬೇಕು. ನಮ್ಮ ಕೆಲಸವನ್ನು ಮುಂದುವರೆಸಲೇಬೇಕು ಎಂದು ತಿಳಿಸಿದರು. ನಾನು, ಸಿದ್ದರಾಮಯ್ಯ ಅವರು ಕದ್ದುಮುಚ್ಚಿ ಮಾತನಾಡಿಕೊಂಡಿಲ್ಲ, ನನಗೆ ಯಾವ ಗೊಂದಲವೂ ಇಲ್ಲ. ಗೊಂದಲ ಬೇರೆಯವರಿಗೆ ಇರಬಹುದು.

ನಾನು ಹಾಗೂ ಸಿದ್ದರಾಮಯ್ಯ ಅವರು ಏನು ಮಾತನಾಡಿದ್ದೇವೆ ಎಂಬುದು ನಮಗೆ ಗೊತ್ತು. ನಾವಿಬ್ಬರು ಕದ್ದು ಮುಚ್ಚಿ ಮಾತನಾಡಿಕೊಂಡಿಲ್ಲ. ನಮ್ಮ ಪಕ್ಷದ ವರಿಷ್ಠರು ಎಲ್ಲಾ ಸೇರಿ ಮಾತನಾಡಿಕೊಂಡಿದ್ದೇವೆ. ಬೇರೆಯವರೆಲ್ಲ ಇದಕ್ಕೆ ಟೆನ್ಷನ್ ತೆಗೆದುಕೊಳ್ಳುವುದು, ಹೇಳಿಕೆ ಕೊಡುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ ಎಂದರು.

ನಾವು ಮಾತನಾಡಿದರೆ ನೋಟಿಸ್ ನೀಡುತ್ತಾರೆ ಯತೀಂದ್ರ ಮಾತನಾಡಿದರೆ ಏಕೆ ನೋಟಿಸ್ ನೀಡುವುದಿಲ್ಲ ಎಂದು ಶಾಸಕ ಇಕ್ಬಾಲ್ ಹುಸೇನ್ ಅವರು ಪ್ರಶ್ನಿಸಿರುವ ಬಗ್ಗೆ ಕೇಳಿದಾಗ, ಈ ಬಗ್ಗೆ ಹೈಕಮಾಂಡ್ ಕೇಳೋಣ ಎಂದು ಪ್ರತಿಕ್ರಿಯೆ ನೀಡಿದರು. ದೆಹಲಿಗೆ ಹೋದ ಮೇಲೆ ಎಲ್ಲಾ ನಾಯಕರು ಮತ್ತು ಯಾರು ಸಿಗುತ್ತಾರೋ ಅವರನ್ನು ಭೇಟಿ ಮಾಡಲಾಗುವುದು. ಸಂಸತ್ ಅಧಿವೇಶನ ನಡೆಯುತ್ತಿರುತ್ತದೆ. ಬಿಡುವಿದ್ದರೆ ಖಂಡಿತವಾಗಿ ಭೇಟಿ ಮಾಡುತ್ತೇನೆ. ವಿವಿಧ ಚುನಾವಣೆಗಳು ಹಾಗೂ ರಾಜಕೀಯ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಸಲಾಗುವುದು. ಚುನಾವಣಾ ದಿನಾಂಕಗಳು ಘೋಷಣೆಯಾಗುವ ಸಾಧ್ಯತೆಯಿದೆ. ಆದ ಕಾರಣಕ್ಕೆ ನನ್ನನ್ನು ಚರ್ಚೆ ನಡೆಸಲು ಕರೆದಿದ್ದಾರೆ. ನಾನು ಹೋಗುತ್ತಿದ್ದೇನೆ ಎಂದು ಮಾಹಿತಿ ನೀಡಿದರು. ಕೇರಳಕ್ಕೆ ಹೋಗಿದ್ದೆ ನಂತರ ಅಸ್ಸಾಂಗೂ ತೆರಳಬೇಕು. ಬಜೆಟ್ ಸಭೆ ಇರುವ ಕಾರಣಕ್ಕೆ ಮುಖ್ಯಮಂತ್ರಿಗಳ ಬಳಿ ಬರಲು ಆಗುವುದಿಲ್ಲ ಎಂದು ಮನವಿ ಮಾಡಿದ್ದೆ.

ಸೋಮವಾರದಂದು ಅಧಿಕಾರಿಗಳ ಜೊತೆ ಬಜೆಟ್ ಸಭೆ ನಡೆಸಿದ್ದೇನೆ. ಅವರು ಎಲ್ಲವನ್ನು ವಿವರಿಸುತ್ತಾರೆ. ನಂತರ ಬಂದು ಅವರ ಬಳಿ ಮಾತನಾಡುತ್ತೇನೆ ಎಂದು ತಿಳಿಸಿದರು.

**ಪ್ರತಿದಿನವೂ ಶುಭದಿನ:** ಒಂದಷ್ಟು ಕಾಂಗ್ರೆಸ್ ನಾಯಕರು ನೀವು ಶುಭಸುದ್ದಿ ತರುವಿರಿ ಎಂದಿರುವ ಬಗ್ಗೆ ಕೇಳಿದಾಗ, ಪ್ರತಿದಿನವೂ ನನಗೆ ಶುಭದಿನ, ಶುಭ ಜೀವನ, ಶುಭ ಪ್ರಾರಂಭ, ಯಶಸ್ಸಿನ ದಿನ, ಪ್ರತಿದಿನವೂ ಕಷ್ಟದ ದಿನವೇ. ಪ್ರತಿದಿನವೂ ಏನೂ ಸುಲಭವಾಗಿ ಇರುವುದಿಲ್ಲ. ಜನರ ಕಷ್ಟಗಳನ್ನು ಬಗೆಹರಸಿಬೇಕಾದರೆ ಕಷ್ಟ ಕಾರ್ಪಣ್ಯಗಳು, ಅಡಚಣೆಗಳು, ತೊಡಕುಗಳು ಇದ್ದೇ ಇರುತ್ತವೆ. ಟೀಕೆಗಳು ಬರುತ್ತಲೇ ಇರುತ್ತವೆ. ಟೀಕೆಗಳನ್ನು ಎದುರಿಸಲೇಬೇಕು. ನಮ್ಮ ಕೆಲಸವನ್ನು ಮುಂದುವರೆಸಲೇಬೇಕು ಎಂದು ಉತ್ತರಿಸಿದರು.

### ಸಿಎಂ ಪುನರುಚ್ಚಾರ

ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಹೈಕಮಾಂಡ್ ಮಾತೆ ಅಂತಿಮ. ಅವರು ಏನು ಹೇಳುತ್ತಾರೋ ಅದಕ್ಕೆ ನಾನು ಬದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಹಂಚಿಕೆ ಬಗ್ಗೆ ಕದ್ದು ಮುಚ್ಚಿ ಮಾತನಾಡಿಲ್ಲ. ನಾನು ಸಿದ್ದರಾಮಯ್ಯ, ವರಿಷ್ಠರು ಮಾತನಾಡಿದ್ದೇವೆ ಎಂದು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, ಈ ಬಗ್ಗೆ ನಾನು ಮಾತನಾಡಲ್ಲ. ಡಿ.ಕೆ. ಶಿವಕುಮಾರ್ ಅವರನ್ನು ಕೇಳಿ. ಹೈಕಮಾಂಡ್ ಮಾತೆ ಅಂತಿಮ ಎಂದರು.

### ಹೈಕಮಾಂಡ್ ಗೊಂದಲವನ್ನು ಬೇಗ ಇತ್ಯರ್ಥ

ಹೈಕಮಾಂಡ್ ಗೊಂದಲವನ್ನು ಬೇಗ ಇತ್ಯರ್ಥ ಮಾಡಬೇಕು ಎನ್ನುವ ಬಗ್ಗೆ ಕೇಳಿದಾಗ, ನನಗೆ ಯಾವ ಗೊಂದಲವೂ ಇಲ್ಲ. ಗೊಂದಲ ಬೇರೆಯವರಿಗೆ ಇರಬಹುದು. ನಾನು ಹಾಗೂ ಸಿದ್ದರಾಮಯ್ಯ ಅವರು ಏನು ಮಾತನಾಡಿದ್ದೇವೆ ಎಂಬುದು ನಮಗೆ ಗೊತ್ತು. ನಾವಿಬ್ಬರು ಕದ್ದು ಮುಚ್ಚಿ ಮಾತನಾಡಿಕೊಂಡಿಲ್ಲ. ನಮ್ಮ ಪಕ್ಷದ ವರಿಷ್ಠರು ಎಲ್ಲಾ ಸೇರಿ ಮಾತನಾಡಿಕೊಂಡಿದ್ದೇವೆ. ಬೇರೆಯವರೆಲ್ಲ ಇದಕ್ಕೆ ಟೆನ್ಷನ್ ತೆಗೆದುಕೊಳ್ಳುವುದು, ಹೇಳಿಕೆ ಕೊಡುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ ಎಂದರು. ನಾವು ಮಾತನಾಡಿದರೆ ನೋಟಿಸ್ ನೀಡುತ್ತಾರೆ ಯತೀಂದ್ರ ಮಾತನಾಡಿದರೆ ಏಕೆ ನೋಟಿಸ್ ನೀಡುವುದಿಲ್ಲ ಎಂದು ಶಾಸಕ ಇಕ್ಬಾಲ್ ಹುಸೇನ್ ಅವರು ಪ್ರಶ್ನಿಸಿರುವ ಬಗ್ಗೆ ಕೇಳಿದಾಗ, ಈ ಬಗ್ಗೆ ಹೈಕಮಾಂಡ್ ಅನ್ನು ಕೇಳೋಣ ಎಂದರು.

## ಬಜೆಟ್ ಸಿದ್ಧತೆ ಸಭೆಗೆ ಡಿಕೆಶಿ ಗೈರು: ಕಾರಣ ಕೊಟ್ಟ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ಬಜೆಟ್ ಸಿದ್ಧತಾ ಸಭೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈಗಾಗಲೇ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಅವರು ತೊಡಗಿಸಿಕೊಂಡಿದ್ದರು.

ಮಂಗಳವಾರ ಜಲ ಸಂಪನ್ಮೂಲ ಇಲಾಖೆಗೆ ಸೇರಿದ ಸಭೆಯನ್ನು ಇಟ್ಟುಕೊಂಡಿದ್ದರು. ಆದರೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಸಭೆಗೆ ಗೈರಾಗಿ ದೆಹಲಿಗೆ ತೆರಳಿದ್ದಾರೆ. ಬಜೆಟ್ ಸಿದ್ಧತಾ ಸಭೆಗೆ ಗೈರಾಗಿ ದೆಹಲಿಗೆ ತೆರಳಿದ್ದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು. ಈ ವಿಚಾರವಾಗಿ ಸ್ವತಃ ಸಿಎಂ ಸಿದ್ದರಾಮಯ್ಯ ಸ್ಪಷ್ಟತೆ ನೀಡಿದ್ದಾರೆ.

ಬಜೆಟ್ ಸಿದ್ಧತಾ ಸಭೆಯಲ್ಲಿ ಡಿಸಿಎಂ ಹಾಜರಾಗುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಅಸ್ಸಾಂ ರಾಜ್ಯದಲ್ಲಿ ಸಭೆಯೊಂದಕ್ಕೆ ಹಾಜರಾಗಬೇಕಾದ ಕಾರಣ ಬಜೆಟ್ ಸಿದ್ಧತೆ ಸಭೆಯಲ್ಲಿ ಭಾಗವಹಿಸಲಾಗುವುದಿಲ್ಲ ಎಂದು ಉಪಮುಖ್ಯಮಂತ್ರಿ



ಅಸ್ಸಾಂ ವೀಕ್ಷಕರಾಗಿ ನೇಮಕ

ಡಿಕೆಶಿವಕುಮಾರ್ ತಿಳಿಸಿರುವುದಾಗಿ ಹೇಳಿದರು. ಅಲ್ಲದೆ, ಅವರ ಉಪಸ್ಥಿತಿಯಲ್ಲೂ ಬಜೆಟ್ ಸಿದ್ಧತಾ ಸಭೆ ನಡೆಯುವುದಾಗಿ ತಿಳಿಸಿದರು.

ನಾಯಕತ್ವ ಬದಲಾವಣೆ ವರಿಷ್ಠರ ತೀರ್ಮಾನವೇ ಅಂತಿಮ

### ಮತ ಪರಿಷ್ಕರಣೆ ಅಡ್ಡಿ ಗೊತ್ತಿಲ್ಲ

ಮತಪರಿಷ್ಕರಣೆಯ ಎಸ್ ಐ ಆರ್ ಕಾರ್ಯಕ್ಕೆ ಅಡ್ಡಿಪಡಿಸುವುದನ್ನು ಸಹಿಸುವುದಿಲ್ಲವೆಂದು ಸುಪ್ರೀಂ ಕೋರ್ಟ್ ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಸುಪ್ರೀಂ ಕೋರ್ಟ್ ನವರು ಯಾವ ಸಂದರ್ಭಕ್ಕೆ ಹೀಗೆ ಹೇಳಿದ್ದಾರೆ ಎಂಬ ಮಾಹಿತಿ ಪಡೆದು, ನಂತರ ಪ್ರತಿಕ್ರಿಯೆ ನೀಡುತ್ತೇನೆ ಎಂದು ಇದೇ ಸಂದರ್ಭದಲ್ಲಿ ಅವರು ತಿಳಿಸಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಈ ವಿಚಾರದಲ್ಲಿ ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ. ವರಿಷ್ಠರು ಬಯಸಿದರೆ ಮಾತ್ರ ದೆಹಲಿಗೆ ತೆರಳುವುದಾಗಿ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು.

ಪ್ರತಾಪ್ ಸಿಂಹರಿಗೆ ಬಿಜೆಪಿಯೇ ಟಿಕೆಟ್ ನೀಡಲಿಲ್ಲ

ಶಾಸಕ ಯತೀಂದ್ರ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆ ಮಾಜಿ ಸಂಸದ ಪ್ರತಾಪ್ ಸಿಂಹ ಟೀಕೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಪ್ರತಾಪ್ ಸಿಂಹ ಅವರಿಗೆ ಬಿಜೆಪಿ ಪಕ್ಷದವರೇ ಟಿಕೆಟ್ ನೀಡಲಿಲ್ಲ ಎಂದು ಟಾಂಗ್ ನೀಡಿದರು.

ರಾಜ್ಯದ ಪ್ರಥಮ ಚುನಾಯಿತ ಮುಖ್ಯಮಂತ್ರಿಯಾಗಿದ್ದರು ಎಂದು ನೆನಪಿಸಿಕೊಂಡರು. ಹನುಮಂತಯ್ಯನವರು ವಿಧಾನಸೌಧಕ್ಕೆ ಬುನಾದಿ ಹಾಕಿದರಾದರೂ, ಉದ್ಘಾಟನೆಯ ಸಂದರ್ಭದಲ್ಲಿ ಅವರು ಮುಖ್ಯಮಂತ್ರಿಯಾಗಿರಲಿಲ್ಲವೆಂಬುದು ನೋವಿನ ಸಂಗತಿ. ಅವರ ಆದರ್ಶ ಮತ್ತು ಸಿದ್ಧಾಂತಗಳು ಎಲ್ಲರಿಗೂ ಮಾರ್ಗದರ್ಶನ ನೀಡುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

## ಪ್ರಧಾನಿ ಮೋದಿ ಬಗ್ಗೆ ಸಿದ್ದರಾಮಯ್ಯ ಆಕ್ಷೇಪಾರ್ಹ ಪದ ಬಳಕೆ

• ತಿಮ್ಮಾಪುರ ಇಲಾಖೆಯಲ್ಲಿ 25 ಲಕ್ಷ ಕರೆನ್ಸಿ ಸಿಕ್ಕಿದೆ • ಎಲ್ಲೇ ಹೋದರೂ ಲಕ್ಷ ಲಕ್ಷ ಕರೆನ್ಸಿ ಸಿಗುತ್ತಿದೆ


• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿರುವ ಸಿಎಂ ಸಿದ್ದರಾಮಯ್ಯ ಕ್ಷಮೆ ಕೇಳುವಂತೆ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದ್ದಾರೆ. ಈ ಕುರಿತಾಗಿ ಬೆಂಗಳೂರಿನಲ್ಲಿ ಮಂಗಳವಾರ ಮಾತನಾಡಿದ ಅವರು, ಮುಖ್ಯಮಂತ್ರಿಗಳು ದೇಶದ ಪ್ರಧಾನಮಂತ್ರಿಗಳ ವಿರುದ್ಧ ಹೇಡಿ ಎಂಬ ಕೆಟ್ಟ ಪದ ಬಳಸಿದ್ದು ಸರಿಯೇ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಪ್ರಶ್ನಿಸಿದ್ದಾರೆ. ಇದನ್ನು ಖಂಡತುಂಡವಾಗಿ ಖಂಡಿಸುತ್ತೇವೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳಿಗೆ ಪಶ್ಚಾತ್ತಾಪ ಆಗಿದ್ದರೆ ಅವರು ತಕ್ಷಣ ದೇಶದ ಕ್ಷಮೆ ಕೇಳಬೇಕು. ಮೋದಿಜೀ ಅವರ ಕ್ಷಮೆ ಕೇಳಬೇಕೆಂದು ಆಗ್ರಹಿಸಿದರು. ಮುಖ್ಯಮಂತ್ರಿಯವರು ತಾಳ್ಮೆ ಕಳಕೊಂಡು ಹೀಗೆ ಮಾತನಾಡುತ್ತಿದ್ದಾರಾ? ರಾಹುಲ್ ಗಾಂಧಿಯವರ ಓಲೈಕೆಗಾಗಿ ಹೀಗೆ ಮಾತನಾಡುತ್ತಾರಾ? ಮುಖ್ಯಮಂತ್ರಿ ಪದವಿಯಲ್ಲಿ ಇನ್ನೊಂದಷ್ಟು ದಿನ ಉಳಕೊಳ್ಳಲು ಹೀಗೆ ಮಾತಾಡಿದ್ದಾರಾ? ಅಥವಾ ತಲೆಗಿಲೆ ಕೆಟ್ಟು ಇಂಥ ಪದ ಬಳಸುತ್ತಿದ್ದಾರಾ? ಎಂದು ಕೇಳಿದರು. ಅವರಿಗೆ ಪರೀಕ್ಷೆ ಮಾಡಿಸುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಕಾಂಗ್ರೆಸ್ ನಾಯಕರಿಂದ ಈಚೆಗೆ ಅಮೃತವನ್ನು ಸವಿಯಬೇಕಾದ ನಾಲಿಗೆಯಲ್ಲಿ ಹೇಸಿಗೆಯ ಮಾತುಗಳು ಬರುತ್ತಿರುವುದು ವಿಪರ್ಯಾಸ. ನಾಲಿಗೆಗೆ ಒಂದು ಬೆಲೆ ಇದೆ. ಅದಕ್ಕೊಂದು ಗೌರವ ಇದೆ. ನಾಲಿಗೆ ಒಂದು ಜೀವನದ ಉತ್ತಮ ಮಟ್ಟ ಇಲ್ಲವೇ ಕೆಟ್ಟ ಪರಂಪರೆಯ ಸೃಷ್ಟಿಗೆ ಕಾರಣವಾಗುತ್ತದೆ ಎಂದು ವಿಶ್ಲೇಷಿಸಿದರು.

ಪ್ರಿಯಾಂಕ್ ಖರ್ಗೆಯವರು ಇದಕ್ಕೂ ಮುಂಚೆ ಇದೇರೀತಿಯ ಪದ ಬಳಸಿದ್ದರು. ಸರಿಸಮಾನ ಪದವಿಯಲ್ಲಿ ಇರುವವರು ಕೆಲವು ಸಂದರ್ಭದಲ್ಲಿ ಟೀಕೆ ಮಾಡುವಾಗ ಲಘುವಾಗಿ ಮಾತನಾಡಿದರೂ ಅವರವರ ಎತ್ತರಕ್ಕೆ ಸರಿ ಹೋಗಬಹುದು. ಆದರೆ, ಒಬ್ಬ ಯುವಕ, ಸಣ್ಣ ವ್ಯಕ್ತಿ ದೇಶದ ಪ್ರಧಾನಿಯನ್ನು ಇಷ್ಟೊಂದು ಕಠಿಣ ಪದಗಳಿಂದ ನಿಂದಿಸಿದರೆ ಪ್ರಧಾನಿಯನ್ನು ಗೌರವಿಸುವ ಈ ದೇಶವಾಸಿಗಳು ಅವರನ್ನು ಬಹುಶಃ ಕುನ್ನಿಗೆ ಹೋಲಿಸುತ್ತಾರೆ. ನಾನು ಆ ಥರ ಹೋಲಿಸುವುದಿಲ್ಲ



### ಬೆಟ್ಟ ಅಗೆದು ಇಲಿ ಹಿಡಿಯುವ ಕೆಲಸ

ಸದನ ಇಷ್ಟು ದಿನ ನಡೆದಿದ್ದು, ಬೆಟ್ಟ ಅಗೆದು ಇಲಿ ಹಿಡಿಯುವ ಕೆಲಸ ಮಾಡಿದ್ದಾರೆ. ವಿಬಿ ಜಿ ರಾಮ್ ಜಿ ವಿರೋಧಿಸುವ ಕೆಲಸ ಮಾತ್ರ ಮಾಡಿದ್ದಾರೆ. ಜನರ ಸಮಸ್ಯೆ ಚರ್ಚೆ ಆಗಿಲ್ಲ ಎಂದು ಟೀಕಿಸಿದರು. ಕಾಯ್ದೆ ಮೊದಲೇ ಅನುಮೋದನೆ ಪಡೆದ ಕಾರಣ ಇವರ ಇಷ್ಟು ದಿನದ ಶ್ರಮ ಕಸದ ಬುಟ್ಟಿಗೆ ಹೋಯಿತಲ್ಲವೇ? ಎಂದು ಕೇಳಿದರು. ನಿಮ್ಮ ವ್ಯರ್ಥ ಪ್ರಯತ್ನಗಳನ್ನು ಹೋರಾಟದ ಮೂಲಕ ಜನಮನಕ್ಕೆ ಒಯ್ಯಲಿದ್ದೇವೆ ಎಂದು ತಿಳಿಸಿದರು.

> ನಿಮ್ಮ ಖಜಾನೆ ಖಾಲಿ ಆಗಿದೆ. ಯುವಜನರ ಬಗ್ಗೆ ನಿಮಗೆ ಪ್ರೀತಿ ಪ್ರೇಮ ಇಲ್ಲ. ಅವರ ಭವಿಷ್ಯದ ಕುರಿತು ಕಾಳಜಿ ಇಲ್ಲ. ಅದನ್ನು ತುಂಬುವ ಬದಲು ನೀವು ಸಂತೆಭಾಷಣ ಮಾಡುವುದೇಕೆ? ಎಂದು ಕೇಳಿದರು. ಇದಕ್ಕೆ ಬದ್ಧತೆ ಬೇಕು. ಬದ್ಧತೆ ಇದ್ದರೆ ಕೇಂದ್ರದ ಬಳಿಗೆ ತೆರಳಿ ಮಾತನಾಡಬೇಕು. ಕೇವಲ ಪತ್ರ ಬರೆದು ಕುಳಿತರೆ ಆಗದು. ದಲಿತರ ಉದ್ಧಾರದ ಭಾಷಣ ಮಾಡಿ, ದಲಿತರ ಸರ್ವನಾಶ ಮಾಡುತ್ತೀರಿ
>
> -ಛಲವಾದಿ ನಾರಾಯಣ ಸ್ವಾಮಿ, ವಿಧಾನಪರಿಷತ್ ವಿಪಕ್ಷ ನಾಯಕ

ಎಂದು ನುಡಿದರು.

**2 ಲಕ್ಷ 80 ಸಾವಿರ ಹುದ್ದೆಗಳು ಖಾಲಿ:** ದಾವಣಗೆರೆಯಲ್ಲಿ ನಿನ್ನೆ ಪರಿಶಿಷ್ಟ ವರ್ಗಗಳ ಸಮಾವೇಶ ನಡೆದಿದೆ. ಒಳ ಮೀಸಲಾತಿ ಬಗ್ಗೆಯೂ ಅಲ್ಲಿ ಮಾತನಾಡಿದ್ದಾರೆ. ಮೀಸಲಾತಿ ಹೆಚ್ಚಳದ ಕುರಿತು ಮಾತನಾಡಿದ್ದಾರೆ.

ಮುಖ್ಯಮಂತ್ರಿಗಳೇ, ಎರಡೂವರೆ ವರ್ಷಗಳಿಂದ ಯಾವುದೇ ನೇಮಕಾತಿ ಸರಕಾರದಲ್ಲಿ ಆಗುತ್ತಿಲ್ಲ. 2 ಲಕ್ಷ 80 ಸಾವಿರ ಹುದ್ದೆಗಳು ಖಾಲಿ ಬಿದ್ದಿವೆ. ಒಳ ಮೀಸಲಾತಿ ಕಾಯ್ದೆ ಇನ್ನೂ ಊರ್ಜಿತ ಆಗಿಲ್ಲ. ನೀವು ಮಾಡಿದ್ದೇನು? ಎಂದು ಕೇಳಿದರು.

ಬಿಜೆಪಿಯ ಮುಖ್ಯಮಂತ್ರಿಗಳಾಗಿದ್ದ ಬಸವರಾಜ ಬೊಮ್ಮಾಯಿ ಅವರು 15ರಿಂದ 17 ಶೇ, ಎಸ್ಟಿಗಳಿಗೆ 3ರಿಂದ ಶೇ 7 ಮಾಡಿ, ಅವತ್ತೇ ಕಾನೂನು ಮಾಡಿ ಜಾರಿಗೊಳಿಸಿದ್ದರು. ಅದನ್ನು ನೀವು ಊರ್ಜಿತ ಮಾಡಬೇಕಿತ್ತು. ಕೋರ್ಟಲ್ಲಿ ವಾದ ಮಾಡಲು ನೀವು ಅರ್ಜಿಯೂ ಹಾಕಿಲ್ಲ ಎಂದು ಟೀಕಿಸಿದರು. ನೀವು ಬಿಜೆಪಿಯದು ನಾಟಕ ಎಂದವರು ಒಳ ಮೀಸಲಾತಿ ಮಾಡುವಾಗ ಶೇ 17, ಶೇ 7 ರ ಮೇಲೆ ಯಾವ ರೀತಿ ಮಾಡಿದಿರಿ? ನೀವು ಶೆಡ್ಯೂಲ್ 9ಕ್ಕೆ ಸೇರಿಸಿದ್ದೀರಾ ಮುಖ್ಯಮಂತ್ರಿಗಳೇ ಎಂದು ಕೇಳಿದರು.

| ಈ ದಿನದ ದರ | | | |
|---|---|---|---|
| ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹15,878/Gram24ct ₹14,555/Gram22ct | ಬೆಳ್ಳಿ: ₹290.00/Gram |

## ದೊಡ್ಡಮ್ಮ ಕೆಲಸ ಮಾಡುತ್ತಿದ್ದ ಮಾಲೀಕರ ಮನೆಯಲ್ಲಿ ಚಿನ್ನಾಭರಣ ಕಳ್ಳತನ

• ಉದಯವಾಹಿನಿ ,ಬೆಂಗಳೂರು

ತನ್ನ ದೊಡ್ಡಮ್ಮ ಮನೆಗೆಲಸ ಮಾಡುತ್ತಿದ್ದ ಮಾಲೀಕರ ಮನೆಯಲ್ಲಿ ಯಾರಿಗೂ ತಿಳಿಯದಂತೆ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿದ ಆರೋಪದಡಿ ಸಹೋದರಿ ಮಗನನ್ನ ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಹಳ್ಳಿ ನಿವಾಸಿ ಶರತ್ (31) ಬಂಧಿತ ಖದೀಮ. ಈತನಿಂದ 36 ಲಕ್ಷ ಮೌಲ್ಯದ 241 ಗ್ರಾಂ ಚಿನ್ನ, 2.8 ಕೆ.ಜಿ ಬೆಳ್ಳಿ 1.30 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ.

ತ್ಯಾಗರಾಜನಗರದ ಮನೆಯೊಂದರಲ್ಲಿ ಕಳೆದ ವರ್ಷ ಆಗಸ್ಟ್‌ನಲ್ಲಿ ನಡೆದಿತ್ತು. ಕೃತ್ಯ ಸಂಬಂಧ ಮನೆ ಮಾಲೀಕರು ನೀಡಿದ ದೂರಿನ ಮೇರೆಗೆ ಆರೋಪಿಯನ್ನ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮನೆ ಮಾಲಕಿಯು ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾರೆ. ಈಕೆಯ ಮಗಳು ಹೈದರಾಬಾದ್‌ನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದಾರೆ. ಕಳೆದ 25 ವರ್ಷಗಳಿಂದಲೂ ದೂರುದಾರರ ಮನೆಯಲ್ಲಿ ಆರೋಪಿ ದೊಡ್ಡಮ್ಮ ಮನೆ ಕೆಲಸ ಮಾಡುತ್ತಿದ್ದರು. ನಂಬಿಕೆಯಿಂದ ಮನೆಯ ಮತ್ತೊಂದು ಬೀಗದ ಕೀಯನ್ನ ಮನೆಕೆಲಸದಾಕೆಗೆ ನೀಡಿದ್ದರು .

## ಸಿಲಿಂಡರ್ ಸ್ಫೋಟ, ಇಬ್ಬರ ಆರೋಗ್ಯ ಸ್ಥಿತಿ ಗಂಭೀರ

• ಉದಯವಾಹಿನಿ ,ಬೆಂಗಳೂರು

ಬೆಂಗಳೂರಿನ ಕೆ.ಆರ್.ಪುರಂ ವ್ಯಾಪ್ತಿಯ ಮಂಜುನಾಥ ಲೇಔಟ್‌ನ ಮನೆಯೊಂದರಲ್ಲಿ ಎಲ್‌ಪಿಜಿ ಸಿಲಿಂಡರ್ ಸ್ಫೋಟವಾಗಿದೆ.ಇಡೀ ಮನೆಯಲ್ಲಿ ಬೆಂಕಿ ಕಾಣಿಸಿದ್ದು, ಮನೆಯ ಮಾಲೀಕರಾದ ಪೂರ್ಣಿಮಾ ಹಾಗೂ ಬಾಡಿಗೆದಾರರಾದ ವೆಂಕಟೇಷ್ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮನೆಯೊಂದರಿಂದ ಅನಿಲ ಸೋರಿಕೆ ವಾಸನೆ ಬರುತ್ತಿರುವುದಾಗಿ ವೆಂಕಟೇಶ್ ಪೂರ್ಣಿಮಾಗೆ ಹೇಳಿದ್ದಾರೆ.2

ಬಳಿಕ ಮನೆಗೆ ಬಂದ ಪೂರ್ಣಿಮಾ ಲೈಟ್ ಆನ್ ಮಾಡಿದ ನಂತರ ಬೆಂಕಿ ಹೊತ್ತಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಎರಡು ಅಂತಸ್ತಿನ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಮೊದಲ ಮನೆಯಲ್ಲಿ ಪೂರ್ಣಿಮಾ ವಾಸವಿದ್ದರು. ಮೇಲಿನ ಮಹಡಿಯಲ್ಲಿ ಇತರ ಎರಡು ಮನೆಗಳಿವೆ. ಘಟನೆ ಸಂಭವಿಸಿದಾಗ ಮನೆಯ ಬಾಡಿಗೆದಾರರು ಕೆಲಸಕ್ಕೆ ಹೋಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಕೆಆರ್ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಆರೋಗ್ಯವೃದ್ಧಿಗೆ ಸಹಕಾರಿಯಾದ ಪೌಷ್ಟಿಕ ಆಹಾರ

• ಉದಯವಾಹಿನಿ ,ಬೆಂಗಳೂರು

ಆರೋಗ್ಯ ಇಲಾಖೆಯು ನಗರದ ಆಯ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಪರಿಚಯಿಸಿರುವ ವಿಶೇಷ ಪೌಷ್ಟಿಕ ಆಹಾರಕ್ಕೆ ರೋಗಿಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಈ ಆಹಾರವು ರೋಗಿಗಳ ಆರೋಗ್ಯ ವೃದ್ಧಿಗೂ ಸಹಕಾರಿಯಾಗಿದೆ. ಇಸ್ಕಾನ್ ಸಹಯೋಗದಲ್ಲಿ ರೂಪಿಸಿರುವ ಈ ಯೋಜನೆಗೆ ಸೆಪ್ಟೆಂಬರ್‌ನಲ್ಲಿ ಚಾಲನೆ ನೀಡಲಾಗಿತ್ತು. ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ವಿಶೇಷ ಪೌಷ್ಟಿಕ ಆಹಾರವನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ.

ಒಂದೇ ರೀತಿಯ ಸಾಮಾನ್ಯ ಆಹಾರದ ಬದಲು, ರೋಗಿಗಳಿಗೆ ಅಗತ್ಯ ಪೌಷ್ಟಿಕಾಂಶ ಒದಗಿಸುವ ಆಹಾರವನ್ನು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ನಗರದ ಈ ಮೂರು ಆಸ್ಪತ್ರೆಗಳಲ್ಲಿ ಹೊಸ ಆಹಾರ ಮೆನುವಿಗೆ ರೋಗಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದರಿಂದ, ಕಳೆದ ತಿಂಗಳು, ರಾಜ್ಯದ ಐದು ಆಸ್ಪತ್ರೆಗಳಿಗೆ ಯೋಜನೆ ವಿಸ್ತರಿಸಲಾಗಿದೆ. ಆ ಆಸ್ಪತ್ರೆಗಳ ಪಟ್ಟಿಯಲ್ಲಿ ನಗರದ ಯಲಹಂಕ ಸಾರ್ವಜನಿಕ ಆಸ್ಪತ್ರೆ ಹಾಗೂ ಕೆ.ಆರ್. ಪುರ ಸಾರ್ವಜನಿಕ ಆಸ್ಪತ್ರೆ ಕೂಡ ಸೇರಿದೆ. ಬೆಂಗಳೂರಿನಲ್ಲಿರುವ ಐದು ಆಸ್ಪತ್ರೆಗಳಲ್ಲಿ ಪೌಷ್ಟಿಕ ಆಹಾರ ವಿತರಣೆಯಾಗುತ್ತಿದೆ. ಈ ಮೊದಲು ಆಸ್ಪತ್ರೆಯ ಕಿಚನ್‌ಗಳಲ್ಲಿಯೇ ಊಟ-ತಿಂಡಿ ತಯಾರಿಸಿ ವಿತರಿಸಲಾಗುತ್ತಿತ್ತು.

ಒಂದೇ ರೀತಿಯ ಊಟ-ತಿಂಡಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆಯೂ ರೋಗಿಗಳಿಂದ ದೂರುಗಳು ಬರುತ್ತಿದ್ದವು. ಇದರಿಂದಾಗಿ ಹೆಚ್ಚಿನ ಆಹಾರ ವ್ಯರ್ಥವಾಗುತ್ತಿತ್ತು.

## ರನ್‌ವೇಗೆ ಹಾರಿ ಬಂದ ಬಲೂನ್!


ಉದಯವಾಹಿನಿ ಚಿತ್ರ

• ಉದಯವಾಹಿನಿ ,ದೇವನಹಳ್ಳಿ

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇ ಪ್ರದೇಶಕ್ಕೆ ಬೃಹತ್ ಬಲೂನ್‌ವೊಂದು ಗಾಳಿಯಲ್ಲಿ ಹಾರಿ ಬಂದಿದೆ. ಫೆ.5ರಂದು ಈ ಘಟನೆ ನಡೆದಿದೆ. ವಿಮಾನಗಳ ಟೇಕ್ ಆಫ್ ಮತ್ತು ಲ್ಯಾಂಡಿಂಗ್ ನಡೆಯುವ ರನ್‌ವೇ ಪ್ರದೇಶಕ್ಕೆ ಬೃಹತ್ ಗಾತ್ರದ ಬಲೂನ್ ಹಾರಿ ಬಂದಿದೆ. ಆ ಸಮಯದಲ್ಲಿ ವಿಮಾನಗಳ ಹಾರಾಟ ಇಲ್ಲದ ಕಾರಣ ಯಾವುದೇ ಅನಾಹುತ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಬಿಸಿಡಿ ಕನ್ಸಟ್ರಕ್ಷನ್ ಕಂಪನಿಗೆ ಈ ಬಲೂನ್ ಸೇರಿದೆ. ಅದರ ದಾರ ಕಟ್ ಆಗಿ ರನ್‌ವೇ ಕಡೆಗೆ ಹಾರಿ ಬಂದಿರುವ ಸಾಧ್ಯತೆ ಇದೆ.

ಈ ಸಂಬಂಧ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಬಿಸಿಡಿ ಕನ್ನಟ್ರಕ್ಷನ್ ಕಂಪನಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ವಿಮಾನ ನಿಲ್ದಾಣದ ಭದ್ರತೆ ದೃಷ್ಟಿಯಿಂದ ಇಂತಹ ನಿರ್ಲಕ್ಷ್ಯ ಅಪಾಯಕಾರಿ ಪರಿಣಾಮಕ್ಕೆ ಕಾರಣವಾಗಬಹುದು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

# ರೇಣುಕಸ್ವಾಮಿ ಕೊಲೆ ಪ್ರಕರಣ: ಕೈಬಿಡಲು ಹೈಕೋರ್ಟ್ ನಕಾರ

• ಉದಯವಾಹಿನಿ ,ಬೆಂಗಳೂರು

ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿರುವಾಗ ದೋಷಾರೋಪಗಳಿಂದ ಕೈಬಿಡಬೇಕು ಎಂದು ಹೇಗೆ ತಾನೇ ಕೋರುತ್ತೀರಿ ಎಂದು ಹೈಕೋರ್ಟ್, ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗೆ ಪ್ರಶ್ನಿಸಿದೆ. ಈ ಪ್ರಕರಣದಲ್ಲಿ ಪೊಲೀಸರು ನನ್ನ ವಿರುದ್ಧ ಹೊರಿಸಿರುವ, ಕೊಲೆ ಮತ್ತು ಕೊಲೆ ಅಪರಾಧದ ಜಂಟಿ ಹೊಣೆಗಾರಿಕೆ ಆರೋಪಗಳಿಂದ ಕೈಬಿಡಲು ವಿಚಾರಣಾ ಕೋರ್ಟ್‌ಗೆ ನಿರ್ದೇಶಿಸಬೇಕು' ಎಂದು ಕೋರಿ 14ನೇ ಆರೋಪಿ ಪ್ರದೂಷ್ ಎಸ್.ರಾವ್ ಅಲಿಯಾಸ್ ಪ್ರದೂಷ್ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ


ಉದಯವಾಹಿನಿ ಚಿತ್ರ

ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರದೂಷ್ ಪರ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ ಅವರು, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜನವರಿ ತಿಂಗಳಿಂದಲೇ ಸಂಚು ರೂಪಿಸಲಾಗಿತ್ತು ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ. ಆ ದಿನಗಳಲ್ಲಿ ಅರ್ಜಿದಾರರದ್ದು ಯಾವುದೇ ಪಾತ್ರವಿಲ್ಲ. ಘಟನೆಯ ಅಂತಿಮ ಭಾಗದಲ್ಲಿ ಅವರು ಇದ್ದರು ಮತ್ತು 30 ಲಕ್ಷ ಮೊತ್ತವನ್ನು ದರ್ಶನ್ ಕಡೆಯಿಂದ ಪಡೆದು ಬೇರೆಯವರಿಗೆ ವರ್ಗಾಯಿಸಿದ್ದರು ಎಂದು ಆರೋಪಿಸಲಾಗಿದೆ. ಹಾಗಾಗಿ, ಅರ್ಜಿದಾರರ ವಿರುದ್ಧದ ದೋಷಾರೋಪಗಳನ್ನು ಪೂರ್ಣವಾಗಿ ಕೈಬಿಡದಿದ್ದರೂ ಅಲ್ಪಮಟ್ಟಿಗೆ ಸಡಿಲಿಸಬೇಕು ಎಂದು ಕೋರಿದರು. ಇದಕ್ಕೆ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, ಪ್ರದೂಷ್ ಇತರೆ ಆರೋಪಿಗಳಿಗೆ ಪ್ರಚೋದನೆ ನೀಡಿದ್ದಾರೆ. ಕೊಲೆಯಲ್ಲಿ ಭಾಗಿಯಾಗಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಸಾಕ್ಷಿ ವಿಚಾರಣೆಯಲ್ಲಿ ಅರ್ಜಿದಾರರ ಪಾತ್ರದ ಬಗ್ಗೆ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 164ರ ಅಡಿಯಲ್ಲಿ ನೀಡಲಾದ ಹೇಳಿಕೆಯಲ್ಲಿ ಇದನ್ನೆಲ್ಲಾ ಸಾಧ್ಯಂತವಾಗಿ ವಿವರಿಸಲಾಗಿದೆ.

ಅಷ್ಟಕ್ಕೂ, ಸುಪ್ರೀಂ ಕೋರ್ಟ್ ಇವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ನ್ಯಾಯಪೀಠ, ಸುಪ್ರೀಂ ಕೋರ್ಟ್ ನಿಮ್ಮ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆಯಲ್ಲವೇ ಪ್ರಾಸಿಕ್ಯೂಷನ್ ಬಳಿ ಅರ್ಜಿದಾರರನ್ನು ವಿಚಾರಣೆಗೆ ಒಳಪಡಿಸುವಷ್ಟು ಪ್ರಮಾಣದ ಸಾಕ್ಷ್ಯಾಧಾರಗಳು ಇವೆಯಲ್ಲಾ ಹಾಗಾಗಿ, ಕೋರ್ಟ್ ಅದಕ್ಕಿಂತಲೂ ಒಂದು ಪರ್ಸೆಂಟ್ ಕೂಡಾ ಹೆಚ್ಚು ಪರಿಶೀಲಿಸುವ ಗೋಜಿಗೆ ಹೋಗುವುದಿಲ್ಲ.

# ಪಿಎಂ ಮೋದಿ ಪರ-ವಿರೋಧವಾಗಿ ಸಿದ್ದರಾಮಯ್ಯ- ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಜನತೆಯಿಂದ ಶೀಘ್ರದಲ್ಲೇ 'ಅಡ್ರೆಸ್ ಸಿಗದ ಪರಿಸ್ಥಿತಿಗೆ ತಳ್ಳಿಸಿಕೊಳ್ಳುವ ಭಾಗ್ಯ' ಗ್ಯಾರಂಟಿ

## ಸಿದ್ದು, ಬಿವೈವಿ ಟ್ವೀಟ್ ವಾರ್!

### ಆಡಳಿತ ಯಂತ್ರ ಸ್ಥಗಿತ

ಸಿದ್ದರಾಮಯ್ಯ ಅವರೇ, ಪ್ರಧಾನಿ ನರೇಂದ್ರ ಮೋದಿ ಜೀ ಎಲ್ಲಿಯೂ ತಪ್ಪಿಸಿಕೊಂಡು ಹೋಗಿರಲಿಲ್ಲ, ಸಂಸತ್ ಭವನದಲ್ಲೇ ಇದ್ದರು. ರಾಜ್ಯಸಭೆಯಲ್ಲಿ ನಿಮ್ಮ ಪಕ್ಷ ಹಾಗೂ ವಿರೋಧ ಪಕ್ಷಗಳ ನಡವಳಿಕೆ, ಧೋರಣೆಗಳನ್ನು ಬಯಲಿಗೆಳೆದು ದಿಟ್ಟತನದಿಂದ ಮಾತನಾಡಿದರು. ಲೋಕಸಭೆಯಲ್ಲಿ ನಿಮ್ಮ ಪಕ್ಷದ ಸದಸ್ಯರು ನಡೆಸಿದ ಅಸಂಸದೀಯ ನಡವಳಿಕೆ ಹಾಗೂ ಕುಚೇಷ್ಟೆಗಳ ಕುರಿತು ಮಾತನಾಡಿದರು. ವಾಸ್ತವವಾಗಿ ತಪ್ಪಿಸಿಕೊಳ್ಳುವ ಸಂಸ್ಕೃತಿ ಇದ್ದರೆ ಅದು ನಿಮ್ಮ ಕಾಂಗ್ರೆಸ್‌ನ ನೆಲೆಯಿಂದ ಉದ್ಭವಿಸಿದ್ದು. ಇದಕ್ಕೆ ಸಾಕ್ಷಿಯಾಗಿ ನಿಮ್ಮ ರಾಹುಲ್ ಅವರೇ ನಮ್ಮ ಕಣ್ಣ ಮುಂದೆ ಇದ್ದಾರೆ. ಕರ್ನಾಟಕದಲ್ಲಿ ನಿಮ್ಮ ಆಡಳಿತದ ಪ್ರತಿಫಲವೆಂಬಂತೆ ಅರಾಜಕತೆ ಸೃಷ್ಟಿಯಾಗಿದೆ. ಮುಖ್ಯಮಂತ್ರಿ ಪದವಿಯ ಸುತ್ತ ಕಳೆದ ಒಂದು ವರ್ಷದಿಂದಲೂ ದೊಂಬರಾಟ ನಡೆಯುತ್ತಿದೆ. ಇದರ ಪರಿಣಾಮವಾಗಿ ಆಡಳಿತ ಯಂತ್ರ ಸ್ಥಗಿತಗೊಂಡಿದೆ. ಭ್ರಷ್ಟಾಚಾರ, ಕಮಿಷನ್ ದಂಧೆ ತಾಂಡವವಾಡುತ್ತಿದೆ. ಜನರ ಗೋಳು ಹೇಳತೀರದಾಗಿದೆ. ಸಮಸ್ಯೆ ಬಗೆಹರಿಸಬೇಕಾದ ನಿಮ್ಮ ಹೈಕಮಾಂಡ್ ರೂವಾರಿ ರಾಹುಲ್ ಗಾಂಧಿಯವರು ಕೈಗೆ ಸಿಗದೇ ತಪ್ಪಿಸಿಕೊಂಡಿದ್ದಾರೆ.



• ಉದಯವಾಹಿನಿ ,ಬೆಂಗಳೂರು

ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಪ್ರಧಾನಿ ಮೋದಿ ಅವರು ಉತ್ತರ ನೀಡದೆ ತಪ್ಪಿಸಿಕೊಂಡಿರುವುದು ಸಂಸತ್‌ಗೆ ತೋರಿಸಿರುವ ಅಗೌರವ ಮಾತ್ರವಲ್ಲ, ಸತ್ಯವನ್ನು ಎದುರಿಸಲಾಗದ ಹೇಡಿತನವೂ ಆಗಿದೆ ಎಂದು ಸಿದ್ದರಾಮಯ್ಯ ಹೇಳಿರುವುದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ತಿರುಗೇಟು ನೀಡಿದ್ದಾರೆ.

ಟ್ವಿಟ್ ವಾರ್‌ನಲ್ಲಿ ಸಿದ್ದರಾಮಯ್ಯ ಅವರಿಗೆ ತಿವಿದಿರುವ ವಿಜಯೇಂದ್ರ, ಸಿಎಂ ಅವರೇ, ಪ್ರಧಾನಿ ಅವರು ಎಲ್ಲಿಯೂ ತಪ್ಪಿಸಿಕೊಂಡು ಹೋಗಿರಲಿಲ್ಲ, ಸಂಸತ್ ಭವನದಲ್ಲೇ ಇದ್ದರು. ರಾಜ್ಯ ಸಭೆಯಲ್ಲಿ ನಿಮ್ಮ ಪಕ್ಷ ಹಾಗೂ ವಿರೋಧ ಪಕ್ಷಗಳ ನಡವಳಿಕೆ, ಧೋರಣೆಗಳನ್ನು ಬಯಲಿಗೆಳೆದು ದಿಟ್ಟತನದಿಂದ ಮಾತನಾಡಿದರು. ಲೋಕಸಭೆಯಲ್ಲಿ ನಿಮ್ಮ ಪಕ್ಷದ ಸದಸ್ಯರು ನಡೆಸಿದ ಅಸಂಸದೀಯ ನಡವಳಿಕೆ ಹಾಗೂ ಕುಚೇಷ್ಟಗಳ ಕುರಿತು ಮಾತನಾಡಿದರು. ವಾಸ್ತವವಾಗಿ ತಪ್ಪಿಸಿಕೊಳ್ಳುವ ಸಂಸ್ಕೃತಿ ಇದ್ದರೆ ಅದು ನಿಮ್ಮ ಕಾಂಗ್ರೆಸ್‌ನ ನೆಲೆಯಿಂದ ಉದ್ಭವಿಸಿದ್ದು ಎಂದು ತಿರುಗೇಟು ಕೊಟ್ಟಿದ್ದಾರೆ.

ಇದಕ್ಕೆ ಸಾಕ್ಷಿಯಾಗಿ ನಿಮ್ಮ ರಾಹುಲ್ ಗಾಂಧಿ ಅವರೇ ನಮ್ಮ ಕಣ್ಣ ಮುಂದೆ ಇದ್ದಾರೆ. ಕರ್ನಾಟಕದಲ್ಲಿ ನಿಮ್ಮ ಆಡಳಿತದ ಪ್ರತಿಫಲವೆಂಬಂತೆ ಅರಾಜಕತೆ ಸೃಷ್ಟಿಯಾಗಿದೆ. ಮುಖ್ಯಮಂತ್ರಿ ಪದವಿಯ ಸುತ್ತ ಕಳೆದ ಒಂದು ವರ್ಷದಿಂದಲೂ ದೊಂಬರಾಟ ನಡೆಯುತ್ತಿದೆ. ಇದರ ಪರಿಣಾಮವಾಗಿ ಆಡಳಿತ ಯಂತ್ರ ಸ್ಥಗಿತಗೊಂಡಿದೆ. ಭ್ರಷ್ಟಾಚಾರ, ಕಮೀಷನ್ ದಂಧೆ ತಾಂಡವವಾಡುತ್ತಿದೆ. ಜನರ ಗೋಳು ಹೇಳತೀರದಾಗಿದೆ. ಸಮಸ್ಯೆ ಬಗೆಹರಿಸಬೇಕಾದ ನಿಮ್ಮ ಹೈಕಮಾಂಡ್ ರೂವಾರಿ ರಾಹುಲ್ ಗಾಂಧಿಯವರು ಕೈಗೆ ಸಿಗದೇ 'ತಪ್ಪಿಸಿಕೊಂಡಿದ್ದಾರೆ. ಅವರನ್ನು ಹುಡುಕಿಕೊಂಡು ಉಪ-ಮುಖ್ಯಮಂತ್ರಿ ಡಿಕೆಶಿ ಅವರು ದಿನ ಬಿಟ್ಟು ದಿನ ದೈನೇಸಿ ಸ್ಥಿತಿಯಲ್ಲಿ ದೆಹಲಿಗೆ ಅಲೆಯುತ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ. ಮೊದಲು ನೀವು, ಉಪ ಮುಖ್ಯಮಂತ್ರಿ, ಸೇರಿ ರಾಹುಲ್ ಗಾಂಧಿಯವರು ಎಲ್ಲಿದ್ದಾರೋ ಹುಡುಕಿಕೊಳ್ಳಿ. AJ ಸ್ಥಾನದ ಕಗ್ಗಂಟನ್ನು ಬಿಡಿಸಿಕೊಳ್ಳಿ, ಕರ್ನಾಟಕ ಜನತೆಯ ಶಾಪದಿಂದ ಮುಕ್ತರಾಗಿ. ಇಲ್ಲವಾದರೆ ಅತೀ ಶೀಘ್ರದಲ್ಲೇ ಕರ್ನಾಟಕ ಜನತೆ ನಿಮಗೆ ಮತ್ತು ನಿಮ್ಮ ಕಾಂಗ್ರೆಸ್ ಗೆ ಅಡ್ರೆಸ್ ಸಿಗದ ಪರಿಸ್ಥಿತಿಗೆ ತಳ್ಳಸಿ ಕೊಳ್ಳುವ ಭಾಗ್ಯ ನಿಮಗೆ ಗ್ಯಾರಂಟಿಯಾಗಲಿದೆ ಎಂದು ಎಚ್ಚರಿಸಿದ್ದಾರೆ.


ಉದಯವಾಹಿನಿ ಚಿತ್ರ








### ವಿಮರ್ಶೆಗಳು ಹರಿದುಬರುತ್ತಿವೆ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಸಹಾಯಕ ಮಂತ್ರಿ, ಸ್ಥಾನಮಾನವನ್ನು ಹೊಂದಿರುವ ಒಟ್ಟು ವ್ಯಕ್ತಿಗಳ ಸಂಖ್ಯೆ 149ಕ್ಕೆ ಹೆಚ್ಚಳವಾಗಿದೆ. ಆದರೆ, ಸಂವಿಧಾನದ ಪ್ರಕಾರ ಒಂದು ರಾಜ್ಯದಲ್ಲಿ ಮಂತ್ರಿಗಳ ಸಂಖ್ಯೆಯನ್ನು 34ಕ್ಕೆ ಮಿತಿಗೊಳಿಸಲಾಗಿದೆ. ಸಂವಿಧಾನ ಏನು ಹೇಳುತ್ತೆ ಅಂತ ನೋಡುವುದಾದರೆ, ಅಧಿಕೃತವಾಗಿ 32 ಮಂತ್ರಿಗಳಿಗೆ ಮಾತ್ರ ಅವಕಾಶ ನೀಡಿದೆ. ಆದರೆ ಆ ಮಿತಿಯನ್ನು ಮೀರಿ ಹೊರಗಿರುವ ಮತ್ತೊಂದು 117 ಮಂದಿಗೆ ಕ್ಯಾಬಿನೇಟ್ ಸ್ಥಾನಮಾನಗಳ ಪ್ರೋಟೋಕಾಲ್ ಅನ್ನು ಸರ್ಕಾರ ನೀಡಿದೆ. ಈ ಕ್ರಮಕ್ಕೆ ಪ್ರತಿಪಕ್ಷ ಪಕ್ಷಗಳು, ಆರ್ಥಿಕ ತಜ್ಞರಿಂದ ತೀವ್ರ ಆಕ್ಷೇಪಣೆಗಳು ವ್ಯಕ್ತಪಡಿಸುತ್ತಿದ್ದಾರೆ.

### ಸಿಗದ ಪರಿಸ್ಥಿತಿಗೆ ಭಾಗ್ಯ ಗ್ಯಾರಂಟಿ




ಕರ್ನಾಟಕ ಜನತೆಯ ಶಾಪದಿಂದ ಮುಕ್ತರಾಗಿ. ಇಲ್ಲವಾದರೆ ಅತಿ ಶೀಘ್ರದಲ್ಲೇ ಕರ್ನಾಟಕ ಜನತೆ ನಿಮಗೆ ಮತ್ತು ನಿಮ್ಮ ಕಾಂಗ್ರೆಸ್‌ಗೆ ಅಡ್ರೆಸ್ ಸಿಗದ ಪರಿಸ್ಥಿತಿಗೆ ತಳ್ಳಿಸಿಕೊಳ್ಳುವ ಭಾಗ್ಯ ನಿಮಗೆ ಗ್ಯಾರಂಟಿಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸಿಎಂ ಸಿದ್ದರಾಮಯ್ಯನವರಿಗೆ ಎಚ್ಚರಿಕೆ ನೀಡಿದ್ದಾರೆ. ಎಕ್ಸ್‌ನಲ್ಲಿ ಸುದೀರ್ಘ ಪೋಸ್ಟ್ ಮಾಡಿರುವ ಅವರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದಿನ ಬಿಟ್ಟು ದಿನ ದೈನ್ಯಸ್ಥಿತಿಯಲ್ಲಿ ದೆಹಲಿಗೆ ಅಲೆಯುತ್ತಿದ್ದಾರೆ. ಮೊದಲು ನೀವು, ಉಪಮುಖ್ಯಮಂತ್ರಿ ಸೇರಿ ರಾಹುಲ್ ಗಾಂಧಿಯವರು ಎಲ್ಲಿದ್ದಾರೋ ಹುಡುಕಿಕೊಳ್ಳಿ.

## ಸಾಲ ಕೊಡಿಸುವುದಾಗಿ ನಂಬಿಸಿ ಉದ್ಯಮಿಗಳಿಂದ ಕೋಟ್ಯಂತರ ರೂಪಾಯಿ ವಂಚನೆ ಪ್ರಕರಣ: ಆರೋಪಿ ಮನೆ ಮೇಲೆ ಸಿಐಡಿ ಪೊಲೀಸರ ದಾಳಿ


• ಉದಯವಾಹಿನಿ ,ಬೆಂಗಳೂರು

ಸಾಲ ಕೊಡಿಸುವ ಸೋಗಿನಲ್ಲಿ ಉದ್ಯಮಿ2ಗಳಿಂದ ಕೋಟ್ಯಂತರ ರೂಪಾಯಿ ಹಣ ಪಡೆದು ವಂಚಿಸುತ್ತಿದ್ದ ಆರೋಪ ಪ್ರಕರಣ ಸಂಬಂಧ ಆರೋಪಿ ಪೀಟರ್ ಕ್ಯಾಡಿ ಎಂಬುವರ ಮನೆ ಮೇಲೆ ಸಿಐಡಿ ಆರ್ಥಿಕ ಅಪರಾಧಗಳ ವಿಭಾಗದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಪುಲಕೇಶಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕೋಲ್ಸ್ ಪಾರ್ಕ್ ಬಳಿಯಿರುವ ಪೀಟರ್ ಕ್ಯಾಡಿ ಮನೆ ಮೇಲೆ ದಾಳಿ ಮಾಡಿದ ಅಧಿಕಾರಿಗಳು, ಮಹತ್ವದ ದಾಖಲಾತಿಗಳನ್ನ ವಶಕ್ಕೆ ಪಡೆದು ಪರಿಶೀಲಿಸುತ್ತಿದ್ದಾರೆ.ಆರೋಪಿ ವಿರುದ್ಧ ಕಳೆದ ಆಗಸ್ಟ್‌ನಲ್ಲಿ ಬಿ.ಸಿ.ಸುಬ್ಬರಾವ್ ಎಂಬುವರು 96 ಲಕ್ಷ ವಂಚಿಸಿರುವುದಾಗಿ ದೂರು ನೀಡಿದ್ದರು. ಆರೋಪಿ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ವಂಚನೆ ಪ್ರಕರಣ ದಾಖಲಾಗಿತ್ತು.

ಇದರ ಗಂಭೀರತೆ ಅರಿತು ಸಿಐಡಿ ಪ್ರಕರಣ ವರ್ಗಾವಣೆಯಾಗಿತ್ತು.

**ದೂರುದಾರರ ಆರೋಪ ಏನು?:** ನಗರದ ಚೋಳನಾಯಕನಹಳ್ಳಿ ನಿವಾಸಿ ಸುಬ್ಬರಾವ್ ಅವರು ಕೋಲ್ಸ್ ಪಾರ್ಕ್ ಬಳಿ 2016ರಲ್ಲಿ ನಿವೇಶನ ಖರೀದಿಸಿದ್ದರು.

ಈ ಜಾಗಕ್ಕೆ ಖಾತಾ ಮಾಡಿಸಲು ಪರಿಚಯಸ್ಥರ ಮೂಲಕ ರಿಯಲ್ ಎಸ್ಟೇಟ್ ವ್ಯವಹಾರ ಹಾಗೂ ಸ್ಕ್ರಾಪ್ ಡೀಲರ್ ಆಗಿದ್ದ ಪೀಟರ್ ಕ್ಯಾಡಿನನ್ನ ಸಂಪರ್ಕಿಸಿದ್ದರು. ಶುಲ್ಕ ರೂಪದಲ್ಲಿ 8 ಲಕ್ಷ ಹಣ ಪಡೆದಿದ್ದ.


ಉದಯವಾಹಿನಿ ಚಿತ್ರ

# ಬೆಂಗಳೂರಿನಲ್ಲಿ 25 ಲಕ್ಷ ಆಸ್ತಿಗಳ ಡಿಜಿಟಲೀಕರಣ, 9 ಲಕ್ಷ ಇ-ಖಾತಾ ವಿತರಣೆ

• ಉದಯವಾಹಿನಿ ,ಬೆಂಗಳೂರು

ನಗರದಾದ್ಯಂತ ಇದುವರೆಗೂ 25 ಲಕ್ಷ ಆಸ್ತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. 9 ಲಕ್ಷ ಇ-ಖಾತಾಗಳನ್ನು ಜನರಿಗೆ ಹಂಚಿಕೆ ಮಾಡಲಾಗಿದೆ. ಉಚಿತವಾಗಿ, ಇ-ಖಾತಾ ಅಭಿಯಾನ ಪ್ರಾರಂಭ ಮಾಡಲು ಎಲ್ಲಾ ಪಾಲಿಕೆಗಳಿಗೆ ಸೂಚನೆ ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಖಾತಾ ಪರಿವರ್ತನೆ ಮಾಡಿಸಿಕೊಂಡವರಿಗೆ ಸೋಮವಾರ ಖಾತಾ ಪತ್ರ ವಿತರಣೆ ಮಾಡಿ ಅವರು ಸುದ್ದಿಗಾರರರೊಂದಿಗೆ ಜತೆ ಮಾತನಾಡಿದರು.

ಆಸ್ತಿ ದಾಖಲೆಗಳ ಡಿಜಿಟಲೀಕರಣ ಈ ವರ್ಷದ ಪ್ರಮುಖ ತೀರ್ಮಾನ. ಈ ಹಿಂದೆ ಕೃಷಿ ಭೂಮಿ ಡಿಜಿಟಲೀಕರಣಕ್ಕೆ ಭೂಮಿ ಯೋಜನೆ ತರಲಾಗಿತ್ತು. ನಮ್ಮ ಬೆಂಗಳೂರಿನ ಎಲ್ಲಾ ಆಸ್ತಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಇ-ಖಾತೆ ವ್ಯವಸ್ಥೆ ತರಲು


ಉದಯವಾಹಿನಿ ಚಿತ್ರ

ಉದ್ದೇಶಿಸಿದ್ದೇವೆ. ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಕಾವೇರಿ ಸಾಫ್ಟ್‌ವೇರ್‌ನಲ್ಲಿ ದಾಖಲೆಗಳು ಆಧಾರ್ ಜೊತೆ ಲಿಂಕ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದರು.

ಯೂನಿಫಾರ್ಮ್ ಲ್ಯಾಂಡ್ ರೆಕಾರ್ಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್' ಮೂಲಕ ಬಿ ಖಾತಾದಿಂದ ಎ ಖಾತೆ ನೀಡಲಾಗುತ್ತದೆ. ಈಗಾಗಲೇ ಏಳು ಸಾವಿರ ಅರ್ಜಿಗಳು ಬಂದಿವೆ. ಇದಕ್ಕೆ ಇನ್ನೂ ಲಕ್ಷಗಟ್ಟಲೆ ಅರ್ಜಿಗಳು ಬರಬೇಕಿದೆ. ಈಗಾಗಲೇ ಅರ್ಜಿ ಹಾಕಿರುವವರಿಗೆ 15 ದಿನದಲ್ಲಿ ಖಾತಾ ನೀಡಲು ಸಮಯ ನಿಗದಿಪಡಿಸಲಾಗಿದೆ ಎಂದರು.ಅನೇಕರು ಕ್ರಯಪತ್ರ ಮಾತ್ರ ಹೊಂದಿದ್ದು, ಖಾತೆಯನ್ನೇ ಪಡೆದಿಲ್ಲ. 1.20 ಲಕ್ಷ ಜನ ಈ ಬಗ್ಗೆ ಅರ್ಜಿ ನೀಡಿದ್ದಾರೆ. 60 ಸಾವಿರ ಜನರ ಅರ್ಜಿ ಒಪ್ಪಿತವಾಗಿದೆ. 40 ಸಾವಿರ ಅರ್ಜಿ ರದ್ದಾಗಿದೆ. 15 ಸಾವಿರ ಅರ್ಜಿಗಳು ವಿವಿಧ ಹಂತದಲ್ಲಿವೆ. ಅರ್ಜಿಗಳು ಏಕೆ ತಿರಸ್ಕೃತವಾಗಿವೆ ಎಂದು ಮತ್ತೊಮ್ಮೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದರು.

### 17 ಸಾವಿರ ನಿವೇಶನ ಹಂಚಿಕೆ

**ನಿವೇಶನಗಳಿಗೆ ಅರ್ಜಿ ಕರೆ**

ಶಿವರಾಮ ಕಾರಂತ ಬಡಾವಣೆಯಲ್ಲಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡಿ ಎಂದು ನ್ಯಾಯಾಲಯ ತಿಳಿಸಿದೆ. 34,977 ನಿವೇಶನ ರಚಿಸಲಾಗಿದೆ. 17 ಸಾವಿರ ನಿವೇಶನಗಳನ್ನು ಭೂ ಮಾಲೀಕರಿಗೆ ನೀಡಬೇಕು. ಶೇ 75ರಷ್ಟು ಮಾಲೀಕರು ಇದಕ್ಕೆ ತಯಾರಿದ್ದಾರೆ. ಮಿಕ್ಕ ಮಾಲೀಕರ ಬಳಿ ನಾನು ಮನವಿ ಮಾಡುತ್ತಿದ್ದೇನೆ. ಬಿಡಿಎಗೆ 50 ವರ್ಷ ತುಂಬುತ್ತಿದ್ದು, 17 ಸಾವಿರ ಜನರಿಗೂ ಒಂದೇ ದಿನ ಹಂಚಿಕೆ ಮಾಡುವ ಕಾರ್ಯಕ್ರಮ ನಡೆಸಲಾಗುವುದು. ಉಳಿದ ನಿವೇಶನಗಳಿಗೆ ಅರ್ಜಿ ಕರೆದು ನೀಡಲಾಗುವುದು ಎಂದು ಡಿ.ಕೆ.ಶಿ ಹೇಳಿದರು.

## ಸಂಬಂಧಿಯ ಮನೆಗೆ ಸ್ನೇಹಿತರನ್ನು ಕಳುಹಿಸಿ ಸುಲಿಗೆ: ಆರೋಪಿಗಳನ್ನು ಪೊಲೀಸರಿಗೆ ಹಿಡಿದುಕೊಟ್ಟ ಆಟೋ ಚಾಲಕ

• ಉದಯವಾಹಿನಿ ,ಬೆಂಗಳೂರು

ಸ್ನೇಹಿತನ ಅಣತಿಯಂತೆ ಆತನ ಸಂಬಂಧಿ ಮನೆಗೆ ನುಗ್ಗಿ ಸುಲಿಗೆ ಮಾಡಿದ ಬಳಿಕ ಪ್ರಯಾಣಿಸುತ್ತಿದ್ದ ಆಟೋದಲ್ಲಿ ಮಚ್ಚು ಹಿಡಿದಿರುವುದನ್ನು ಕಂಡ ಚಾಲಕ ಸಮಯಪ್ರಜ್ಞೆ ಮೆರೆದು ಪೊಲೀಸರಿಗೆ ಹಿಡಿದು ಕೊಟ್ಟಿರುವ ಘಟನೆ ಬೆಂಗಳೂರಲ್ಲಿ ನಡೆದಿದೆ.

ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸುಲಿಗೆ ಮಾಡಿರುವುದು ಗೊತ್ತಾಗಿದೆ. ಬಳಿಕ ಕೃತ್ಯ ನಡೆದ ಸ್ಥಳ ಆಧರಿಸಿ ಆರೋಪಿಯನ್ನು ಗೋವಿಂದಪುರ ಪೊಲೀಸರಿಗೆ ಹೈಗ್ರೌಂಡ್ಸ್ ಪೊಲೀಸರಿಗೆ ಒಪ್ಪಿಸಿದ್ದಾರೆ. ತನಿಖೆಯಲ್ಲಿ ಸುಲಿಗೆ ಮಾಡಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಮೊಹಮ್ಮದ್ ಶಾಹಬಾಜ್ ಖಾನ್, ಸೂರಜ್ ಎಂಬವರನ್ನು ಬಂಧಿಸಲಾಗಿದೆ. ಪ್ರಕರಣದ ಸೂತ್ರಧಾರಿಯಾಗಿರುವ ಅಪ್ರೀಜ್ ಎಂಬಾತ ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಗೋವಿಂದಪುರ ಠಾಣಾ ವ್ಯಾಪ್ತಿಯಲ್ಲಿ ನೆಲೆಸಿದ್ದ ಸಮೀರ್ ಅವರ ಸೋದರ ಸಂಬಂಧಿಯಾಗಿರುವ ಅಪ್ರೀಜ್, ಆಗಾಗ ಮನೆಗೆ ಹೋಗಿ ಬರುತ್ತಿದ್ದ. ಇತ್ತೀಚೆಗೆ ಆಸ್ತಿ ಮಾರಾಟದಿಂದ ಸಮೀರ್‌ಗೆ ಹಣ ಬಂದಿರುವುದನ್ನು ಅಪ್ರೀಜ್ ಅರಿತುಕೊಂಡಿದ್ದ. ಈ ಹಣ ಲಪಾಟಿಸಲು ಸಂಚು ರೂಪಿಸಿದ್ದ. ಇದಕ್ಕಾಗಿ ತನ್ನ ಸ್ನೇಹಿತರಾಗಿದ್ದ ಶಾಹಬಾಜ್ ಹಾಗೂ ಸೂರಜ್‌ಗೆ ವಿಷಯ ತಿಳಿಸಿ, ಸುಲಿಗೆ ಮಾಡಲು ತಿಳಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

**ಸ್ನೇಹಿತನ ಅಣತಿಯಂತೆ ಕಳ್ಳತನಕ್ಕೆ ಹೋದ ಆರೋಪಿಗಳು:** ಅಪ್ರೀಜ್


ಉದಯವಾಹಿನಿ ಚಿತ್ರ

ಅಣತಿಯಂತೆ ಶಾಹಬಾಜ್ ಹಾಗೂ ಸೂರಜ್‌ಜನವರಿ 27ರಂದು ಸಮೀರ್ ಇಲ್ಲದಿರುವುದನ್ನು ನೋಡಿಕೊಂಡು ಮನೆಗೆ ನುಗ್ಗಿದ್ದರು. ಮನೆಯಲ್ಲಿದ್ದ ಸಮೀರ್ ಪತ್ನಿ ಮೇಲೆ ಹಲ್ಲೆ ಮಾಡಿ ಮನೆಯಲ್ಲಿದ್ದ 48 ಗ್ರಾಂ ಚಿನ್ನ ಹಾಗೂ 4 ಲಕ್ಷ ನಗದು ದೋಚಿ ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದರು.

ಈ ಮಧ್ಯೆ ಸುಲಿಗೆ ಮಾಡಿದ್ದ ಶಹಬಾಜ್, ಕಂಟ್ಮೋನೆಂಟ್ ಬಳಿ ಆಟೋದಲ್ಲಿ ಪ್ರಯಾಣಿಸುತ್ತಿದ್ದ. ಆರೋಪಿ ಬಳಿ ಮಚ್ಚು ಇರುವುದು ಆಟೋದಲ್ಲಿ ಕನ್ನಡಿಯಲ್ಲಿ ಚಾಲಕ ಗಮನಿಸಿದ್ದ. ಇದರಿಂದ ಆತನನ್ನು ಪೊಲೀಸರಿಗೆ ಹಿಡಿದುಕೊಳ್ಳಲು ಯೋಜಿಸಿದ್ದ. ಮಾರ್ಗ ಮಧ್ಯೆ ಹೊಯ್ಸಳ ವಾಹನ ನಿಂತಿರುವುದನ್ನು ಕಂಡ ಚಾಲಕ ಉದ್ದೇಶಪೂರ್ವವಾಗಿ ವಾಹನಕ್ಕೆ ಗುದ್ದಿ, ಆಟೋ ಕೆಳಗಿಳಿದು ಮಚ್ಚು ಇರುವ ಬಗ್ಗೆ ಕೂಗಿಕೊಂಡಿದ್ದ. ಕೂಡಲೇ ಆರೋಪಿಯನ್ನು ಕಂಡು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಸುಲಿಗೆ ಕೃತ್ಯ ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಚಂದನ್ ಹತ್ಯೆ: ವಿದೇಶಾಂಗ ಇಲಾಖೆ ಜೊತೆ ಸಂಪರ್ಕ ಪರಮೇಶ್ವರ

• ಉದಯವಾಹಿನಿ ,ಬೆಂಗಳೂರು

ಕೆನಡಾದಲ್ಲಿ ಅಪರಿಚಿತರಿಂದ ಗುಂಡಿನ ದಾಳಿಗೆ ಒಳಗಾಗಿ ಮೃತಪಟ್ಟಿರುವ ನೆಲಮಂಗಲ ಮೂಲದ ಚಂದನ್ ಕುಮಾರ್ ಅವರ ಪಾರ್ಥಿವ ಶರೀರವನ್ನು ಆದಷ್ಟು ಶೀಘ್ರ ಭಾರತಕ್ಕೆ ತರಲು ರಾಜ್ಯ ಪೊಲೀಸ್ ಇಲಾಖೆಯ ಮೂಲಕ ಕೇಂದ್ರ ವಿದೇಶಾಂಗ ಸಚಿವಾಲಯದ ಸಹಕಾರ ಕೋರಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ಈ ಕುರಿತು ಅವರು ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡು ಮೃತರಿಗೆ ಸಂತಾಪ ಸೂಚಿಸಿದ್ದಾರೆ.

ಕೆನಡಾ ದೇಶದ ಟೊರಾಂಟೋ ನಗರದಲ್ಲಿ ಬೆಂಗಳೂರಿನ ನೆಲಮಂಗಲ ಮೂಲದ ಚಂದನ್ ಕುಮಾರ್ ಅವರು ಗುಂಡಿನ ದಾಳಿಯಲ್ಲಿ ಹತ್ಯೆಗೀಡಾಗಿರುವ ಸುದ್ದಿ ಮನಸ್ಸಿಗೆ ಅತೀವ ನೋವನ್ನುಂಟು ಮಾಡಿದೆ ಎಂದಿದ್ದಾರೆ.ಮೃತರಿಗೆ ಭಾವಪೂರ್ಣ ನಮನಗಳು. ಭಗವಂತನು ಮೃತರ ಆತ್ಮಕ್ಕೆ ಚಿರ ಶಾಂತಿ ಕರುಣಿಸಲಿ. ಕುಟುಂಬ ವರ್ಗದವರಿಗೆ ಈ ನೋವನ್ನು ಅರಗಿಸಿಕೊಳ್ಳುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ನೆಲೆಸಿರುವ ದುಃಖತಪ್ತ ಕುಟುಂಬದವರಿಗೆ ನೆರವು ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಚಂದನ್ ಕುಮಾರ್ ಹತ್ಯೆ ಪ್ರಕರಣವನ್ನು ಸೂಕ್ತ ತನಿಖೆ ನಡೆಸಿ, ನ್ಯಾಯ ಒದಗಿಸುವಂತೆ ಕೇಂದ್ರ ವಿದೇಶಾಂಗ ಸಚಿವಾಲಯದ ಮೂಲಕ ಕೆನಡಾ ಸರ್ಕಾರವನ್ನು ಒತ್ತಾಯಿಸುತ್ತೇನೆ.

## ಸಾಮಾಜಿಕ ಜಾಲತಾಣ ಪೋಸ್ಟ್ ಆಧರಿಸಿ ಕೇಸು ಹಾಕುವ ಮುನ್ನ ಈ ಅಂಶಗಳನ್ನು ಪರಿಶೀಲಿಸಿ: ಡಿಜಿಐಜಿಪಿ ಮಾರ್ಗಸೂಚಿ

• ಉದಯವಾಹಿನಿ ,ಬೆಂಗಳೂರು

ಮಾನಹಾನಿ, ಆಕ್ಷೇಪಾರ್ಹ ಹೇಳಿಕೆ ಸೇರಿದಂತೆ ಪ್ರಚೋದಿಸುವ ವ್ಯಕ್ತಿಗಳ ಬಗ್ಗೆ ಎಫ್‌ಐಆರ್ ದಾಖಲಿಸಿಕೊಳ್ಳುವ ಕುರಿತಂತೆ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಪೊಲೀಸ್ ಇಲಾಖೆ ಮಾರ್ಗಸೂಚಿ ಹೊರಡಿಸಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ. ಎನ್.ಸಲೀಂ ಅವರು ಆದೇಶ ಹೊರಡಿಸಿದ್ದು, ಸೋಷಿಯಲ್ ಮೀಡಿಯಾದಲ್ಲಿರುವ ಪೋಸ್ಟ್ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳುವಾಗ ಮಾರ್ಗಸೂಚಿಯಲ್ಲಿರುವ ಎಂಟು ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲಾ ಪೊಲೀಸ್ ಸಿಬ್ಬಂದಿಗೆ ತಾಕೀತು ಮಾಡಿದ್ದಾರೆ.



ದೂರಿನಲ್ಲಿ ಉಲ್ಲೇಖಿತ ಆಪಾದನೆಗಳು ಮೇಲ್ನೋಟಕ್ಕೆ ನಿಜವಾಗಿರಬೇಕು. ಈ ಬಗ್ಗೆ ಪ್ರಾಥಮಿಕ ವಿಚಾರಣೆಯ ಬಳಿಕವಷ್ಟೇ ಪ್ರಕರಣ ದಾಖಲಿಸಬೇಕು. ದ್ವೇಷ ಬಿತ್ತುವುದು, ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವುದು ಅಥವಾ ದೇಶದ್ರೋಹದಂತಹ ಆರೋಪಗಳಿದ್ದಾಗ, ಹಿಂಸಾಚಾರಕ್ಕೆ ಪ್ರಚೋದನೆ ನೀಡುವಂತಹ ಸ್ಪಷ್ಟ ಸಾಕ್ಷ್ಯಗಳಿದ್ದರೆ ಮಾತ್ರ ಪ್ರಕರಣ ದಾಖಲಿಸಬೇಕು. ರಾಜಕೀಯವಾಗಿ ಕಟುಟೀಕೆ, ಆಕ್ಷೇಪಾರ್ಹ ಹೇಳಿಕೆ ಆಧರಿಸಿ ಯಾಂತ್ರಿಕವಾಗಿ ಕೇಸ್ ಮಾಡಬಾರದು. ಸಂವಿಧಾನದ 19 (1)ವಾಕ್ ಸ್ವಾತಂತ್ರ್ಯ ಅವಕಾಶ ನೀಡಬೇಕು. ಪೋಸ್ಟ್‌ನಿಂದ ಶಾಂತಿಗೆ ಭಂಗ ಸಾಧ್ಯತೆ ಕಂಡುಬಂದರೆ ಮಾತ್ರ ಕಾನೂನು ಕ್ರಮ ಕೈಗೊಳ್ಳಬೇಕು. ಮಾನಹಾನಿ ಅಸಂಜ್ಞೇಯ ಅಪರಾಧ' ಆಗಿರುವುದರಿಂದ ಪೊಲೀಸರು ನೇರವಾಗಿ ಎಫ್‌ಐಆರ್ ದಾಖಲಿಸುವಂತಿಲ್ಲ. ದೂರುದಾರರಿಗೆ ನ್ಯಾಯಾಲಯದ (ಮ್ಯಾಜಿಸ್ಟ್ರೇಟ್) ಮೊರೆ ಹೋಗಲು ಸೂಚಿಸಬೇಕು. ರಾಜಕೀಯ ಆಧಾರಿತ ಪೋಸ್ಟ್ ಸಂಬಂಧಿಸಿದಂತೆ ಕಾನೂನು ಕ್ರಮ ಕೈಗೊಳ್ಳುವ ಮುನ್ನ ಸರ್ಕಾರಿ ಅಭಿಯೋಜಕರೊಂದಿಗೆ ಚರ್ಚಿಸಬೇಕು. ಅನಗತ್ಯ ಹಾಗೂ ಯಾಂತ್ರಿಕವಾಗಿ ಯಾರನ್ನೂ ಬಂಧಿಸದಂತೆ ಪೊಲೀಸರಿಗೆ ತಿಳಿಸಲಾಗಿದೆ. ಬರುವ ದೂರುಗಳು ಸುಳ್ಳು, ದ್ವೇಷಪೂರಿತ ಅಥವಾ ರಾಜಕೀಯ ಪ್ರೇರಿತ ಎಂದು ಕಂಡುಬಂದರೆ, ಅಂತಹ ಪ್ರಕರಣಗಳನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಸೆಕ್ಷನ್ 176(1) ಅಡಿಯಲ್ಲಿ ಮುಕ್ತಾಯಗೊಳಿಸಬೇಕು.

> ವ್ಯಕ್ತಿಗಳ ವಿರುದ್ಧ ಮಾನಹಾನಿಯಾಗಿದೆ ಎಂದು ದೂರುವ ವ್ಯಕ್ತಿಯಿಂದ ಪ್ರಕರಣ ದಾಖಲಿಸಿಕೊಳ್ಳಬೇಕು. ಗಂಭೀರ ಆಪಾದನೆಗಳು ಬಂದಾಗ ಮಾತ್ರ ಅನ್ಯರಿಂದ ದೂರು ಬಂದರೆ ಪರಿಗಣಿಸಬಹುದು. — ಎಂ.ಎನ್.ಸಲೀಂ ರಾಜ್ಯ ಪೊಲೀಸ್ ಮಹಾನಿರ್ದೇಶಕ

# ರಾಜ್ಯ ಕಂಡ ನಿಷ್ಠಾವಂತ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ

• ಉದಯವಾಹಿನಿ, ರಾಮನಗರ

ರಾಮನಗರದಲ್ಲಿ ಜನಿಸಿದ ಕೆಂಗಲ್ ಹನುಮಂತಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅತ್ಯಂತ ಪ್ರಾಮಾಣಿಕ ಹಾಗೂ ದಕ್ಷ ಆಡಳಿತವನ್ನು ನೀಡಿದರು. ಇವರ ಆಡಳಿತ ಮತ್ತು ಸರಳ ರಾಜಕಾರಣ ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಿದೆ ಎಂದು ಹಿರಿಯ ಸಾಹಿತಿ ಪ್ರೊ. ಎಂ .ಶಿವನಂಜಯ ಸ್ಮರಿಸಿದರು. ನಗರದ ಪಟೇಲ್ ಆಂಗ್ಲಶಾಲೆಯಲ್ಲಿ ಜಿಲ್ಲಾ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ಪಟೇಲ್ ಆಂಗ್ಲಶಾಲೆ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಕೆಂಗಲ್ ಹನುಮಂತಯ್ಯ ನವರ 118ನೇ ಜನ್ಮದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ಹಿಂದಿನ ಕರ್ನಾಟಕ ರಾಜ್ಯದ ಚುನಾಯಿತ ಮೊದಲ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ರವರು ಇಂದಿನ ಮಾದರಿ


ಉದಯವಾಹಿನಿ ಚಿತ್ರ

ವಿಧಾನಸೌಧ ಕಟ್ಟಡ ಕಟ್ಟುವಾಗ ಜೈಲಿನ ಕಾರ್ಮಿಕರನ್ನು ಬಳಸಿಕೊಂಡು ಒಂದು ವಿಶಿಷ್ಟ ಮಾದರಿ ವಿಧಾನಸೌಧ ಕಟ್ಟಿದ್ದು ಒಂದು ಹೆಮ್ಮೆಯ ವಿಷಯವಾಗಿದೆ. ಇಂದು ಕನ್ನಡ ನಾಡು ಮತ್ತು ನುಡಿಗಾಗಿ ಕನ್ನಡ ಸಂಸ್ಕೃತಿ ಇಲಾಖೆಯ ಸ್ಥಾಪಿಸಿದ ಕೀರ್ತಿ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲುತ್ತದೆ. ಆದರೆ ಅದೇ ಇಲಾಖೆ ಇವರ ಜನ್ಮದಿನವನ್ನು ಸಹ ಆಚರಿಸುತ್ತಿಲ್ಲ. ಇವರ ಕಾಲದಲ್ಲಿ ಕುವೆಂಪುರವರಿಗೆ ರಾಷ್ಟ್ರಕವಿ ಪ್ರಶಸ್ತಿ ದೊರೆತಿದ್ದು ಒಂದು ಹೆಮ್ಮೆಯ ವಿಷಯವಾಗಿದೆ ಎಂದರು. ರಾಮನಗರದಲ್ಲಿ ಕೆಂಗಲ್ ಹನುಮಂತಯ್ಯ ಅವರ ಹೆಸರು ಉಳಿಯಬೇಕೆಂದು ಅವರ ಪುತ್ಥಳಿಯನ್ನ ಸತತ ಒಂಬತ್ತು ವರ್ಷಗಳ ಕಾಲ ಹೋರಾಟ ನಡೆಸಿ ಹಳೆ ಬಸ್ ನಿಲ್ದಾಣದ ಬಳಿ ಎಂಟುವರೆ ಅಡಿ ಕಂಚಿನ ಪ್ರತಿಮೆಯನ್ನ ಸ್ಥಳೀಯ ಜನರ ಸಹಾಯದಿಂದ ಸ್ಥಾಪಿಸಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ. ಹನುಮಂತಯ್ಯ ಅವರು ಸಂವಿಧಾನ ರಚನೆಯಲ್ಲಿ ಒಬ್ಬ ವಕೀಲರಾಗಿ ಸ್ಥಾನ ಪಡೆದಿದ್ದು ರಾಜ್ಯದ ಹೆಮ್ಮೆಯ ವಿಷಯವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ಪಟೇಲ್ ಆಂಗ್ಲಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ಸಿ. ರಾಜು ಮಾತನಾಡಿ, ಜಿಲ್ಲಾ ಆಡಳಿತ ಹಾಗೂ ರಾಜ್ಯ ಸರ್ಕಾರ ಕೆಂಗಲ್ ಹನುಮಂತಯ್ಯ ನವರು ಹುಟ್ಟಿದ ದಿನದಂದು ಅವರ ಜನ್ಮ ದಿನಾಚರಣೆಯನ್ನ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಮತ್ತು ಕಚೇರಿಗಳಲ್ಲಿ ಆಚರಿಸುವಂತೆ ಕ್ರಮವಹಿಸಬೇಕು. ಕೆಂಗಲ್ ಹನುಮಂತಯ್ಯ ಅವರು ರಾಮನಗರದವರೇ ಆಗಿರುವುದರಿಂದ ರಾಮನಗರ ನಗರಸಭೆ ಬಜೆಟ್ ನಲ್ಲಿ ಪ್ರತಿವರ್ಷ ಕೆಂಗಲ್ ಹನುಮಂತಯ್ಯ ನವರ ಜನ್ಮ ದಿನಾಚರಣೆಗೆ ಹಣಕಾಸು ಮೀಸಲಿಡಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಸತೀಶ್, ಜಿಲ್ಲಾ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಶಿವಣ್ಣಗೌಡ, ದುಂಡು ಮಾದೇಗೌಡ, ಬಿ.ಟಿ. ರಾಜೇಂದ್ರ, ಮಮತಾ, ಶಶಿಕಲಾ, ಮುಖ್ಯ ಶಿಕ್ಷಕ ಜಿ.ಆರ್.ವಿನೋದ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಮ್ಮೇಗೌಡ, ಸೋಲಾರ್ ಪುಟ್ಟಪ್ಪ ಇತರರು ಭಾಗವಹಿಸಿದ್ದರು.

# ನಿರುದ್ಯೋಗ ನಿವಾರಣೆಗೆ ತರಬೇತಿ ನೀಡಿ

• ಉದಯವಾಹಿನಿ,ಮಂಡ್ಯ

ಪಿ.ಎಂ. ಕಿಸಾನ್ ಯೋಜನೆಯಡಿ 21 ಕಂತುಗಳಲ್ಲಿ 892 ಕೋಟಿ ನೀಡಲಾಗಿದೆ. ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಕೃಷಿಯಿಂದ ಉದ್ಯಮ ಹೇಗೆ ಪ್ರಾರಂಭಿಸಬೇಕು ಎಂಬುದರ ಕುರಿತು ತರಬೇತಿ ನೀಡಿ, ಸೌಲಭ್ಯ ಕಲ್ಪಿಸಿ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ಸೂಚಿಸಿದರು.ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಹಾಗೂ ಜಿಲ್ಲಾ ಮಟ್ಟದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಲ್ ಜಲ್ ಯೋಜನೆಯಡಿ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಸ್ವಸಹಾಯ ಗುಂಪುಗಳಿಗೆ ತರಬೇತಿ ನೀಡಲಾಗಿದೆ. ಆ ಹೆಣ್ಣು ಮಕ್ಕಳಿಗೆ ಕೇವಲ ತರಬೇತಿ ನೀಡಿದರೆ ಸಾಲದು, ತರಬೇತಿಗೆ ತಕ್ಕ ಹಾಗೆ ಕೆಲಸಗಳನ್ನು ನೀಡಿ. ಆಗ ಮಾತ್ರ ತರಬೇತೆ ನೀಡಿದ್ದು ಸಾರ್ಥಕವಾಗುತ್ತದೆ ಎಂದು ಹೇಳಿದರು.

ಪ್ರಸಕ್ತ ವರ್ಷ ಜಿಲ್ಲೆಗೆ ಅಗತ್ಯವಿರುವ ನೀರಿನ ಪ್ರಮಾಣ ಲಭ್ಯವಿದೆ. ಹಾಗಾಗಿ ಬೇಸಿಗೆಯಲ್ಲಿ ಬೆಳೆ ಮತ್ತು ಕುಡಿಯುವ ನೀರಿಗೆ ಸಮಸ್ಯೆ ಉಂಟಾಗುವುದಿಲ್ಲ. ಜನರಿಗೆ ಜಲ ಜೀವನ್ ಮಿಷನ್ ಮೂಲಕ ಶುದ್ಧ ಕುಡಿಯುವ ನೀರನ್ನು ಮನೆ-ಮನೆಗೆ ತಲುಪಿಸಿ. ಪ್ರತಿ ವಾರ ನೀರಿನ ಗುಣಮಟ್ಟವನ್ನು ಪರಿಶೀಲಿಸಿ ಎಂದು ಸೂಚಿಸಿದರು.

ಪ್ರಾಥಮಿಕ ಹಂತದಲ್ಲಿಯೇ ಹಸಿ ಕಸ ಮತ್ತು ಒಣ ಕಸಗಳನ್ನು ಬೇರ್ಪಡಿಸುವಂತೆ ಅರಿವು ಮೂಡಿಸಿ. ಮಂಡ್ಯ ನಗರದಲ್ಲಿ ಸ್ವಚ್ಛತೆ ಕಾಪಾಡುವುದು ಎಲ್ಲರ ಹೊಣೆ ಎಂದರು.

**ಸ್ವಚ್ಛತೆ ಕಾಪಾಡುವುದು ಎಲ್ಲರ ಹೊಣೆ**


ಉದಯವಾಹಿನಿ ಚಿತ್ರ

### ಶೇ 89ರಷ್ಟು ತೆರಿಗೆ ಸಂಗ್ರಹ

ಜಿಲ್ಲಾಧಿಕಾರಿ ಕುಮಾರ ಮಾತನಾಡಿ, ಆಸ್ತಿ ತೆರಿಗೆಯ ವಸೂಲಾತಿಯಲ್ಲಿ ಈಗಾಗಲೇ ಶೇ 89ರಷ್ಟು ತೆರಿಗೆ ಸಂಗ್ರಹಿಸಲಾದೆ. ಉಳಿದ ತೆರಿಗೆಯನ್ನು ಮಾರ್ಚ್ ಅಂತ್ಯದೊಳಗೆ ಸಂಗ್ರಹಿಸಲಾಗುತ್ತದೆ' ಎಂದು ಹೇಳಿದರು.

ಎಂಎಲ್‌ಎ ಮತ್ತು ಎಂಎಲ್‌ಸಿ ಅನುದಾನದಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ. ಈ ವರ್ಷ ಪಿಎಂಎಫ್‌ಎಂಇ ಯೋಜನೆಯಡಿ ಜಿಲ್ಲೆಯ 328 ಅರ್ಹ ರೈತ ಫಲಾನುಭವಿಗಳಿಗೆ 83.42 ಕೋಟಿ ಸಾಲ ಹಾಗೂ 27.72 ಕೋಟಿ ಸಹಾಯಧನ ನೀಡಲಾಗಿದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ಉಪವಿಭಾಗಾಧಿಕಾರಿಗಳಾದ ಶಿವಮೂರ್ತಿ ಮತ್ತು ಶ್ರೀನಿವಾಸ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

### ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಸಿ



ಜಿಲ್ಲೆಯ ಅಂಗನವಾಡಿಗಳಲ್ಲಿ 61 ಸಾವಿರಕ್ಕೂ ಹೆಚ್ಚು ಮಕ್ಕಳಿದ್ದು ಪೌಷ್ಟಿಕ ಕೊರತೆ ಉಂಟಾಗದಂತೆ ಕ್ರಮ ವಹಿಸಿ. ಗುಣಮಟ್ಟದ ಪೌಷ್ಟಿಕ ಆಹಾರಗಳನ್ನು ಮಕ್ಕಳಿಗೆ ನೀಡಿ. ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯಲಿರುವ ಮಕ್ಕಳಿಗೆ ವಿಶೇಷವಾಗಿ ಭಾಷಾ ವಿಷಯ ,ಗಣಿತ ವಿಷಯಗಳಲ್ಲಿ ಮೇಲೆ ಹೆಚ್ಚಿನ ಒತ್ತು ನೀಡಿ. ಶಾಲಾ ಶಿಕ್ಷಕರು ಮಕ್ಕಳಿಗೆ ಸೂಕ್ತವಾಗಿ ಪಾಠ ಮಾಡುತ್ತಿದ್ದಾರಾ ಎಂಬುದನ್ನು ಪರಿಶೀಲಿಸಿ' ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

### ಅನುದಾನದ ಕೊರತೆ'

**ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ಮಾತನಾಡಿ ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಈಗಾಗಲೇ ಶೇ 79ರಷ್ಟು ಕಾಮಗಾರಿ ಮುಗಿದಿದ್ದು ಅನುದಾನದ ಕೊರತೆಯಿಂದ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ ಎಂದು ಹೇಳಿದರು. ಅಕ್ಕನ ಬುತ್ತಿ ಎಂಬ ಹೊಸ ಯೋಜನೆಯನ್ನು ಎನ್.ಆರ್.ಎಲ್.ಎಂ ಯೋಜನೆಯಡಿ ರೂಪಿಸಲಾಗಿದೆ. ಗುಣಮಟ್ಟದ ಆಹಾರವನ್ನು ಕ್ಯಾಟರಿಂಗ್ ಮೂಲಕ ಸರ್ಕಾರಿ ಕಚೇರಿಗಳು ಮತ್ತು ಸಂಸ್ಥೆಗಳಿಗೆ ನೀಡಲಾಗುತ್ತಿದೆ' ಎಂದರು.**




# 4.61 ಲಕ್ಷ ಮಕ್ಕಳಿಗೆ ಜಂತುಹುಳು ನಿವಾರಕ ಮಾತ್ರೆ

• ಉದಯವಾಹಿನಿ,ಕೋಲಾರ

ಜಿಲ್ಲೆಯ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಪೌಷ್ಟಿಕಾಂಶ ವೃದ್ಧಿಯ ಉದ್ದೇಶದಿಂದ ಹಮ್ಮಿಕೊಂಡಿರುವ ರಾಷ್ಟ್ರೀಯ ಜಂತುಹುಳು ನಿವಾರಣಾ ಅಭಿಯಾನಕ್ಕೆ ಜಿಲ್ಲಾಧಿಕಾರಿ ಎಂ.ಆರ್.ರವಿ ಸೋಮವಾರ ಜಿಲ್ಲಾಡಳಿತ ಭವನದಲ್ಲಿ ಚಾಲನೆ ನೀಡಿದರು.

ಮಕ್ಕಳಲ್ಲಿನ ರಕ್ತಹೀನತೆ ತಡೆಗಟ್ಟಲು ಮತ್ತು ದೈಹಿಕ, ಮಾನಸಿಕ ಬೆಳವಣಿಗೆಗೆ ಜಂತುಹುಳು ನಿವಾರಣೆ ಅತ್ಯಗತ್ಯ. ಜಿಲ್ಲೆಯ ಪ್ರತಿಯೊಬ್ಬ ಮಗುವೂ ಈ ಯೋಜನೆಯ ಪ್ರಯೋಜನ ಪಡೆಯಬೇಕು ಎಂದು ಹೇಳಿದರು.ಜಿಲ್ಲೆಯಾದ್ಯಂತ ಇರುವ ಎಲ್ಲಾ ಅಂಗನವಾಡಿಗಳು,


ಉದಯವಾಹಿನಿ ಚಿತ್ರ

ಸರ್ಕಾರಿ, ಖಾಸಗಿ ಶಾಲೆ ಮತ್ತು ಕಾಲೇಜುಗಳಲ್ಲಿ 1 ರಿಂದ 19 ವರ್ಷದೊಳಗಿನ ಒಟ್ಟು 4,61,633 ಮಕ್ಕಳಿಗೆ ಜಂತುಹುಳು ನಿವಾರಕ ಮಾತ್ರೆ ನೀಡುವ ಗುರಿ ಹೊಂದಲಾಗಿದೆ ಎಂದರು. ಮಾತ್ರೆ ವಿತರಣೆ ಆರಂಭವಾಗಿದ್ದು, ಫೆ.16 ರಂದು ಮಾಪ್-ಅಪ್' ದಿನವನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಂ.ಶ್ರೀನಿವಾಸ್, ಆರ್‌ಸಿಎಚ್ ಅಧಿಕಾರಿ ಡಾ.ಚಾರಿಣಿ, ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಅನಾವರಣ

• ಉದಯವಾಹಿನಿ, ಕೊರಟಗೆರೆ

'ಬನ್ನಿ ಸಾರ್ ಬನ್ನಿ.... ಬನ್ನಿ ಅಕ್ಕ..., ಬನ್ನಿ ಅಣ್ಣ... ಮನೆಯಿಂದ ಮಾಡಿದ ತಾಜಾ ತಿನಿಸು... ಕೆಮಿಕಲ್ ಹಾಕಿಲ್ಲ, ಸಹಜ ರುಚಿ, ನೈಜ ಬಣ್ಣ... ನಿಮ್ಮ ಹೊಟ್ಟೆ ತುಂಬಿಸುವ ಜತೆಗೆ ನಮ್ಮ ಜೇಬು ಕೂಡ ತುಂಬಿಸಿ ಎಂದು ಪುಟಾಣಿಗಳ ನಗುಮುಖದ ಆಹ್ವಾನ, ಖರೀದಿಗೆ ಪ್ರೇರೇಪಿಸುವ ಮಾತುಗಳು-ಇವೆಲ್ಲವೂ ಸೇರಿ ವಡ್ಡಗೆರೆ ಸರ್ಕಾರಿ ಪ್ರೌಢಶಾಲೆ ಆವರಣವನ್ನೇ ಒಂದು ಸಾಂಪ್ರದಾಯಿಕ ಗ್ರಾಮೀಣ ಸಂತೆಯಾಗಿ ಪರಿವರ್ತಿಸಿದ್ದವು.

ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಅನಾವರಣಗೊಳಿಸುವುದು, ಅವರಲ್ಲಿ ಜೀವನೋಪಯೋಗಿ ಕೌಶಲ ಬೆಳೆಸುವ ಉದ್ದೇಶದಿಂದ ಶಿಕ್ಷಣ ಇಲಾಖೆ ಪ್ರೌಢಶಾಲೆಯಲ್ಲಿ ಮಕ್ಕಳ ಕೌಶಲಾಭಿವೃದ್ಧಿ ಮೇಳ ಆಯೋಜಿಸಿತ್ತು. ಈ ಮೇಳದಲ್ಲಿ ಮಕ್ಕಳೆ ವ್ಯಾಪಾರಿಗಳು, ಮಕ್ಕಳೇ ಗ್ರಾಹಕರನ್ನು ಆಕರ್ಷಿಸುವ ಮಾರಾಟಗಾರರಾಗಿದ್ದರು. ಮೇಳದಲ್ಲಿ ಮಕ್ಕಳು ತಮ್ಮ ಮನೆಯಲ್ಲಿ ತಯಾರಿಸಿದ್ದ ಜಾಡಿ ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಬೋಂಡಾ, ಪಾನಿಪೂರಿ, ಫ್ರೂಟ್ ಸಲಾಡ್, ಬಗೆಬಗೆಯ ಹಣ್ಣು, ತಾಜಾ ತರಕಾರಿ, ಹೂವು, ತೆಂಗಿನಕಾಯಿ, ಪೂಜಾ ಸಾಮಗ್ರಿ ಹೀಗೆ ಅನೇಕ ವಸ್ತುಗಳು ಸಂತೆಯಲ್ಲಿ ಮೇಲೈಸಿದ್ದವು.

ಮಕ್ಕಳು ತಮ್ಮ ವಸ್ತುಗಳ ಬೆಲೆ ನಿಗದಿ ಮಾಡಿ, ಗ್ರಾಹಕರೊಂದಿಗೆ ಮಾತುಕತೆ ನಡೆಸಿ, ಮಾರಾಟದಲ್ಲಿ ನಿರತರಾಗಿದ್ದರು. 'ಒಂದು


ಉದಯವಾಹಿನಿ ಚಿತ್ರ

ಕೊಂಡ್ರೆ ಇನ್ನೊಂದು ಉಚಿತ ಇವತ್ತಿನ ಸ್ಪೆಷಲ್ ತಾಜಾ ತಿನಿಸು' ಎಂಬಂತಹ ಮಾರಾಟದ ಶೈಲಿಗಳು ಪೋಷಕರು ಹಾಗೂ ಶಿಕ್ಷಕರನ್ನು ಅಚ್ಚರಿಗೊಳಿಸಿತು.

ಹಳ್ಳಿಗಾಡಿನ ಮಕ್ಕಳು ತಮ್ಮ ಊರ ಸುತ್ತಮುತ್ತ ನಡೆಯುವ ಜಾತ್ರೆ, ಸಂತೆ, ಹಬ್ಬಗಳನ್ನು ಗಮನಿಸಿ ಕಲಿಯುತ್ತಾರೆ ಎಂಬುದಕ್ಕೆ ಈ ಮೇಳ ಸಾಕ್ಷಿಯಾಗಿತ್ತು.

ಮೇಳ ವೀಕ್ಷಿಸಿದ ಪೋಷಕರು, ಪಠ್ಯ ಪುಸ್ತಕದ ಪಾಠಕ್ಕಿಂತಲೂ ಇಂತಹ ಅನುಭವಾಧಾರಿತ ಕಲಿಕೆ ಮಕ್ಕಳಲ್ಲಿ ಆತ್ಮವಿಶ್ವಾಸ. ಸಂವಹನ ಕೌಶಲ ಮತ್ತು ಸ್ವಾವಲಂಬನೆ ಬೆಳೆಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶಿಕ್ಷಕರು ಕೂಡ ಮಕ್ಕಳಲ್ಲಿ ಅಡರುವ ಸೃಜನಶೀಲತೆ, ವ್ಯಾಪಾರ ಮತ್ತು ತಂಡ ಕಾರ್ಯದ ಮನೋಭಾವ ಕಂಡು ಸಂತಸಗೊಂಡರು.

# ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಬೇಕು

• ಉದಯವಾಹಿನಿ, ಭಾರತೀನಗರ


ಉದಯವಾಹಿನಿ ಚಿತ್ರ

ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಬೇಕು. ಸ್ವಾವಲಂಬಿಗಳಾಗಲು ಸಂಜೀವಿನಿ ಒಕ್ಕೂಟ ಸಹಕಾರಿಯಾಗಲಿದೆ ಎಂದು ಸಂಜೀವಿನಿ ಯೋಜನೆಯ ವಲಯ ಮೇಲ್ವಿಚಾರಕ ಅಮೃತ್ ರಾಜ್ ಹೇಳಿದರು.

ಇಲ್ಲಿಯ ಅಂಬೇಡ್ಕರ್ ಭವನದಲ್ಲಿ ನಡೆದ ಭಾರತೀನಗರ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಹೆಸರಿನಲ್ಲಿ ಸಂಜೀವಿನಿ ಒಕ್ಕೂಟ ತೆರೆಯಲಾಗಿದೆ. ಈ ಒಕ್ಕೂಟ ಎಲ್ಲಾ ರಾಜ್ಯಗಳಲ್ಲೂ ಇದೆ. ಇದು ಮಹಿಳೆಯರಿಗಾಗಿ ಮಾಡಿರುವ ಯೋಜನೆ.

ಒಕ್ಕೂಟದಿಂದ ಕೌಶಲಾಭಿವೃದ್ಧಿ, ಉದ್ಯಮಶೀಲತೆಯನ್ನು ರೂಢಿಸಿಕೊಳ್ಳಲು ಉಪಯುಕ್ತವಾಗಲಿದೆ. ಇದರಿಂದ ಬರುವ ಹಣದಿಂದ ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು.

ಈ ಒಕ್ಕೂಟವನ್ನು ಬಳಸಿಕೊಂಡವರಿಗೆ ವಿವಿಧ ರೀತಿಯ ಯೋಜನೆಯಲ್ಲಿ ಹೆಚ್ಚು ಹಣ ಗಳಿಸಬಹುದಾಗಿದೆ ಎಂದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಹೆಸರಿನಲ್ಲಿ ದೇಶದಾದ್ಯಂತ ತಂದಿರುವ ಈ ಯೋಜನೆ ರಾಜ್ಯಗಳಲ್ಲಿಯೂ ಜಾರಿಯಲ್ಲಿದೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಹೆಸರಿನಲ್ಲಿ ಒಕ್ಕೂಟಗಳು ನಡೆಯುತ್ತಿವೆ. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಒಕ್ಕೂಟದಲ್ಲಿ ಮಹಿಳೆಯರು ತೊಡಗಿಸಿಕೊಂಡು ಹಣಗಳಿಸುತ್ತಿದ್ದಾರೆ ಎಂದು ಹೇಳಿದರು.


**ಗ್ರಾ.ಪಂ. ಮಟ್ಟದ ಒಕ್ಕೂಟದ ವಾರ್ಷಿಕ ಮಹಾಸಭೆ**

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್. ಸುಧಾ ಉದ್ಘಾಟಿಸಿದರು. ಭಾರತೀನಗರ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಎಸ್.ಎಸ್.ಮಂಗಳಗೌರಿ ಮಾತನಾಡಿದರು. ಒಕ್ಕೂಟದ ಕಾರ್ಯದರ್ಶಿ ನಾಗಮ್ಮ, ಖಜಾಂಚಿ ಸುಜಾತ, ಜ್ಯೋತಿ, ಸುಧಾ, ಸವಿತ, ಮಮತ, ಲಕ್ಷ್ಮಿ, ವಸಂತಮ್ಮ, ಲೀಲಾರಾಮೇಗೌಡ, ಗ್ರಾ.ಪಂ. ಸದಸ್ಯ ಮಂಜುನಾಥ್, ಅಂಬರಹಳ್ಳಿ ಸ್ವಾಮಿ ಇದ್ದರು.

# ತೆಂಗು ಸಂಶೋಧನಾ ಕೇಂದ್ರ, ಭೂ ದಾಖಲೆ ಸರಳೀಕರಣಕೆ ಒತಾಯ

• ಉದಯವಾಹಿನಿ, ಮೈಸೂರು

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ (ಸಾಮೂಹಿಕ ನಾಯಕತ್ವ) ವತಿಯಿಂದ ತಾಲ್ಲೂಕು ಆಡಳಿತ ಸೌಧದ ಮುಂಭಾಗ ಪ್ರತಿಭಟನೆ ನಡೆಯಿತು. ತೆಂಗಿಗೆ ರೋಗಬಾಧೆ ಹೆಚ್ಚಾಗಿದೆ. ಮರಗಳು ಹಾನಿಗೊಳಗಾಗಿ ಇಳುವರಿ ಭಾರೀ ಕುಸಿತವಾಗಿದೆ. ಔಷಧಿ ಕೊರತೆ ಇದ್ದು ಅಧಿಕಾರಿಗಳು ತೋಟಗಳಿಗೆ ಭೇಟಿ ನೀಡಿ ಅಧ್ಯಯನ ಪರಿಶೀಲನೆ ನಡೆಸುತ್ತಿಲ್ಲ. ಈ ಬಾರಿಯ ಬಜೆಟ್‌ನಲ್ಲಿ ತಿಪಟೂರಿನಲ್ಲಿ ತೆಂಗು ಸಂಶೋಧನಾ ಕೇಂದ್ರ ಆರಂಭಿಸಿ ತಕ್ಷಣ ಸಂಶೋಧನೆ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು.ಅಬಕಾರಿ ಇಲಾಖೆಗೆ ಮನವಿ ಸಲ್ಲಿಸಿ,


ಉದಯವಾಹಿನಿ ಚಿತ್ರ

ಗ್ರಾಮಾಂತರ ಪ್ರದೇಶದಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾದೆ. ಯುವಕರು ಮತ್ತು ಹದಿಹರೆಯದ ಮಕ್ಕಳು ಮದ್ಯಪಾನಕ್ಕೆ ಬಲಿಯಾಗುತ್ತಿದ್ದಾರೆ. ಹಳ್ಳಿಗಳು ಕುಡುಕರ ಅಡ್ಡೆಗಳಾಗುತ್ತಿವೆ. ತಕ್ಷಣವೇ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ತಡೆಯಬೇಕು ಎಂದು ರೈತರು ಆಗ್ರಹಿಸಿದರು.

ಚೆಸ್ಕಾಂಗೆ ಮನವಿ ಸಲ್ಲಿಸಿ, ಬೇಸಿಗೆಯಲ್ಲಿ ವೋಲ್ಟೇಜ್ ಕೊರತೆಯಿಂದ ರೈತರ ಮೋಟಾರ್ ಸುಟ್ಟು ನಷ್ಟವಾಗುತ್ತಿದೆ. ಅಗತ್ಯವಿರುವ ಕಡೆ ಹೆಚ್ಚುವರಿ ಪರಿವರ್ತಕ ಅಳವಡಿಸಿ ಸ್ಥಿರ ವಿದ್ಯುತ್ ಸರಬರಾಜು ನೀಡಬೇಕು. ಪರಿವರ್ತಕ ಸುಟ್ಟರೆ ಎರಡು ದಿನಗಳೊಳಗೆ ಸರಿಪಡಿಸಿ ಅಳವಡಿಸಬೇಕು. ವಿದ್ಯುತ್ ಖಾಸಗೀಕರಣಕ್ಕೆ ರೈತಸಂಘದ ವಿರೋಧವಿದೆ ಎಂದರು.ಭೂ ದಾಖಲೆಗಳ ಕೊರತೆಯಿಂದ ಅನೇಕ ರೈತರು ವರ್ಷಗಳಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಕಂದಾಯ ಹಾಗೂ ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ ಮಹಜರು ಮಾಡಿ ದಾಖಲೆ ವಂಚಿತ ರೈತರಿಗೆ ಕಾಲಮಿತಿಯಲ್ಲಿ ಖಾತೆ, ಪಹಣಿ ಸೇರಿದಂತೆ ದಾಖಲಾತಿ ಮಾಡಿಕೊಡಬೇಕು. ಬಗರ್ ಹುಕುಂ ರೈತರಿಗೆ ತಕ್ಷಣವೇ ಹಕ್ಕುಪತ್ರ ನೀಡಿ ಎಂದು ಕಂದಾಯ ಇಲಾಖೆಗೆ ಹಕ್ಕೊತ್ತಾಯಿಸಿದರು.ಪ್ರಾಂತ ರೈತ ಸಂಘದ ಅಧ್ಯಕ್ಷ ರಂಗಾಪುರ ಚನ್ನಬಸವಣ್ಣ ಮಾತನಾಡಿ, ಬಡ ರೈತರಿಗೆ ಭೂಮಿ ನೀಡಲು ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ. ದೊಡ್ಡ ಕಂಪನಿಗಳಿಗೆ ಮಾತ್ರ ಸಾವಿರಾರು ಎಕರೆ ಭೂಮಿ ನೀಡಲಾಗುತ್ತಿದೆ. ಬಗರ್ ಹುಕುಂ ಸಾಗುವಳಿ ಚೀಟಿ ನೀಡಬೇಕು. ಖಾತೆ ಬದಲಾವಣೆ ಪ್ರಕ್ರಿಯೆಯನ್ನು ಸರಳಗೊಳಿಸಬೇಕು ಎಂದರು.

# ಕುಡಿವ ನೀರಿಗೆ ಕೊರತೆ ಆಗದಂತೆ ಕ್ರಮ ಕೈಗೊಳ್ಳಿ

• ಉದಯವಾಹಿನಿ, ಮೈಸೂರು

ಬೇಸಿಗೆ ಕಾಲ ಆರಂಭವಾಗಿದ್ದು, ಜಿಲ್ಲೆಯಲ್ಲಿ ಕುಡಿವ ನೀರಿನ ಕೊರತೆ ಆಗದಂತೆ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೆಆರ್‌ಎಸ್, ಕಬಿನಿ ಅಣೆಕಟ್ಟುಗಳಲ್ಲಿ ಇರುವ ನೀರಿನ ಲಭ್ಯತೆಯ ಮಾಹಿತಿ ಪಡೆದ ಅವರು, ಜೂನ್ ಅಂತ್ಯದವರೆಗೆ ಈಗ ಅಣೆಕಟ್ಟುಗಳಲ್ಲಿ ಇರುವ ನೀರಿನ ಪ್ರಮಾಣ ಸಾಕಾಗುತ್ತದೆ. ಒಂದು ವೇಳೆ, ಕುಡಿಯುವ ನೀರಿನ ಅಗತ್ಯ


ಉದಯವಾಹಿನಿ ಚಿತ್ರ

ಬಿದ್ದರೆ ಕಬಿನಿ ಅಣೆಕಟ್ಟಿನಿಂದ ಚಾನೆಲ್ ಮೂಲಕ ನೀರನ್ನು ಕಾಲಕಾಲಕ್ಕೆ ಹರಿಸಿ, ಕುಡಿಯುವ ನೀರನ್ನು ಪೂರೈಸುವಂತೆ ಕಬಿನಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದರು.ಪ್ರತಿವಾರ ಸಭೆ ನಡೆಸಿ ಸೂಚನೆ ನೀಡಿ: ತಹಶೀಲ್ದಾರರು ತಾಲ್ಲೂಕು ಮಟ್ಟದಲ್ಲಿ ಪ್ರತಿ ವಾರ ಕುಡಿಯುವ ನೀರಿನ ನಿರ್ವಹಣೆ ಕುರಿತು ಗ್ರಾಮೀಣ ಕುಡಿಯುವ ನೀರಿನ ಇಲಾಖೆ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಸೇರಿ ಸಭೆ ನಡೆಸಬೇಕು ಎಂದು ಸೂಚನೆ ನೀಡಿದರು. ಚಳಿಗಾಲ ಮುಗಿದು, ಈಗಾಗಲೇ ಬೇಸಿಗೆ ಕಾಲ ಆರಂಭವಾಗಿದೆ. ತಾಪಮಾನ ಹೆಚ್ಚಾಗಿ ಕಾಳ್ಗಿಚ್ಚು ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೈಗೊಳ್ಳಬೇಕು. ಕಳೆದ ವರ್ಷ ಚಾಮುಂಡಿ ಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು.

## ಮಿನಿ ನ್ಯೂಸ್

### ಶಿಲ್ಪಿ ಶರಣ್ ಅವರಿಗೆ ಶಿಲ್ಪಶ್ರೀ ಪ್ರಶಸ್ತಿ

• ಉದಯವಾಹಿನಿ ,ರಾಮನಗರ


ಉದಯವಾಹಿನಿ ಚಿತ್ರ

ನಗರದ ಕಾಯಿಸೊಪ್ಪಿನಬೀದಿಯ ಎಂ. ಶರಣ್ ಅವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2024ನೇ ಸಾಲಿನ 'ಶಿಲ್ಪಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.ಎಂ. ಶರಣ್ ಅವರು ಬಿಡದಿಯ ಜೋಗರದೊಡ್ಡಿಯಲ್ಲಿರುವ ಕೆಪಿಜೆ ಕರಕುಶಲ ತರಬೇತಿ ಕೇಂದ್ರ, ಮಹಾರಾಷ್ಟ್ರದ ಪುಣೆ ಹಾಗೂ ತಮಿಳುನಾಡಿನಲ್ಲಿ ತರಬೇತಿ ಪಡೆದಿದ್ದಾರೆ. ಚನ್ನಪಟ್ಟಣದ ಶ್ರೀಗಂಗರಸ ಶಿಲ್ಪಕಲಾ ಶಿಕ್ಷಣ ಕೇಂದ್ರದಲ್ಲಿ ಬಿಎಫ್‌ಎ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದಿರುವ ಇವರು, ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯ ಕಲಾ ವಿಭಾಗದಿಂದ ಎಂಎಫ್‌ಎ ಪದವಿ ಪಡೆದಿದ್ದಾರೆ.

ಎಂ. ಶರಣ್ ಅವರಿಗೆ ಕಲ್ಲಿನ ಕೆತ್ತನೆ ಕಲೆ ಕರಗತವಾಗಿದೆ. ಕಳೆದ 28 ವರ್ಷಗಳಿಂದ ಕಲೆಯಲ್ಲಿ ತೊಡಗಿಸಿಕೊಂಡಿರುವ ಇವರು ಕೆತ್ತಿರುವ ಕಲ್ಲಿನ ದೇವತಾ ಮೂರ್ತಿಗಳು ನೋಡುಗರ ಆಕರ್ಷಣೆಯಾಗಿವೆ. ಅವರ ಕೈಯಿಂದ ಅರಳಿರುವ ಹಲವು ದೇವರ ಮೂರ್ತಿಗಳು ಹಳ್ಳಿಗಳು ಸೇರಿದಂತೆ, ಕ್ಯಾಲಿಫೋರ್ನಿಯಾ, ಲಂಡನ್, ಸಿಡ್ನಿಯ ರಾಮಕೃಷ್ಣಾಶ್ರಮ ಹೀಗೆ ದೇಶವಿದೇಶಗಳಲ್ಲಿ ಪೂಜಿಸಲ್ಪಡುತ್ತಿವೆ.

ರಾಮನಗರದ ವಿನಾಯಕನಗರದಲ್ಲಿ ಸೃಷ್ಟಿ ಶಿಲ್ಪಕಲಾ ಲೋಕ ತೆರೆದು ತಮ್ಮ ಕಲಾ ಸೇವೆ ಮಾಡುತ್ತಿರುವ ಇವರ ಕಲಾ ಸೇವೆಯನ್ನು ಗುರುತಿಸಿ ವಿವಿಧ ಸಂಘಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ.

### ಬಸ್ ಆಕ್ಸಲ್ ಕಟ್ ತಪ್ಪಿದ ಬಾರಿ ಅನಾಹುತ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಚಾಮರಾಜನಗರದಿಂದ ತೆರಕಣಾಂಬಿ ಮಾರ್ಗವಾಗಿ ಗುಂಡ್ಲುಪೇಟೆಗೆ ಬರುತ್ತಿದ್ದ ಕೆ ಎಸ್ ಆರ್ಟಿಸಿ ಬಸ್ಸಿನ ಆಕ್ಸಲ್ ಕಟ್ಟಾಗಿದ್ದು ಚಾಲಕನ ಜಾಗರೂಕತೆಯಿಂದ ಬಾರಿ ಅನಾಹುತ ತಪ್ಪಿದ ಘಟನೆ ಮಂಗಳವಾರ ಸಂಭವಿಸಿದೆ.

ಜಿಲ್ಲಾ ಕೇಂದ್ರದಿಂದ ಗುಂಡ್ಲುಪೇಟೆಗೆ ಬರುತ್ತಿದ್ದ ಬಸ್ ತೆರಕಣಾಂಬಿ ಜೆ ಎಸ್ ಎಸ್ ಶಾಲೆ ಬಳಿ ಆಕ್ಸಲ್ ಕಟ್ ಆದ ಹಿನ್ನೆಲೆ ನಿಯಂತ್ರಣ ತಪ್ಪಿದೆ, ಕೂಡಲೇ ಜಾಗೃತನಾದ ಬಸ್ ಚಾಲಕ ಯಾವುದೇ ಅವಘಡಕ್ಕೆ ಆಸ್ಪದ ಕೊಡದೆ ನಿಧಾನಗತಿಯಲ್ಲಿ ರಸ್ತೆ ಬದಿಗೆ ನಿಲ್ಲಿಸಿ ಸಮಯ ಪ್ರಜ್ಞೆ ತೋರಿದ್ದರಿಂದ ಅನಾಹುತ ತಪ್ಪಿಸಿದಂತಾಗಿದೆ.

**ಯೋಗ್ಯವಲ್ಲದ ಬಸ್ಗಳು ರಸ್ತೆಗೆ ಇಳಿಯದಿರಲಿ :** ಸಾರಿಗೆ ಸಂಸ್ಥೆಯಲ್ಲಿ ಸಂಚಾರಕ್ಕೆ ಯೋಗ್ಯವಲ್ಲದ ಬಸ್ಸುಗಳನ್ನ ರಸ್ತೆಗಿಳಿಸಲಾಗುತ್ತಿದೆ ಆದುದರಿಂದಲೇ ಇಂತಹ ಘಟನೆಗಳು ಸಂಭವಿಸುತ್ತಿವೇ ಎಂಬ ಆರೋಪಗಳು ಮೊದಲಿನಿಂದಲೂ ಕೇಳಿ ಬರುತ್ತಿದೆ ಹಾಗಾಗಿ ಸಂಚಾರ ಸಾಮರ್ಥ್ಯ ಕಳೆದುಕೊಂಡಿರುವ ಬಸ್ಸುಗಳನ್ನ ಬಳಕೆ ಮಾಡಬಾರದು, ಹತ್ತು ಲಕ್ಷಕ್ಕೂ ಹೆಚ್ಚು ಕಿಲೋಮೀಟರ್‌ಗಳಷ್ಟು ಕ್ರಮಿಸಿರುವ ಬಸ್ಸುಗಳನ್ನ ಗ್ರಾಮಾಂತರ ಪ್ರದೇಶಗಳ ಕಡೆ ನಿಯೋಜಿಸಿರುವುದರಿಂದ ಅನಾಹುತಗಳು ಸಂಭವಿಸಬಹುದು ಈ ಹಿನ್ನೆಲೆಯಲ್ಲಿ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು ಎಂದು ಪಟ್ಟಣ ನಿವಾಸಿ ಮಂಜುನಾಥ್ ಆಗ್ರಹಿಸಿದ್ದಾರೆ.

### ಮೊದಲ ವರ್ಷದ ಆರಾಧನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಗುಂಡ್ಲುಪೇಟೆ


ತಾಲ್ಲೂಕಿನ ಹಸಗೂಲಿ ಪಾರ್ವತಾಂಭೆ ದೇವಸ್ಥಾನದ ಮೊದಲ ವರ್ಷದ ಆರಾಧನೆ ವಿಜೃಂಭಣೆಯಿಂದ ಜರುಗಿತು. ಕಳೆದ ವರ್ಷದ ಪೆ. 10 ರಂದು ಸ್ವರ್ಣಕಲ್ಲಿನ ದೇಗುಲವನ್ನ ನಿರ್ಮಾಣ ಮಾಡಲಾಗಿ ಭಕ್ತಿ ಭಾವದಿಂದ ಲೋಕಾರ್ಪಣೆಗೊಳಿಸಲಾಗಿತ್ತು ಅದರಂತೆ ಆರಾಧನ ಮಹೋತ್ಸವ ನಡೆಯಿತು. ಪ್ರತಿವರ್ಷ ನಡೆಯುವ ಜಾತ್ರಾ ಮಹೋತ್ಸವಕ್ಕೆ ಸೇರುವಂತೆಯೇ ಸುತ್ತಲಿನ ಗ್ರಾಮಗಳ ಭಕ್ತರು ಆರಾಧನಾ ಮಹೋತ್ಸವಕ್ಕೆ ಆಗಮಿಸಿದ್ದರು, ಭಕ್ತರಿಗಾಗಿ ಸಿಹಿಯೂಟ ಪ್ರಸಾದದ ವ್ಯವಸ್ಥೆಯನ್ನ ಅಚ್ಚುಕಟ್ಟಾಗಿ ಮಾಡಲಾಗಿತ್ತು.

**ಹಳ್ಳಿಕಾರ್ ಓರಿಗಳ ಪ್ರದರ್ಶನ :** ರೈತ ಪರಂಪರೆಯನ್ನೇ ಜೀವಾಳವನ್ನಾಗಿರಿಸಿಕೊಂಡಿರುವ ಗ್ರಾಮದಲ್ಲಿ ಶಕ್ತಿ ದೇವತೆ ಆರಾಧನಾ ನಿಮಿತ್ತ ಶ್ರೀ ಸಚ್ಚಿದಾನಂದ ಟ್ರಸ್ಟಿನ ಅಧ್ಯಕ್ಷ ಬಸವರಾಜುರವರು ಹಳ್ಳಿಕಾರ್ ಜೋಡೆತ್ತುಗಳ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸುವ ಜೊತೆಗೆ ಬಿಗ್ ಬಾಸ್ ಸ್ಪರ್ಧಿ ವರ್ತೂರು ಸಂತೋಷ್ ಹಾಗೂ ಹಾಸ್ಯನಟ ಟೆನ್ನಿಸ್ ಕೃಷ್ಣ ಅವರಿಗೆ ಆಹ್ವಾನ ನೀಡಿದ್ದ ಹಿನ್ನೆಲೆ ಜೋಡೆತ್ತುಗಳ ಸ್ಪರ್ಧೆ ಕಣ್ತುಂಬಿಕೊಳ್ಳಲು ಜನಸಾಗರವೇ ಹರಿದು ಬಂದಿತ್ತು.

> **ರೈತರ ಮಕ್ಕಳನ್ನ ತಾತ್ಸಾರ ಮನೋಭಾವದಿಂದ ನೋಡದೆ ಕನ್ಯಾಧಾನ ಮಾಡುವುದಕ್ಕೆ ಹೆಣ್ಣೆತ್ತವರು ಮುಂದಾಗಬೇಕು, ಕೋಟಿ ಕೋಟಿ ಜನರಿಗೆ ಅನ್ನ ನೀಡುವ ಕೈ ನಂಬಿ ಬಂದವಳನ್ನ ಕೈ ಬಿಡುವುದಿಲ್ಲ, ರೈತನನ್ನ ನಂಬಿದರೆ ಹೆತ್ತತಾಯಿಯ ಮೇಲೆ ವಿಶ್ವಾಸವಿಟ್ಟಂತೆ, ಕೋಟ್ಯಾಂತರ ರೂ ದುಡಿದು ಶೇಖರಣೆ ಮಾಡುವ ಬದಲಾಗಿ ಹಳ್ಳಿಕಾರ್ ಕಟ್ಟ ಬೆಳೆಸಿ, ಮುಂದಿನ ದಿನಗಳಲ್ಲಿ ಹಸಗೂಲಿಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ನದಾನಕ್ಕೆ ಸಹಕಾರ ನೀಡುತ್ತೇನೆ.**
>
> ವರ್ತೂರು ಸಂತೋಷ್

# ನಾಳೆ ಬಜೆಟ್ ಪೂರ್ವಭಾವಿ ಸಭೆ

• ಉದಯವಾಹಿನಿ,ಕನಕಪುರ


ಉದಯವಾಹಿನಿ ಚಿತ್ರ

ನಗರಸಭೆಯ 2026-27ನೇ ಸಾಲಿನ ಬಜೆಟ್ ಸಿದ್ದಪಡಿಸುವ ಸಂಬಂಧ ಸಾರ್ವಜನಿಕರ ಪೂರ್ವಭಾವಿ ಸಭೆಯನ್ನು ಫೆ. 12ರಂದು ಬೆಳಿಗ್ಗೆ 11 ಗಂಟೆಗೆ ನಗರ ಸಭೆ ಪೌರಾಯುಕ್ತರ ಅಧ್ಯಕ್ಷತೆಯಲ್ಲಿ ನಗರಸಭಾ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಸಭೆಗೆ ನಗರಸಭೆ ಹಾಲಿ ಮತ್ತು ಮಾಜಿ ಸದಸ್ಯರು, ಆಸಕ್ತ ಜನಪ್ರತಿನಿಧಿಗಳು, ಸಾರ್ವಜನಿಕರು, ಹಿರಿಯ ನಾಗರಿಕರು, ಸರ್ಕಾರೇತರ ಸಂಘ- ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ಕನಕಪುರ ನಗರಸಭಾ ವ್ಯಾಪ್ತಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಬೇಕು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತರಾಳದಿಂದ... EDITORIAL

# ರಚನಾತ್ಮಕ ಚಟುವಟಿಕೆಯಾಗಿ ಬೆಳೆಯುವಲ್ಲಿ ಚಿತ್ರೋತ್ಸವ ವಿಫಲ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ (ಬಿಫೆಸ್) 17ನೇ ಆವೃತ್ತಿ ನಿರಾಶಾದಾಯಕವಾಗಿ ಕೊನೆಗೊಂಡಿದೆ. ಇದರೊಂದಿಗೆ, ಮತ್ತೊಂದು ಔಪಚಾರಿಕ ಸಿನಿಮಾಋತು ಕೊನೆಗೊಂಡಿದೆ. ಎಂದಿನಂತೆ ಈ ಬಾರಿಯೂ ಗೊಂದಲ, ತರಾತುರಿ, ಅಸ್ಪಷ್ಟತೆ ಮತ್ತು ಮಹತ್ವಾಕಾಂಕ್ಷೆಯ ಕೊರತೆ ಚಿತ್ರೋತ್ಸವದಲ್ಲಿ ಎದ್ದು ಕಾಣಿಸುವಂತಿತ್ತು. ನಾಡಿನ ಐತಿಹಾಸಿಕ ಪರಂಪರೆ, ವೈಜ್ಞಾನಿಕ ಸಾಧನೆ, ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಸಿನಿಮಾ ಕ್ಷೇತ್ರಗಳ ಸಾಧನೆಯ ನಡುವೆಯೇ ಭಾರತೀಯ ಮತ್ತು ಅಂತರ ರಾಷ್ಟ್ರೀಯ ಸಿನಿಮಾ ಸಂಸ್ಕೃತಿಯ ಮುಖ್ಯಕೇಂದ್ರವಾಗಿ ಬೆಂಗಳೂರು ಬೆಳೆದು ನಿಂತಿದೆ ಎನ್ನುವ 'ಬಿಫೆಸ್'ನ ಆಶಯ ಹೇಳಿಕೆಯಾಗಿಯಷ್ಟೇ ಉಳಿದಿದ್ದು, ರಾಜ್ಯದಲ್ಲಿ ಸಿನಿಮಾ ಸಂಸ್ಕೃತಿ ರೂಪುಗೊಳ್ಳಲು ಅಗತ್ಯವಾದ ರಚನಾತ್ಮಕ ಚಟುವಟಿಕೆಯಾಗಿ ಬೆಳೆಯುವಲ್ಲಿ ಚಿತ್ರೋತ್ಸವ ವಿಫಲವಾಗಿದೆ.



ಈ ವೈಫಲ್ಯಕ್ಕೆ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಹೊಣೆಗೇಡಿತನವೇ ನೇರ ಕಾರಣವಾಗಿದೆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಾಧ್ಯತೆಗಳ ರೂಪದಲ್ಲಿ ಅಂತರರಾಷ್ಟ್ರೀಯ ಚಿತ್ರೋತ್ಸವವನ್ನು ರೂಪಿಸುವುದು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಸಾಂಪ್ರದಾಯಿಕ ಆಚರಣೆಗಷ್ಟೇ ಚಿತ್ರೋತ್ಸವಗಳು ಸೀಮಿತವಾಗುವ ಮೂಲಕ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ. ವೃತ್ತಿಪರತೆ ಹಾಗೂ ಶಿಸ್ತನ್ನು ಮೈಗೂಡಿಸಿಕೊಳ್ಳಲು ವಿಫಲವಾಗುವುದರೊಂದಿಗೆ, ಅಂತರರಾಷ್ಟ್ರೀಯ ಸಿನಿಮಾದ ಗಮನವನ್ನು ರಾಜ್ಯದತ್ತ ಸೆಳೆಯುವುದಕ್ಕೂ 'ಬಿಫೆಸ್'ಗೆ ಸಾಧ್ಯವಾಗಿಲ್ಲ. ಚಿತ್ರೋತ್ಸವ ನಡೆಸುವುದಕ್ಕೆ ಅಗತ್ಯವಾದ ನಿರ್ದೇಶನಾಲಯವೊಂದನ್ನು ರೂಪಿಸುವ ಇಚ್ಛಾಶಕ್ತಿಯನ್ನೂ ಸರ್ಕಾರ ಪ್ರದರ್ಶಿಸಿಲ್ಲ. ಇದರ ಫಲವಾಗಿಯೇ ಸಂತೆಗೆ ಮೂರು ಮೊಳ ಎನ್ನುವಂತೆ ಚಿತ್ರೋತ್ಸವಗಳನ್ನು ನಡೆಸಲಾಗುತ್ತಿದೆ.

ಯಾವುದೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಪ್ರಮುಖ ಲಕ್ಷಣ, ನಿಗದಿತ ಕ್ಯಾಲೆಂಡರ್ ಹೊಂದಿರುವುದು. ಆದರೆ, ನಿರ್ದಿಷ್ಟ ಕ್ಯಾಲೆಂಡರ್ ಹೊಂದದಿರುವ ಕಾರಣದಿಂದಾಗಿಯೇ 'ಬಿಫೆಸ್' ಅಂತರರಾಷ್ಟ್ರೀಯ ಮಾನ್ಯತೆ ಪಡೆಯುವುದರಿಂದ ವಂಚಿತವಾಗಿದೆ. 'ಬಿಫೆಸ್'ನ ಮೊದಲ ಆವೃತ್ತಿ ನಡೆದುದು 2006ರಲ್ಲಿ. ಎರಡು ದಶಕಗಳ ನಂತರವೂ ಚಿತ್ರೋತ್ಸವಕ್ಕೊಂದು ಕ್ಯಾಲೆಂಡರ್ ಗೊತ್ತುಪಡಿಸುವುದು ಸರ್ಕಾರಕ್ಕೆ ಸಾಧ್ಯವಾಗದಿರುವುದು ದುರದೃಷ್ಟಕರ.

'ಬಿಫೆಸ್' ನಂತರ ಪ್ರಾರಂಭವಾದ ಚಿತ್ರೋತ್ಸವಗಳು ಕ್ಯಾಲೆಂಡರ್ ಹೊಂದುವ ಮೂಲಕ ವಿಶ್ವದ ಗಮನಸೆಳೆದಿರುವಾಗ, ನಾವಿನ್ನೂ ದಿನಾಂಕ ಸ್ಪಷ್ಟಪಡಿಸಿಕೊಳ್ಳಲೇ ಒದ್ದಾಡುತ್ತಿದ್ದೇವೆ. ಸರ್ಕಾರಕ್ಕೆ ಮನಸ್ಸು ಬಂದಾಗ ಚಿತ್ರೋತ್ಸವ ನಡೆಯುವಂತಾಗಿದೆ. ಜನರ ತೆರಿಗೆಯ ಹಣದಲ್ಲಿ ನಡೆಯುವ ಚಿತ್ರೋತ್ಸವಕ್ಕೆ ಅಗತ್ಯವಾದುದು ಅದ್ದೂರಿತನವಲ್ಲ, ಅರ್ಥಪೂರ್ಣ ಸಾಧ್ಯತೆಗಳು ಎನ್ನುವುದು ಚಿತ್ರೋತ್ಸವದ ಸಂಘಟಕರಿಗೆ ಅರ್ಥವಾದಂತಿಲ್ಲ. ಚಿತ್ರೋತ್ಸವವನ್ನು ಕಲಿಕೆಯ ಕಮ್ಮಟವಾಗಿ ರೂಪಿಸುವ ಪ್ರಯತ್ನಗಳು ಪರಿಣಾಮಕಾರಿಯಾಗಿ ನಡೆದಿಲ್ಲ. ಅಂತರರಾಷ್ಟ್ರೀಯ ಸಿನಿಮಾ ನಿರ್ಮಾತೃಗಳು ಕನಿಷ್ಠ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಬೆಂಗಳೂರು ಚಿತ್ರೋತ್ಸವದ ಚೌಕಟ್ಟನ್ನೇ ಕುಗ್ಗಿಸುವಂತಿದೆ.


ಈ ವರ್ಷ ಪ್ರದರ್ಶನಗೊಂಡ ಸಿನಿಮಾಗಳ ಗುಣಮಟ್ಟ ಹಾಗೂ ಪ್ರದರ್ಶನದ ಸ್ಥಳವೂ ಚಿತ್ರರಸಿಕರ ಟೀಕೆಗೆ ಗುರಿಯಾಗಿದೆ. ಪ್ರತಿ ವರ್ಷ ಸಿನಿಮಾ ಪ್ರದರ್ಶನಗಳು ನಡೆಯುತ್ತಿದ್ದ ಸ್ಥಳವನ್ನು ಸಕಾರಣವಿಲ್ಲದೆ ಈ ವರ್ಷ ಬದಲಾಯಿಸಲಾಗಿತ್ತು. ಈ ಮೊದಲು ಉತ್ಸವ ನಡೆಯುತ್ತಿದ್ದ ಸ್ಥಳ ಸಾರ್ವಜನಿಕರಿಗೆ ಬಂದುಹೋಗಲು ಆಯಕಟ್ಟಿನ ಪ್ರದೇಶದಲ್ಲಿತ್ತು. ಸ್ಥಳಾವಕಾಶದ ದೃಷ್ಟಿಯಿಂದಲೂ ಹಿಂದಿನ ಸ್ಥಳ ಅನುಕೂಲಕರವಾಗಿತ್ತು.

ಸ್ಪರ್ಧಾತ್ಮಕ ವಿಭಾಗದಲ್ಲಿನ ಕನ್ನಡ ಸಿನಿಮಾಗಳ ಆಯ್ಕೆಯ ಬಗ್ಗೆಯೂ ಅಸಮಾಧಾನ ವ್ಯಕ್ತವಾಗಿದೆ. ಕನ್ನಡ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ರೂಪದಲ್ಲಿ ತನ್ನನ್ನು ಗುರ್ತಿಸಿಕೊಳ್ಳುವ ಚಿತ್ರೋತ್ಸವ, ಕನ್ನಡದ ಆದಿಕವಿ ಪಂಪನ ಜೀವನ ಸಾಧನೆಯ ಕಥನವಾದ 'ಮಹಾಕವಿ' ಸಿನಿಮಾವನ್ನೇ ಸ್ಪರ್ಧಾತ್ಮಕ ವಿಭಾಗದಿಂದ ದೂರವಿಟ್ಟಿದೆ. ಗುಣಮಟ್ಟ, ಸಾಮಾಜಿಕ ಜವಾಬ್ದಾರಿ ಹಾಗೂ ನಾಡಿನ ಹಿರಿಮೆಯು ಮಾನದಂಡ ಆಗುವುದರ ಬದಲು ವೈಯಕ್ತಿಕ ಆಶೋತ್ತರಗಳು ಸಿನಿಮಾ ಆಯ್ಕೆಯಲ್ಲಿ ಮುಖ್ಯವಾಗುತ್ತಿವೆ ಎನ್ನುವ ಟೀಕೆಯಿಂದ ತಪ್ಪಿಸಿಕೊಳ್ಳುವುದು 'ಬಿಫೆಸ್'ಗೆ ಈ ವರ್ಷವೂ ಸಾಧ್ಯವಾಗಿಲ್ಲ.

ಈ ವೈಫಲ್ಯದ ಹಿಂದೆ ಚಲನಚಿತ್ರ ಅಕಾಡೆಮಿಯ ಬೌದ್ಧಿಕ ದಾರಿದ್ರವೂ ಇದೆ. ಸಿನಿಮಾದ ಶೈಕ್ಷಣಿಕ ಚಟುವಟಿಕೆಗಳ ವೇದಿಕೆಯಾಗಿದ್ದ ಅಕಾಡೆಮಿ, ಕಳೆದ ಕೆಲವು ವರ್ಷಗಳಿಂದ ತನ್ನನ್ನು ಚಿತ್ರೋತ್ಸವಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿದೆ. 'ಬಿಫೆಸ್' ಹಿಂದುಮುಂದಿನ ಎರಡು ಮೂರು ತಿಂಗಳುಗಳಲ್ಲಷ್ಟೇ ಅಕಾಡೆಮಿಯ ಅಸ್ತಿತ್ವ ಪ್ರಕಟಗೊಳ್ಳುತ್ತದೆ. ರಾಜಕೀಯ ಆಯ್ಕೆಗಳ ಮೂಲಕ ಅಕಾಡೆಮಿಯನ್ನು ಪ್ರವೇಶಿಸುವವರಿಂದ ಹೆಚ್ಚಿನದನ್ನು ನಿರೀಕ್ಷಿಸುವುದು ಹೇಗೆ ಸಾಧ್ಯ? ಬೆಂಗಳೂರು ಚಲನಚಿತ್ರೋತ್ಸವದ ಫಲಶ್ರುತಿಯ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸಬೇಕು. ಈಗಿನ ರೂಪದಲ್ಲಿ ಚಿತ್ರೋತ್ಸವವನ್ನು ಉಳಿಸಿಕೊಳ್ಳುವುದರಿಂದ ಹಣವನ್ನು ಪೋಲು ಮಾಡಿದಂತಾಗುತ್ತದೆಯೇ ಹೊರತು. ಅದರಿಂದ ಸಿನಿಮಾ ಸಂಸ್ಕೃತಿಗೆ ಯಾವ ಪ್ರಯೋಜನವೂ ಇಲ್ಲ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

# ಮಹಾ ಶಿವರಾತ್ರಿ ಶಿವಲಿಂಗದ ವಿಧಗಳು

ಸಂಗ್ರಹ :
ಶ್ರೀ. ವಿನೋದ್ ಕಾಮತ್
ರಾಜ್ಯ ವಕ್ತಾರರು, ಸನಾತನ ಸಂಸ್ಥೆ
(ಸಂಪರ್ಕ : 9342599299)



ಹೆಚ್ಚಿನ ಮಾಹಿತಿಗಾಗಿ ಓದಿ : ಸನಾತನ ಸಂಸ್ಥೆ ನಿರ್ಮಿಸಿದ ಗ್ರಂಥ 'ಶಿವ'

### ಚಲ ಮತ್ತು ಅಚಲ

ಚಲ ಲಿಂಗವನ್ನು ಯಾವುದಾದರೊಂದು ವಿಶಿಷ್ಟ ಪೂಜೆಯನ್ನು ಮಾಡಲು ತಯಾರಿಸುತ್ತಾರೆ. ಶ್ರೀಗಣೇಶ ಚತುರ್ಥಿಗೆ ಯಾವ ರೀತಿ ಶ್ರೀಗಣೇಶನ ನೂತನ ಮೂರ್ತಿಯನ್ನು ತಯಾರಿಸಿ ನಂತರ ಅದನ್ನು ವಿಸರ್ಜನೆ ಮಾಡುತ್ತಾರೆಯೋ ಅದೇ ರೀತಿ ಇದನ್ನು ಮಾಡುತ್ತಾರೆ. ಅಚಲ ಲಿಂಗವನ್ನು ಒಂದು ಸ್ಥಳದಲ್ಲಿ ಸ್ಥಾಪಿಸಲಾಗಿರುತ್ತದೆ. ಲಿಂಗಾಯತರು ಕುತ್ತಿಗೆಯಲ್ಲಿ ಧರಿಸುವ ಲಿಂಗಕ್ಕೆ 'ಚಲ ಲಿಂಗ' ಎಂದು ಹೇಳುತ್ತಾರೆ.

### ಸ್ವಯಂಭೂ ಲಿಂಗಗಳು

ಇವುಗಳಲ್ಲಿ ಬಹಳ ಶಕ್ತಿಯಿರುತ್ತದೆ. ಆದುದರಿಂದಲೇ ಇವು ಭೂಮಿಯ ಒಳಗಿರುತ್ತವೆ. ಅವು ಭೂಮಿಯ ಮೇಲಿದ್ದರೆ ಅವುಗಳಿಂದ ಹೊರಬೀಳುವ ಶಕ್ತಿಯನ್ನು ಭಕ್ತರು ಸಹಿಸಲಾರರು. (ಕಣ್ಣುಗಳಿಂದ ಹೊರಬೀಳುವ ತೇಜದಿಂದ ದರ್ಶನಕ್ಕೆ ಬರುವ ಜನರಿಗೆ ತೊಂದರೆಯಾಗ ಬಾರದೆಂದು ತಿರುಪತಿ ಬಾಲಾಜಿಯ ಕಣ್ಣುಗಳು ಅರ್ಧಮುಚ್ಚಿರುತ್ತವೆ.) ಪೂಜೆಯನ್ನು ಮಾಡುವವರು ನೆಲದ ಮೇಲೆ ಮಲಗಿಕೊಂಡು ಕೆಳಗೆ ಕೈ ಹಾಕಿ ಲಿಂಗದ ಪೂಜೆಯನ್ನು ಮಾಡುತ್ತಾರೆ. ಜ್ಯೋತಿರ್ಲಿಂಗಗಳ ನಂತರ ಇವುಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಶಿವತತ್ತ್ವವಿರುತ್ತದೆ. ಇವು ಶಿವೇಚ್ಛೆಯಿಂದ ತಯಾರಾಗುತ್ತವೆ. ಮುಂದೆ ಯಾವುದಾದರೊಬ್ಬ ಭಕ್ತನಿಗೆ ಸಾಕ್ಷಾತ್ಕಾರವಾಗಿ ಇವುಗಳ ಅಸ್ತಿತ್ವದ ಅರಿವಾಗುತ್ತದೆ ಮತ್ತು ಅವುಗಳ ಪೂಜೆಯು ಪ್ರಾರಂಭವಾಗುತ್ತದೆ.

### ಭೂಮಿಗೆ ಸಮಾನವಾಗಿರುವ ಲಿಂಗಗಳು :

ಇವುಗಳನ್ನು ಋಷಿ ಅಥವಾ ರಾಜರು ಸ್ಥಾಪಿಸಿರುತ್ತಾರೆ. ಇವುಗಳಲ್ಲಿ ಶಕ್ತಿಯು ಕಡಿಮೆಯಿರುತ್ತದೆ. ಭಕ್ತರಿಗೆ ಈ ಶಕ್ತಿಯನ್ನು ಸಹಿಸಲು ಸಾಧ್ಯವಾಗುತ್ತದೆ. ಪೂಜೆ ಮಾಡುವವನು ಲಿಂಗದ ಪಕ್ಕದಲ್ಲಿರುವ ತಗ್ಗಿನಲ್ಲಿ ಕುಳಿತುಕೊಂಡು ಪೂಜೆಯನ್ನು ಮಾಡುತ್ತಾನೆ.

### ಭೂಮಿಯ ಮೇಲಿರುವ ಲಿಂಗಗಳು

ಇವುಗಳನ್ನು ಭಕ್ತರು ಸ್ಥಾಪಿಸಿರುತ್ತಾರೆ. ಇವುಗಳಲ್ಲಿ ಎಲ್ಲಕ್ಕಿಂತ ಕಡಿಮೆ ಮತ್ತು ಎಲ್ಲರಿಗೂ ಸಹನವಾಗುವಷ್ಟೇ ಶಕ್ತಿಯಿರುತ್ತದೆ.

ಪೂಜೆ ಮಾಡುವವರು ಲಿಂಗದ ಪಕ್ಕದಲ್ಲಿ ಕಟ್ಟಿರುವ ಕಟ್ಟೆಯ ಮೇಲೆ ಕುಳಿತುಕೊಂಡು ಪೂಜೆಯನ್ನು ಮಾಡುತ್ತಾರೆ.

ಎರಡನೆಯ ಮತ್ತು ಮೂರನೆಯ ವಿಧದ ಲಿಂಗಗಳಿಗೆ 'ಮಾನುಷ ಲಿಂಗ' ಎನ್ನುತ್ತಾರೆ. 'ಇವುಗಳನ್ನು ಮನುಷ್ಯರು ತಯಾರಿಸುವುದರಿಂದ ಇವುಗಳಿಗೆ ಮಾನುಷಲಿಂಗ ಎಂಬ ಹೆಸರು ಬಂದಿರಬಹುದು. ಈ ಲಿಂಗಗಳನ್ನು ಸ್ಥಿರಲಿಂಗಗಳೆಂದು ಪರಿಗಣಿಸಲಾಗುತ್ತದೆ. ಇವುಗಳಿಗೆ ಬ್ರಹ್ಮಭಾಗ, ವಿಷ್ಣುಭಾಗ ಮತ್ತು ರುದ್ರಭಾಗ ಎಂದು ಮೂರು ಭಾಗಗಳಿರುತ್ತವೆ. ಎಲ್ಲಕ್ಕಿಂತಲೂ ಕೆಳಗಿನ ಭಾಗಕ್ಕೆ 'ಬ್ರಹ್ಮಭಾಗ' ಎನ್ನುತ್ತಾರೆ.

ಅದು ಚತುಷ್ಕೋನಾಕಾರದ್ದಾಗಿರುತ್ತದೆ. ಮಧ್ಯದ ಅಷ್ಟಕೋನಾಕಾರದ ಭಾಗವನ್ನು 'ವಿಷ್ಣುಭಾಗ' ಎನ್ನುತ್ತಾರೆ. ಈ ಎರಡೂ ಭಾಗಗಳು ಭೂಮಿಯ ಒಳಗೆ ಇರುತ್ತವೆ. ಎಲ್ಲಕ್ಕಿಂತಲೂ ಮೇಲಿನ ಉದ್ದನೆಯ ದುಂಡಾದ ಭಾಗಕ್ಕೆ ರುದ್ರಭಾಗ ಎಂಬ ಹೆಸರಿದೆ. ಇದಕ್ಕೆ ಪೂಜೆಯ ಭಾಗವೆಂದೂ ಕರೆಯುತ್ತಾರೆ. ಏಕೆಂದರೆ ಪೂಜೆಯ ಸಾಮಗ್ರಿಗಳನ್ನು ಇದರ ಮೇಲೆಯೇ ಅರ್ಪಿಸುತ್ತಾರೆ. ಮೂರ್ತಿಶಾಸ್ತ್ರದ ಗ್ರಂಥಗಳಲ್ಲಿ ರುದ್ರಭಾಗದ ಮೇಲೆ ಕೆಲವು ರೇಖೆಗಳಿರಬೇಕು ಎಂದು ಹೇಳಲಾಗಿದೆ. ಈ ರೇಖೆಗಳಿಗೆ 'ಬ್ರಹ್ಮಸೂತ್ರಗಳು' ಎನ್ನುತ್ತಾರೆ. ದೈವಿಕ ಮತ್ತು ಆರ್ಷಕ ಲಿಂಗಗಳ ಮೇಲೆ ಇಂತಹ ರೇಖೆಗಳು ಇರುವುದಿಲ್ಲ.'

### ಗಾಳಿಯಲ್ಲಿ ತೇಲಾಡುವ ಲಿಂಗಗಳು

ಪಾದರಸದಿಂದ ತಯಾರಿಸಿದ ಸೋಮನಾಥನ ಲಿಂಗವು ನೆಲದಿಂದ ಐದು ಮೀ. ಎತ್ತರದಲ್ಲಿ ಯಾವುದೇ ಆಧಾರವಿಲ್ಲದೆ ತೇಲಾಡುತ್ತಿತ್ತು. ದರ್ಶನಾರ್ಥಿಗಳು ಅದರ ಕೆಳಗಿನಿಂದ ಹೋಗುತ್ತಿದ್ದರು. ಅದೇ ಲಿಂಗದ ಪ್ರದಕ್ಷಿಣೆಯಾಗುತ್ತಿತ್ತು.

# ಹಳೇ ಬುಲೆಟ್ ಮತ್ತು ಇಂದಿನ ಬುಲೆಟ್

**• ಭಾರತದ ದ್ವಿಚಕ್ರ ವಾಹನಗಳ ಇತಿಹಾಸದಲ್ಲಿ ''ಬುಲೆಟ್'' ಎಂಬ ಹೆಸರು ಕೇವಲ ಒಂದು ಬೈಕ್ ಅಲ್ಲ; ಅದು ಒಂದು ಭಾವನೆ, ಒಂದು ಸಂಸ್ಕೃತಿ, ಒಂದು ಗರ್ವ. ವಿಶೇಷವಾಗಿ 1980-90ರ ದಶಕದಲ್ಲಿ ರಸ್ತೆಗಳ ಮೇಲೆ ಗಂಭೀರ ಧ್ವನಿಯೊಂದಿಗೆ ಸಾಗುತ್ತಿದ್ದ ಹಳೇ ಬುಲೆಟ್‌ಗಳು ಅನೇಕ ಯುವಕರ ಕನಸುಗಳಾಗಿದ್ದವು. ಇಂದಿನ ದಿನಗಳಲ್ಲಿ ತಂತ್ರಜ್ಞಾನ, ವಿನ್ಯಾಸ ಮತ್ತು ಸೌಲಭ್ಯಗಳೊಂದಿಗೆ ಹೊಸ ರೂಪದಲ್ಲಿ ಬಂದಿರುವ ಬುಲೆಟ್, ಕಾಲಕ್ಕೆ ತಕ್ಕಂತೆ ಬದಲಾಗಿದ್ದರೂ ತನ್ನ ಮೂಲ ಆತ್ಮವನ್ನು ಇನ್ನೂ ಕಾಪಾಡಿಕೊಂಡಿದೆ. ಹಳೇ ಬುಲೆಟ್ ಮತ್ತು ಇಂದಿನ ಬುಲೆಟ್ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವುದು ಎಂದರೆ, ಕಾಲದೊಂದಿಗೆ ಬದಲಾಗಿರುವ ಜೀವನ ಶೈಲಿಯನ್ನೇ ಅರ್ಥಮಾಡಿಕೊಂಡಂತೆ.**

### ಇಂಜಿನ್ ಮತ್ತು ತಂತ್ರಜ್ಞಾನ

1980ರ ದಶಕದ ಬುಲೆಟ್‌ಗಳಲ್ಲಿ ಮುಖ್ಯವಾಗಿ ಕಾಸ್ಟ್ ಐರನ್ ಇಂಜಿನ್ ಬಳಸಲಾಗುತ್ತಿತ್ತು. ಈ ಇಂಜಿನ್‌ಗಳು ಬಲಿಷ್ಠವಾಗಿದ್ದರೂ, ನಿರಂತರ ನಿರ್ವಹಣೆಯನ್ನು ಬೇಡುತ್ತಿದ್ದವು. ಗೇರ್ ಬದಲಿಸುವಾಗ ಕೇಳಿಬರುವ ''ಥಂಪ್'' ಶಬ್ದವೇ ಅದರ ವಿಶೇಷತೆ. ಇಂದಿನ ಬುಲೆಟ್‌ಗಳಲ್ಲಿ ಅಲ್ಯೂಮಿನಿಯಂ ಇಂಜಿನ್, ಫ್ಯೂಯೆಲ್ ಇಂಜೆಕ್ಷನ್ ವ್ಯವಸ್ಥೆ, ಉತ್ತಮ ಕೂಲಿಂಗ್ ತಂತ್ರಜ್ಞಾನ ಬಳಸಲಾಗುತ್ತಿದೆ. ಇದರ ಪರಿಣಾಮವಾಗಿ ಇಂದಿನ ಬುಲೆಟ್ ಹೆಚ್ಚು ಮೈಲೇಜ್ ನೀಡುತ್ತದೆ, ಕಡಿಮೆ ಕಂಪನ ಉಂಟುಮಾಡುತ್ತದೆ ಮತ್ತು ಪರಿಸರ ಸ್ನೇಹಿಯಾಗಿದೆ.

### ಚಾಲನೆಯ ಅನುಭವ

ಹಳೇ ಬುಲೆಟ್ ಓಡಿಸುವುದು ಒಂದು ಸಾಹಸವೇ ಆಗಿತ್ತು. ಕ್ಲಚ್ ಗಟ್ಟಿಯಾಗಿರುತ್ತಿತ್ತು, ಬ್ರೇಕ್‌ಗಳು ಸರಳವಾಗಿದ್ದವು ಮತ್ತು ದೀರ್ಘ ಪ್ರಯಾಣಕ್ಕೆ ದೈಹಿಕ ಶ್ರಮ ಬೇಕಾಗುತ್ತಿತ್ತು. ಆದರೆ ಆ ಶ್ರಮದಲ್ಲೇ ಒಂದು ರೋಮಾಂಚನವಿತ್ತು. ಇಂದಿನ ಬುಲೆಟ್‌ಗಳಲ್ಲಿ ಪವರ್‌ಫುಲ್ ಡಿಸ್ಕ್ ಬ್ರೇಕ್‌ಗಳು, ವ್ಯವಸ್ಥೆ, ಸುಲಭ ಕ್ಲಚ್ ಮತ್ತು ಸ್ಮೂತ್ ಗೇರ್ ಬಾಕ್ಸ್ ಇದ್ದು, ಚಾಲನೆಯ ಅನುಭವವನ್ನು ಸುಲಭ ಮತ್ತು ಸುರಕ್ಷಿತವಾಗಿಸಿದೆ.

### ವಿನ್ಯಾಸ ಮತ್ತು ರೂಪ

ಹಳೇ ಬುಲೆಟ್‌ಗಳ ವಿನ್ಯಾಸ ಸರಳವಾಗಿತ್ತು. ದೊಡ್ಡ ಟ್ಯಾಂಕ್, ಸಣ್ಣ ಹೆಡ್‌ಲ್ಯಾಂಪ್, ಲೋಹದ ಭಾಗಗಳ ಹೆಚ್ಚಳ ಇವೆಲ್ಲವೂ ಅದರ ಗಂಭೀರ ವ್ಯಕ್ತಿತ್ವವನ್ನು ತೋರಿಸುತ್ತಿದ್ದವು.

ಬಣ್ಣಗಳ ಆಯ್ಕೆ ಕಡಿಮೆಯಿದ್ದರೂ, ಅದರ ರೌದ್ರ ಮತ್ತು ಗಂಭೀರ ರೂಪ ಜನಮನ ಸೆಳೆಯುತ್ತಿತ್ತು. ಇಂದಿನ ಬುಲೆಟ್‌ಗಳಲ್ಲಿ ಆಧುನಿಕ ವಿನ್ಯಾಸ, ಆಕರ್ಷಕ ಬಣ್ಣ ಸಂಯೋಜನೆ, ಡಿಜಿಟಲ್ ಮೀಟರ್, ಎಲ್‌ಇಡಿ ಲೈಟ್‌ಗಳು ಸೇರಿವೆ. ಆದರೂ, ಅದರ ಕ್ಲಾಸಿಕ್ ಲುಕ್ ಅನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

### ಕಾಲದೊಂದಿಗೆ ಬದಲಾವಣೆ

ಹಳೇ ಬುಲೆಟ್ ಒಂದು ಯುಗದ ಪ್ರತಿನಿಧಿಯಾಗಿದ್ದರೆ, ಇಂದಿನ ಬುಲೆಟ್ ಹೊಸ ಯುಗದ ಅಗತ್ಯಗಳಿಗೆ ತಕ್ಕಂತೆ ರೂಪುಗೊಂಡ ಪ್ರತಿರೂಪ. ಹಳೆಯದು ಶ್ರಮ ಮತ್ತು ಸಹನಶೀಲತೆಯನ್ನು ಕಲಿಸಿದರೆ, ಹೊಸದು ಸುಲಭತೆ ಮತ್ತು ಸುರಕ್ಷತೆಯನ್ನು ನೀಡುತ್ತದೆ. ಎರಡೂ ತಮ್ಮ ಕಾಲಕ್ಕೆ ತಕ್ಕಂತೆ ಮಹತ್ವವನ್ನು ಹೊಂದಿವೆ.




### ಭಾವನಾತ್ಮಕ ಸಂಬಂಧ

**ಹಳೇ ಬುಲೆಟ್‌ಗಳಿಗೆ ಮಾಲೀಕರೊಂದಿಗೆ ಒಂದು ಭಾವನಾತ್ಮಕ ಸಂಬಂಧವಿತ್ತು. ಅದರ ಶಬ್ದ, ಅದರ ತೂಕ, ಅದರ ಅಸಮರ್ಪಕತೆಗಳೂ ಸಹ ಪ್ರೀತಿ ಹುಟ್ಟಿಸುತ್ತಿದ್ದವು. ''ಬುಲೆಟ್ ಓಡಿಸುತ್ತಿದ್ದೇನೆ'' ಎನ್ನುವುದೇ ಒಂದು ಗರ್ವದ ವಿಷಯವಾಗಿತ್ತು. ಇಂದಿನ ಬುಲೆಟ್‌ಗಳು ತಂತ್ರಜ್ಞಾನದಲ್ಲಿ ಮುಂದುವರೆದರೂ, ಹಳೇ ಬುಲೆಟ್‌ನಂತಹ ಕಚ್ಚಾ ಭಾವನೆಯನ್ನು ಸಂಪೂರ್ಣವಾಗಿ ನೀಡಲಾರವು ಎನ್ನುವ ಅಭಿಪ್ರಾಯವೂ ಹಲವರಲ್ಲಿದೆ.**

### ನಿರ್ವಹಣೆ ಮತ್ತು ವೆಚ್ಚ

**ಹಳೇ ಬುಲೆಟ್ ಹೊಂದಿರುವುದು ಅಂದರೆ, ಅದನ್ನು ಕುಟುಂಬದ ಸದಸ್ಯನಂತೆ ನೋಡಿಕೊಳ್ಳಬೇಕು ಎಂಬ ಅರ್ಥ. ನಿಯಮಿತ ಸರ್ವಿಸ್, ಎಣ್ಣೆ ಬದಲಾವಣೆ, ಚಿಕ್ಕ ದೋಷಗಳಿಗೂ ತಕ್ಷಣದ ಗಮನ ? ಇವೆಲ್ಲವೂ ಅಗತ್ಯವಾಗಿತ್ತು. ಇಂದಿನ ಬುಲೆಟ್‌ಗಳು ಹೆಚ್ಚು ವಿಶ್ವಾಸಾರ್ಹವಾಗಿದ್ದು, ನಿರ್ವಹಣೆ ಸುಲಭವಾಗಿದೆ. ಸರ್ವಿಸ್ ಸೆಂಟರ್‌ಗಳ ಲಭ್ಯತೆ, ಸ್ಪೇರ್ ಪಾರ್ಟ್ಸ್ ಸುಲಭವಾಗಿ ಸಿಗುವುದು ಇಂದಿನ ಮಾಲೀಕರಿಗೆ ಅನುಕೂಲವಾಗಿದೆ.**

ಹಳೇ ಬುಲೆಟ್ ಮತ್ತು ಇಂದಿನ ಬುಲೆಟ್ ನಡುವಿನ ವ್ಯತ್ಯಾಸ ಕೇವಲ ತಂತ್ರಜ್ಞಾನ ಅಥವಾ ವಿನ್ಯಾಸದಲ್ಲಷ್ಟೇ ಅಲ್ಲ, ಅದು ಕಾಲದ ಮನಸ್ಥಿತಿಯಲ್ಲೂ ಇದೆ. ಹಳೇ ಬುಲೆಟ್ ಒಂದು ನೆನಪು, ಒಂದು ಆತ್ಮ, ಇಂದಿನ ಬುಲೆಟ್ ಒಂದು ಸೌಲಭ್ಯ, ಒಂದು ಭರವಸೆ. ಯಾವುದು ಉತ್ತಮ ಎನ್ನುವುದಕ್ಕಿಂತ, ಎರಡೂ ತಮ್ಮದೇ ಆದ ಸ್ಥಾನವನ್ನು ಇತಿಹಾಸದಲ್ಲಿ ಪಡೆದಿವೆ. ಬುಲೆಟ್ ಎಂದರೆ ಯಾವ ಕಾಲದಲ್ಲಾದರೂ, ಅದು ಒಂದು ಯಂತ್ರವಲ್ಲ, ಅದು ಒಂದು ಅನುಭವ.

☛ ವಿಶ್ವಾಸ್.ಡಿ.ಗೌಡ

## ಬಾಳ ಬದುಕಿನಲಿ...



ನಗುವಿನ ಮೋಹದಿ ನಡೆಯೋಣ
ನೋವಿನ ದೂರವಿರಿಸಿ ಬದುಕೋಣ
ಹೊಂದಾಣಿಕೆ ಯೊಂದಿಗೆ ಸಾಗೋಣ
ತೋರತ ಪ್ರೀತಿಯ ಬಾಳೋಣ......

ಬದುಕಿನ ಪಕ್ವತೆ ತಿಳಿಯಲು ನೀನು
ಎಲ್ಲವನು ನೋಡಲೇಬೇಕು ಅಲ್ಲವೇನು?
ಎಲ್ಲವ ನೀಡಿದರೆ ಆ ಭಗವಂತನು
ನೆನೆಯುವವರು ಇರುವುದೇ ಇಲ್ಲ ಅವನನು.....


ಬಾಳ ಬದುಕಿನಲಿ ಜಂಜಾಟದ ಯಾತ್ರೆ
ಉತ್ತಮ ಸಂಸಾರ ರೂಪಿಸಲು ಅದುವೆ ಸೂತ್ರ
ಎಲ್ಲವೂ ತಿಳಿಯುತ ಸಾಗುತಿರೆ ಜೀವನ
ಬದುಕಲಿ ನಿನಗೆ ಏನು ಬೇಕಾಗಿಲ್ಲ......

ಶಿಸ್ತು,ಸಂಯಮ ಹಿರಿಯರ ಮಾತು
ಸಂಸ್ಕೃತಿಯ ಜೀವನದಿ ಕಲಿಯಲೇಬೇಕು
ಇಲ್ಲವಾದರೆ ಹೇಗೆ ನೀನು ಬದುಕುವುದು ಹೇಳು
ಎಲ್ಲವೂ ಇದ್ದರೆ ಸಹ ಸಾಗದು ಜೀವನವು...

ಕಷ್ಟ ಸುಖಗಳ ಹಾದಿಯ ದಾರಿ
ಪಕ್ವತೆಯ ಭಾವವನ್ನು ತೋರುವುದು
ಕಲ್ಲು ಮುಳ್ಳುಗಳ ಮೆಟ್ಟಿ ನಿಂತರೆ
ಜೀವನದ ಪರೀಕ್ಷೆ ಎದುರಿಸಲಾಗುವುದು......

**–ಹೆಚ್. ಎಸ್. ಪ್ರತಿಮಾ ಹಾಸನ್**
ಲೇಖಕರು, ಸಾಮಾಜಿಕ ಚಿಂತಕರು, ಹಾಗೂ ಶಿಕ್ಷಕರು

# ರಾಮಾಯಣ



## ಅಂಗದನು ವಾಲಿಗೆ ಅಗ್ನಿ ಸಂಸ್ಕಾರ ಮಾಡಿದ್ದು

• ಹಿಂದಿನ ಸಂಚಿಕೆಯಿಂದ | 120 ನೆಯ ಅಧ್ಯಾಯ

ಸ್ವಲ್ಪವಾದರೂ ನಿನ್ನ ಮುಖವು ಕಾಂತಿಗುಂದಿಲ್ಲ. ಕಾಲನೇ ಶ್ರೀರಾಮನ ರೂಪವಾಗಿ ಬಂದು ಹ್ಯಾ ಪ್ರಾಣಗಳನ್ನಪಹರಿಸಿದನು. ನಿನ್ನ ಪ್ರಾಣಕಾಂಕ್ಷೆಯರಾದ ವಾನರಸ್ತ್ರೀಯರು ಅದೆಷ್ಟೋ ದೂರದಿಂದ ಕಾಲುನಡಿಗೆಯಲ್ಲಿಯೇ ಬಂದಿದ್ದಾರೆ. ಇವರನ್ನು ಕಣ್ಣು ತೆರೆದು ನೋಡಿ ಎದ್ದು ಕುಳಿತುಕೊ. ನಮ್ಮ ಸಮೀಪದಲ್ಲಿರುವ ಸುಗ್ರೀವನನ್ನೇಕೆ ಕಣ್ಣು ತೆರೆದು ನೋಡದಿದ್ದೀಯೆ ? ಸಮಸ್ತ ಕಪಿನಾಯಕರೂ ಪರಿಜನ ಪುರಜನರೂ ನಿನ್ನನ್ನು ಸುತ್ತುವರಿದು ನಿಂತಿರುವರು. ಇವರನ್ನು ಮನೆಗೆ ಕಳುಹಿಸಿ ಶ್ರೀರಾಮನ ಆಜ್ಞೆಯಿಂದ ಈ ನದೀತೀರದಲ್ಲಿರುವ ಮಳಲೊಟ್ಟುಗಳಲ್ಲಿ ನಿನ್ನ ಮನಸ್ಸುಬಂದಂತೆ ವಿಹರಿಸಿಕೊಂಡಿರೋಣ ಎಂದು ಹೇಳುತ್ತ ವಾನರ ಸ್ತ್ರೀಯರೊಡನೆ ರೋದಿಸುತ್ತಿದ್ದಳು... ಆ ಧ್ವನಿಯಿಂದ ಸಮಸ್ತ ವನಗಳೂ ರೋದನ ಮಾಡುತ್ತಿದ್ದವೋ ಎಂಬಂತೆ ಪ್ರತಿಧ್ವನಿಯುಂಟಾಗುತ್ತಿದ್ದಿತು. ಈ ರೀತಿಯಲ್ಲಿ ಬಿದ್ದು ಹೊರಳುತ್ತಿದ್ದ ತಾರಾದೇವಿಯನ್ನು ಇತರ ಸ್ತ್ರೀಯರು ಒಡಿದೆತ್ತಲು ಸುಗ್ರೀವನು ಅಂಗದನನ್ನು ಕೂಡಿಕೊಂಡು ರೋ ದನಮಾಡುತ್ತ ವಾಲಿಯ . ಶರೀರವನ್ನು ಸುಗಂಧ ಕಾಷ್ಠಗಳ ಚಿತೆಯಮೇಲಿರಿಸಿದನು. ಅಂಗದನು ವಿಧ್ಯುಕ್ತಪ್ರಕಾರವಾಗಿ ಅಪಸವ್ಯದಿಂದ ತತ್ಕಾಲೋಚಿತವಾದ ಹೋಮವನ್ನು ಮಾಡಿ ಆ ಚಿತೆಗೆ ಅಗ್ನಿಸ್ಪರ್ಶಮಾಡಿದನು. ಕಪಿನಾಯಕರು ವಿಧ್ಯುಕ್ತವಾಗಿ ವಾಲಿಗೆ ಸಂಸ್ಕಾರವನ್ನು ಮಾಡಿ ನದಿಗೆ ಹೋಗಿ ಶರ್ಪಣಾದಿಕ್ರಿಯೆಗಳನ್ನು ನೆರವೇರಿಸಿದರು. ಆ – ಸಮಯದಲ್ಲಿ ಶ್ರೀರಾಮಲಕ್ಷ್ಮಣರೂ ದುಃಖಿತರಾಗಿದ್ದರು. ಹೀಗೆ ಸುಗ್ರೀವನು ತನ್ನ ಕರ್ತವ್ಯವನ್ನು ನಿರ್ವಹಿಸಿ ಅತ್ಯಂತ ವ್ಯಾಕುಲಚಿತ್ತನಾಗಿ ಶ್ರೀರಾಮನ ಸಮೀಪಕ್ಕೆ ಹೋದನು.

ಈ ಪ್ರಕಾರ ಅಂಗದಕುಮಾರನು ವಾಲಿಗೆ ಸಂಸ್ಕಾರವನ್ನು ಮಾಡಿದಮೇಲೆ ಸುಗ್ರೀವನು ಅಂಗದಸಹಿತನಾಗಿ ಶ್ರೀರಾಮನ ಸಮೀಪಕ್ಕೆ ಹೋಗಲು ಹನುಮಂತನೇ ಮೊದಲಾದ ಕಪಿನಾಯಕರು ಕೈಮುಗಿದುಕೊಂಡು, ಋಷಿಗಳು ಬ್ರಹ್ಮದೇವನನ್ನು ಸುತ್ತಿಕೊಂಡಿರುವಂತೆ ಶ್ರೀರಾಮನನ್ನು ಸುತ್ತಿ ಕೊಂಡು ನಿಂತರು.


ಆ ಬಳಿಕ ಹನುಮಂತನು ಕೈ ಮುಗಿದು ಶ್ರೀರಾಮನನ್ನು ಕುರಿತು ಶ್ರೀರಾಮ, ನಿನ್ನ ಕೃಪೆಯಿಂದ ಸುಗ್ರೀವನಿಗೆ ಅನೇಕ ಬಲಸುಪನ್ನ ರೂ ಮಹಾಪರಾಕ್ರಮಿಗಳೂ ಆದ ಕಪಿನಾಯಕರಿಗೆ ಅಸಾಧ್ಯವಾದ ಕಿಷ್ಕಿಂಧಾಧಿಪತ್ಯವು ಪ್ರಾಪ್ತವಾಯಿತು. ಇನ್ನು ನಿನ್ನ ಅಪ್ಪಣೆಯಿಂದ ಈತನು ಅಂಗದ ಸಮೇತನಾಗಿ ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ವಾಲಿಗೆ ಮಾಡಬೇಕಾದ ಕಾರ್ಯಗಳನ್ನು ಮಾಡಿ ಮಂಗಳಸ್ನಾನವನ್ನೆ ಸಾಗಲಿ. ನಾನಾ ಪ್ರಕಾರವಾದ ಸುಗಂಧಾನುಲೇಶನ ಸುಗಂಧಪುಷ್ಪಮಾಲಿಕೆಗಳಿಂದ ನಿನ್ನನ್ನು ಅರ್ಚನೆಮಾಡುವ ಸೌಭಾಗ್ಯವನ್ನು ಪಡೆಯಲಿ. ಆದಕಾರಣ ನೀನು ಕಿಷ್ಕಿಂಧಾಪಟ್ಟಣಕ್ಕ ಬಂದು ಸುಗ್ರೀವನು ಮಾಡುವ ಸತ್ಕಾರವನ್ನು ಕೈಕೊಂಡು ಆತನಿಗೆ ಒಡೆಯನಾಗಿ ಅಭಯವನ್ನು ಕೊಟ್ಟನು ಕೊಟ್ಟು ಪರಿಪಾಲಿಸಬೇಕು ಎಂದು ಪ್ರಾರ್ಥಿಸಿಕೊಂಡನು.

ಮುಂದುವರಿಯುವುದು...

**• ಇಂದಿನ ದಿನಗಳಲ್ಲಿ, ಸಣ್ಣ ವಯಸ್ಸಿನಲ್ಲಿಯೇ ಕೂದಲು ಬೂದು ಬಣ್ಣಕ್ಕೆ(ಅಕಾಲಿಕ ಕೂದಲು ಬಿಳಿಯಾಗುವುದು) ಅಂದರೆ ಬಿಳಿಬಣ್ಣಕ್ಕೆ ತಿರುಗುವುದು ಸಾಮಾನ್ಯ ಸಮಸ್ಯೆಯಾಗಿ ಬಿಟ್ಟಿದೆ. ನಮಗೆಲ್ಲಾ ಗೊತ್ತೇ ಇರುವ ಹಾಗೆ ವಯಸ್ಸಾಗುತ್ತಾ ಹೋದಂತೆ ಕೂದಲು ಬಿಳಿಯಾಗುವುದು ಪ್ರಕೃತಿ ನಿಯಮ, ಇದನ್ನು ಯಾರಿಂದಲೂ ತಪ್ಪಿಸಲೂ ಆಗದು, ಆದರೆ ವಯಸ್ಸಲ್ಲದ ವಯಸ್ಸಿನಲ್ಲಿ ಕೂದಲು ಬಿಳಿಯಾದರೆ ಮನಸ್ಸಿಗೆ ತುಂಬಾನೇ ನೋವಾಗುತ್ತದೆ. ಸಣ್ಣ ವಯಸ್ಸಿನಲ್ಲಿಯೇ ಕೂದಲು ಬಿಳಿಯಾಗುವುದು ಎಂದರೆ ಮನಸ್ಸಿಗೆ ಯಾಕೋ ಕಿರಿಕಿರಿ ಅನಿಸುತ್ತದೆ.**

# ತೆಂಗಿನ ಎಣ್ಣೆ

## ಬಿಳಿ ಕೂದಲನ್ನು ಕಪ್ಪಾಗಿಸಬಹುದು!



**ಕೂದಲಿನ ಆರೈಕೆಯಲ್ಲಿ ತೆಂಗಿನ ಎಣ್ಣೆಯ ಪಾತ್ರ**

ತೆಂಗಿನ ಎಣ್ಣೆಯಿಂದ ತಲೆಬುರುಡೆಗೆ ಮಸಾಜ್ ಮಾಡಿದರೆ ರಕ್ತ ಪರಿಚಲನೆಯು ಉತ್ತಮವಾಗುವುದರ ಜೊತೆಗೆ ಕೂದಲಿನ ಕಿರುಚೀಲಗಳಿಗೆ ಒಳ್ಳೆಯ ಪೋಷಣೆ ಸಿಕ್ಕಂತೆ ಆಗಿ ಕೂದಲು ಉದುರುವ ಸಮಸ್ಯೆ ನಿಯಂತ್ರಣಕ್ಕೆ ಬರುತ್ತದೆ.

**ಬಿಳಿಕೂದಲಿನ ಸಮಸ್ಯೆಗೆ ತೆಂಗಿನ ಎಣ್ಣೆಯ ರೆಸಿಪಿ ಮಾಡುವುದು ಹೇಗೆ?**

ಮೊದಲು ಒಲೆಯ ಮೇಲೆ ಕಬ್ಬಿಣದ ಪ್ಯಾನ್ ಅನ್ನು ಬಿಸಿ ಮಾಡಿ ತೆಂಗಿನ ಎಣ್ಣೆಯನ್ನು ಸೇರಿಸಿ. ನಂತರ,ಎಳ್ಳೆಣ್ಣೆ ಮತ್ತು ಮೆಂತ್ಯ ಬೀಜಗಳನ್ನು ಸೇರಿಸಿ. ನಂತರ ಸ್ವಲ್ಪ ಕರಿಬೇವಿನ ಎಲೆ, ಕಲೋಂಜಿ/ ಕಪ್ಪು ಜೀರಿಗೆ ಮತ್ತು ಆಮ್ಲಾ ಪುಡಿಯನ್ನು ಸಮ ಪ್ರಮಾಣದಲ್ಲಿ ಸೇರಿಸಿ.

ಮಿಶ್ರಣವನ್ನು ಕಡಿಮೆ ಉರಿಯಲ್ಲಿ ಬಿಸಿಯಾಗಲು ಬಿಡಿ. ಇವೆಲ್ಲಾ ಮಿಶ್ರಣ ಕಪ್ಪು ಬಣ್ಣಕ್ಕೆ ತಿರುಗಿದ ಬಳಿಕ, ಗ್ಯಾಸ್ ಒಲೆ ಆಫ್ ಮಾಡಿ, ಸ್ವಲ್ಪ ಸಮಯದವರೆಗೆ ತಣಿಯಲು ಬಿಡಿ ಎಣ್ಣೆ ತಣ್ಣಗಾದ ನಂತರ, ಅದನ್ನು ಇನ್ನೊಂದು ಬಾಟಲಿಗೆ ಸೋಸಿ ಮತ್ತು ಶುದ್ಧ ಬಾಟಲಿಯಲ್ಲಿ ಸಂಗ್ರಹಿಸಿ. ಪ್ರತಿದಿನ ಈ ಎಣ್ಣೆಯನ್ನು ವಾರಕ್ಕೆ 1-2 ಬಾರಿ ನಿಮ್ಮ ಕೂದಲಿಗೆ ಹಚ್ಚುವ ಅಭ್ಯಾಸ ಮಾಡಿಕೊಳ್ಳಿ

ಈ ಎಣ್ಣೆಯಲ್ಲಿ ಕಂಡುಬರುವ ನೈಸರ್ಗಿಕ ಪದಾರ್ಥಗಳಾದ ಕರಿಬೇವು, ನೆಲ್ಲಿಕಾಯಿ ಮತ್ತು ಮೆಂತ್ಯಗಳು ಕೂದಲಿನ ಆರೋಗ್ಯಕ್ಕೆ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

- **ಕಬ್ಬಿಣದ ಪಾತ್ರೆಯಲ್ಲಿ ತಯಾರಿಸಿದ ಎಣ್ಣೆ ಕೂದಲಿಗೆ ಕಬ್ಬಿಣಾಂಶವನ್ನು ಒದಗಿಸುತ್ತದೆ ಮತ್ತು ಮೆಲನಿನ್ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ನೆರವಿಗೆ ಬರುತ್ತದೆ.**

- **ಮೊದಲು, ಒಂದು ಕಬ್ಬಿಣದ ಪ್ಯಾನ್ ತೆಗೆದುಕೊಂಡು ಅದಕ್ಕೆ ತೆಂಗಿನ ಎಣ್ಣೆ ಸೇರಿಸಿ. ಕಡಿಮೆ ಉರಿಯಲ್ಲಿ ಎಣ್ಣೆಯನ್ನು ಬಿಸಿ ಮಾಡಿ.**
- **ಈಗ ಈ ಎಣ್ಣೆಗೆ 1 ಕಪ್ ಕರಿಬೇವು ಸೇರಿಸಿ. ನಂತರ 4 ಟೀ ಚಮಚ ಮೆಂತ್ಯ ಬೀಜಗಳನ್ನು ಸೇರಿಸಿ ಮತ್ತು ಎಣ್ಣೆಯನ್ನು 15 ನಿಮಿಷಗಳ ಕಾಲ ಬಿಸಿಯಾಲು ಬಿಡಿ.**
- **ಎಣ್ಣೆ ಚೆನ್ನಾಗಿ ಬೇಯಿಸಿದ ನಂತರ, ಅದಕ್ಕೆ ಆಮ್ಲಾ ಪುಡಿಯನ್ನು ಸೇರಿಸಿ ಮತ್ತು 2 ನಿಮಿಷ ಹಾಗೆ ಸಣ್ ಉರಿಯಲ್ಲಿ ಬಿಸಿಯಾಗಲು ಬಿಡಿ.**
- **ಕರಿಬೇವು ಕಪ್ಪು ಬಣ್ಣಕ್ಕೆ ತಿರುಗಿದಾಗ, ಉರಿಯನ್ನು ಆಫ್ ಮಾಡಿ. ಎಣ್ಣೆ ತಣ್ಣಗಾದ ನಂತರ, ಅದನ್ನು ಸೋಸಿ ಮತ್ತು ಕಾಯ್ದಿರಿಸಿ.**

**ಈ ಎಣ್ಣೆಯನ್ನು ಕೂದಲಿಗೆ ಹೇಗೆ ಹಚ್ಚಬೇಕು?**

ಈ ಎಣ್ಣೆಯನ್ನು ವಾರಕ್ಕೆ ಎರಡು ಬಾರಿ ಹಚ್ಚಿ. ಮಲಗುವ ಮುನ್ನ ನಿಮ್ಮ ಕೂದಲಿಗೆ ಹಚ್ಚಿ, ನಿಮ್ಮ ಬೇರುಗಳನ್ನು ನಿಧಾನವಾಗಿ ಮಸಾಜ್ ಮಾಡಿ.

ಮರುದಿನ ಬೆಳಗ್ಗೆ ಸೌಮ್ಯವಾದ ಶಾಂಪೂ ಬಳಸಿ ನಿಮ್ಮ ಕೂದಲನ್ನು ತೊಳೆಯಿರಿ. 2 ರಿಂದ 3 ತಿಂಗಳುಗಳ ಕಾಲ ಎಣ್ಣೆಯನ್ನು ಹಚ್ಚುವುದನ್ನು ಮುಂದುವರಿಸಿ. ನೀವು ಸ್ವಲ್ಪ ಸಮಯದಲ್ಲೇ ಗಮನಾರ್ಹ ಫಲಿತಾಂಶಗಳನ್ನು ನೋಡುತ್ತೀರಿ.

ವಿದ್ಯಾರ್ಥಿಗಳಿಗೆ ಮಹಿಳಾ ಪ್ರಯಾಣಿಕರಿಗೆ, ಸಾರ್ವಜನಿಕ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಇದರಿಂದ ಅನುಕೂಲ

# ಡಿ.ಎಂ ಅಧಿಸೂಚನೆ: ಕೆಎಸ್ಆರ್‌ಟಿಸಿ ಬಸ್‌ಗಳಿಗೆ ವಿನಾಯಿತಿ

• ಉದಯವಾಹಿನಿ ಮಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್ಆರ್‌ಟಿಸಿ) ಬಸ್‌ಗಳಿಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ 1991ರ ಜ.5ರಂದು ಹಾಗೂ 1993 ರ ಏ.6ರಂದು ಹೊರಡಿಸಿದ್ದ ಅಧಿಸೂಚನೆಯ ನಿಬಂಧನೆಗಳಿಂದ ವಿನಾಯಿತಿ ನೀಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅವರು ಈ ಕುರಿತು ಆದೇಶ ಮಾಡಿದ್ದು, ಸ್ಟೇಟ್‌ಬ್ಯಾಂಕ್‌ನಿಂದ ನೇರವಾಗಿ ಜಿಲ್ಲೆಯ ವಿವಿಧ ಕಡೆಗಳಿಗೆ ಹಾಗೂ ಹೊರ ಜಿಲ್ಲೆಗಳಿಗೆ ಬಸ್ ಸೇವೆ ಆರಂಭಿಸುವುದಕ್ಕೆ ಇದ್ದ ಅಡ್ಡಿ ಇದರಿಂದಾಗಿ ನಿವಾರಣೆ ಆದಂತಾಗಿದೆ.

ಮಂಗಳೂರು ನಗರದ ಕೇಂದ್ರ ಭಾಗದಲ್ಲಿ ಸಾರ್ವಜನಿಕ ಸಮೂಹ ಸಾರಿಗೆ ಉತ್ತೇಜಿಸಲು ಮತ್ತು ವೈಯಕ್ತಿಕ ವಾಹನಗಳ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೆಎಸ್ಆರ್‌ಟಿಸಿಯ ಎಲ್ಲಾ ವಾಹನಗಳಿಗೆ ಡಿ.ಎಂ. ಅಧಿಸೂಚನೆಯಿಂದ ವಿನಾಯಿತಿ ನೀಡಲಾಗಿದೆ. ನಗರದ ಜನರಿಗೆ ಹಾಗೂ ವಿದ್ಯಾರ್ಥಿಗಳಿಗೆ, ಶಕ್ತಿ ಯೋಜನೆಯ ಪ್ರಯೋಜನ ಪಡೆಯಲು ಬಯಸುವ ಮಹಿಳಾ ಪ್ರಯಾಣಿಕರಿಗೆ, ಸಾರ್ವಜನಿಕ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಇದರಿಂದ ಅನುಕೂಲವಾಗಲಿದೆ.

ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದಲೂ ಇದು ಪ್ರಯೋಜನಕಾರಿ ಎಂದು ಜಿಲ್ಲಾಧಿಕಾರಿ ಅವರು ಆದೇಶದಲ್ಲಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

**ಪಿಎಂ ಇ-ಬಸ್ ಯೋಜನೆ ಜಾರಿಗೆ ಅನುಕೂಲ**

ಪಿ.ಎಂ ಇ ಬಸ್ ಯೋಜನೆಯಡಿ ಮಂಗಳೂರು ಕೆಎಸ್ಆರ್‌ಟಿಸಿ ವಿಭಾಗಕ್ಕೆ 100 ಇವಿ ಬಸ್‌ಗಳು ಮಂಜೂರಾಗಿವೆ. ರಾಜ್ಯ ಸರ್ಕಾರದಿಂದಲೂ 45 ಬಸ್‌ಗಳನ್ನು ಒದಗಿಸುವ ಪ್ರಸ್ತಾವ ಇದೆ. ಈ ಹೊಸ ಬಸ್‌ಗಳಿಗೆ ಮಾರ್ಗ ಹೊಂದಿಸಲು ಡಿ.ಎಂ ಅಧಿಸೂಚನೆಯಿಂದಾಗಿ ಸಮಸ್ಯೆ ಎದುರಾಗಿತ್ತು. ಅದೀಗ ನಿವಾರಣೆ ಆಗಲಿದೆ. ನಾವು ಹೆಚ್ಚು ಮುಕ್ತವಾಗಿ ಹೊಸ ಮಾರ್ಗಗಳನ್ನು ರೂಪಿಸಬಹುದು ಎಂದು ರಾಜೇಶ್ ಶೆಟ್ಟಿ ತಿಳಿಸಿದರು.

**ವಿನಾಯಿತಿಯಿಂದ ಪ್ರಯೋಜನಗಳೇನು?:** ಖಾಸಗಿ ಹಾಗೂ ಕೆಎಸ್ಆರ್‌ಟಿಸಿ ಬಸ್‌ಗಳು ಸ್ಟೇಟ್‌ಬ್ಯಾಂಕ್, ಮಂಗಳಾದೇವಿ, ಕೇಂದ್ರ ರೈಲು ನಿಲ್ದಾಣ, ಹಳೆಬಂದರು ಮೊದಲಾದ ಪ್ರದೇಶಗಳಿಗೆ ಹೊಸ ಬಸ್ ಸೇವೆ ಆರಂಭಿಸಲು ಡಿ.ಎಂ. ಅಧಿಸೂಚನೆಯಡಿ ನಿರ್ಬಂಧವಿತ್ತು. ಹಾಗಾಗಿ ಕೆಎಸ್ಆರ್‌ಟಿಸಿ ಹೊಸ ಸೇವೆಗಳನ್ನು ಆರಂಭಿಸುವಾಗ ಅನಿವಾರ್ಯವಾಗಿ ಪಂಪ್‌ವೆಲ್ - ಬಲ್ಲಾಳ್‌ಬಾಗ್ - ಹಾಸ್ಟೆಲ್ - ಪಿವಿಎಸ್ - ಲಾಲ್‌ಬಾಗ್ - ಕೆಎಸ್ಆರ್‌ಟಿಸಿ ಮಾರ್ಗವನ್ನು ಅನುಸರಿಸಬೇಕಾಗಿತ್ತು.

ಉಡುಪಿ ಕಡೆಯಿಂದ ಬರುವ ಬಸ್‌ಗಳು ಕೊಟ್ಟಾರಚೌಕಿಯಿಂದ ಲೇಡಿಹಿಲ್-ಲಾಲ್‌ಬಾಗ್-ಮಾರ್ಗವಾಗಿ ಕೆಎಸ್ಆರ್‌ಟಿಸಿ ಬಸ್‌ನಿಲ್ದಾಣಕ್ಕೆ ತಲುಪಬೇಕಿತ್ತು. ಸ್ಟೇಟ್‌ಬ್ಯಾಂಕ್ ಸಂಪರ್ಕಿಸುವ ಮಾರ್ಗಗಳಿಗೆ ಸಾಮಾನ್ಯವಾಗಿ ಬೇಡಿಕೆ ಹೆಚ್ಚು. ಪ್ರಯಾಣಿಕರಿಗೂ ಈ ಮಾರ್ಗದಿಂದ ಅನುಕೂಲ ಜಾಸ್ತಿ. ಸ್ಟೇಟ್ ಬ್ಯಾಂಕ್, ಮಂಗಳಾದೇವಿ, ವೆಲೆನ್ಸಿಯಾ, ಫಳ್ನೀರ್ ಮಾರ್ಗಗಳಲ್ಲಿ ಬಸ್ ಸಂಪರ್ಕ ಕಲ್ಪಿಸಲು ಇದ್ದ ನಿರ್ಬಂಧ ಈಗ ತೆರವಾದಂತಾಗಿದೆ. ನಾವು ಇನ್ನು ಹೊಸತಾಗಿ ಆರಂಭಿಸುವ ಬಸ್‌ಗಳು ಈ ಮಾರ್ಗಗಳಲ್ಲೂ ಸಂಚರಿಸುವುದಕ್ಕೆ ಅವಕಾಶ ಸಿಗಲಿದೆ ಎಂದು ಕೆಎಸ್ಆರ್‌ಟಿಸಿ ಮಂಗಳೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ ತಿಳಿಸಿದರು. ಕಾಸರಗೋಡು, ಉಡುಪಿ ಮತ್ತಿತರ ಹೊರ ಜಿಲ್ಲೆಗಳಿಗೆ 1991ರ ಬಳಿಕ ಕೆಎಸ್ಆರ್‌ಟಿಸಿ ಹೊಸ ಬಸ್ ಸೇವೆ ಆರಂಭಿಸಿದಾಗ ಸ್ಟೇಟ್ ಬ್ಯಾಂಕ್ ಪ್ರದೇಶಕ್ಕೆ ಸಂಚಾರ ನಿರ್ಬಂಧ ಇತ್ತು. ಅದು ತೆರವಾಗಿದೆ. ಇನ್ನೂ ಈ ಬಸ್‌ಗಳನ್ನು ಸ್ಟೇಟ್‌ಬ್ಯಾಂಕ್‌ನಿಂದ ಆರಂಭಿಸಲು ಅವಕಾಶ ಸಿಗಲಿದೆ ಎಂದರು.

**ಕಾರ್ಯಾಚರಣೆಗೆ ಇದ್ದ ಅಡ್ಡಿ ನಿವಾರಣೆ**

ಕೆಎಸ್ಆರ್‌ಟಿಸಿ ಬಸ್‌ಗಳಿಗೆ ಡಿ.ಎಂ. ಅಧಿಸೂಚನೆಯ ನಿರ್ಬಂಧದಿಂದ ವಿನಾಯಿತಿ ಸಿಕ್ಕರೂ ತಕ್ಷಣವೇ ಎಲ್ಲಾ ಬಸ್‌ಗಳ ಸೇವೆಯನ್ನು ಸ್ಟೇಟ್ ಬ್ಯಾಂಕ್‌ನಿಂದ ಆರಂಭಿಸುವುದಿಲ್ಲ. ಹೊಸ ಬಸ್ ಸೇವೆಗಳನ್ನು ಆರಂಭಿಸುವಾಗ ಆದಷ್ಟು ಹೆಚ್ಚು ಬಸ್‌ಗಳು ಸ್ಟೇಟ್ ಬ್ಯಾಂಕ್ ತಲುಪುವಂತೆ ಯೋಜನೆ ರೂಪಿಸುತ್ತೇವೆ. ಸುರತ್ಕಲ್-ತಲಪಾಡಿ, ಸುರತ್ಕಲ್- ಫರಂಗಿಪೇಟೆ ಮುಂತಾದ ಹೊಸ ಮಾರ್ಗಗಳಲ್ಲೂ ಬಸ್ ಸೇವೆ ಆರಂಭಿಸಲಿದ್ದೇವೆ ಎಂದು ಅವರು ತಿಳಿಸಿದರು. 2019ರ ಬಳಿಕ ರಾಜ್ಯ ಸರ್ಕಾರ ಖಾಸಗಿಯವರಿಗೆ ಸ್ಟೇಜ್ ಕ್ಯಾರಿಯೇಜ್ ಪರವಾನಗಿ ನೀಡುತ್ತಿಲ್ಲ. ಕೆಎಸ್ಆರ್‌ಟಿಸಿಗೆ ಮಾತ್ರ ಈ ಅವಕಾಶ ಇದೆ. ಹಾಗಾಗಿ ಭವಿಷ್ಯದಲ್ಲಿ ಕೆಎಸ್ಆರ್‌ಟಿಸಿ ಕಾರ್ಯಾಚರಣೆ ವಿಸ್ತರಣೆ ದೃಷ್ಟಿಯಿಂದಲೂ ಈ ವಿನಾಯಿತಿಯು ಬಹಳ ಪ್ರಯೋಜನಕಾರಿ ಎಂದು ಅವರು ಅಭಿಪ್ರಾಯಪಟ್ಟರು.

> ಡಿ.ಎಂ. ಅಧಿಸೂಚನೆಯ ನಿಬಂಧನೆಗಳಿಂದ ಕೆಎಸ್ಆರ್‌ಟಿಸಿ ಬಸ್‌ಗಳಿಗೆ ವಿನಾಯಿತಿ ನೀಡಿರುವುದು ಸ್ವಾಗತಾರ್ಹ. ಇನ್ನು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಮುಕ್ತವಾಗಿ ಮಾರ್ಗಗಳನ್ನು ಹೊಂದಿಸಬಹುದು
> -ರಾಜೇಶ್ ಶೆಟ್ಟಿ, ವಿಭಾಗೀಯ ನಿಯಂತ್ರಣಾಧಿಕಾರಿ ಕೆಎಸ್ಆರ್‌ಟಿಸಿ ಮಂಗಳೂರು ವಿಭಾಗ

---

## ಇಬ್ಬರು ಅಂತರ್‌ರಾಜ್ಯ ಕಳ್ಳರ ಬಂಧನ 17.50 ಲಕ್ಷರೂ ಮೌಲ್ಯದ ನಗನಾಣ್ಯ ವಶ

• ಉದಯವಾಹಿನಿ ಕಲಬುರಗಿ

ಸೇಡಂ ತಾಲ್ಲೂಕಿನ ಭೂತಪೂರ ಗ್ರಾಮದ ಮನೆಗಳ್ಳತನದಲ್ಲಿ ಭಾಗಿಯಾಗಿದ್ದ ಇಬ್ಬರು ಅಂತರ್ ರಾಜ್ಯ ಕಳ್ಳರನ್ನು ಬಂಧಿಸಿದ ಮುಧೋಳ ಠಾಣೆ ಪೊಲೀಸರು ಬಂಧಿತರಿಂದ 17.50 ಲಕ್ಷ ರೂ ಮೌಲ್ಯದ ಬೆಳ್ಳಿ ಬಂಗಾರದ ಆಭರಣ ಮತ್ತು ಕೃತ್ಯಕ್ಕೆ ಬಳಸಿದ ಮೋಟರ್ ಸೈಕಲ್ ವಶಪಡಿಸಿಕೊಂಡಿದ್ದಾರೆ ಎಸ್ಪಿ ಅಡ್ಡೂರು ಶ್ರೀನಿವಾಸಲು ಅವರು ತಿಳಿಸಿದರು. ಶಿಲಾರಕೋಟ ಗ್ರಾಮದ ಶ್ರೀನಿವಾಸ ಸಾಯಪ್ಪ ಬೈರಗೊಂಡ ಮತ್ತು ನವೀನ ನರಸಪ್ಪ ಕುರುಕು ಬಂಧಿತ ಆರೋಪಿಗಳು.

ಜನವರಿ 29 ರಂದು ಭೂತಪೂರ ಗ್ರಾಮದ ಕಾಶಿನಾಥ ಏನಕಿ ಎಂಬುವವರ ಮನೆಯಲ್ಲಿ ಅಲ್ಮಾರಿ ಮುರಿದು 113 ಗ್ರಾಮ್ ಚಿನ್ನ,444 ಗ್ರಾಮ್ ಬೆಳ್ಳಿ ಮತ್ತು 10 ಸಾವಿರ ರೂ ನಗದು ಹಣ ಕಳ್ಳರು ದೋಚಿಕೊಂಡ ಹೋದ ಬಗ್ಗೆ ಮುಧೋಳ ಠಾಣೆಗೆ ದೂರು ಸಲ್ಲಿಸಲಾಗಿತ್ತು.

## ಸಮರ್ಥವಾಗಿ ವಾದ ಮಂಡಿಸಿ; ಬೆಲ್ಲದ

• ಉದಯವಾಹಿನಿ ಹುಬ್ಬಳ್ಳಿ

ಕಳಸಾ ಬಂಡೂರಿ, ಮಹದಾಯಿ ಯೋಜನೆ ವಿಷಯ ಸುಪ್ರೀಂ ಕೋರ್ಟ್‌ನಲ್ಲಿದೆ. ಅಲ್ಲಿ ಪರಿಹಾರ ಸಿಗದೇ ಮುಂದುವರಿಯಲಾಗದು. ಪ್ರಕರಣವನ್ನು ಬೇಗ ಇತ್ಯರ್ಥಪಡಿಸಲು ಕಾಂಗ್ರೆಸ್ ಸರ್ಕಾರ ಪ್ರಯತ್ನಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಒತ್ತಾಯಿಸಿದರು.

ಯೋಜನೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಲ್ಲಾ ವಿಷಯ ಗೊತ್ತಿದ್ದರೂ ಹುಬ್ಬಳ್ಳಿಯ ಶಿರಗುಪ್ಪಿಯಲ್ಲಿ ಸುಳ್ಳು ಹೇಳಿ, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಿದ್ದು ಅವರಿಗೆ ಶೋಭೆ ತರುವುದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕಾನೂನು ಸಚಿವ ಎಚ್.ಕೆ.ಪಾಟೀಲರು ಹಿಂದೆ ಕೃಷ್ಣಯ ಕಣ್ಣೀರ ಕಥೆ ವ್ಯಥೆ' ಪುಸ್ತಕ ಬರೆದಿದ್ದರು. ಈಗ ಮೌನ ವಹಿಸಿದ್ದಾರೆ. ಅವರು ಯುಕೆಪಿ ಯೋಜನೆಗೆ ರೂ.20 ಸಾವಿರ ಕೋಟಿ ಕೊಡಿಸಬೇಕು ಎಂದು ಆಗ್ರಹಿಸಿದರು.

## ಕನ್ನೂರಿನಲ್ಲಿ ಲಘು ಭೂಕಂಪ: ಭಯಭೀತರಾಗಿ ಮನೆಯಿಂದ ಹೊರಗೆ ಓಡಿದ ಜನ

• ಉದಯವಾಹಿನಿ ವಿಜಯಪುರ

ತಾಲ್ಲೂಕಿನ ಕನ್ನೂರು ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ 11.43ಕ್ಕೆ ಲಘು ಭೂಕಂಪನವಾಗಿದೆ. ರಿಕ್ಟರ್ ಮಾಪಕದಲ್ಲಿ 2.6 ಭೂಕಂಪನದ ತೀವ್ರತೆ ದಾಖಲಾಗಿದೆ. ಭೂಮಿ ಒಳಗಿನಿಂದ ಸ್ಫೋಟದ ಸದ್ದು ಕೇಳಿ ಬಂದಿದೆ. ಭೂಮಿ ಕಂಪಿಸಿದ್ದರಿಂದ ಜನರು ಭಯಭೀತರಾಗಿ ಮನೆಯಿಂದ ಹೊರಗೆ ಓಡಿಬಂದಿದ್ದಾರೆ.

ಭೂಕಂಪನ ತೀವ್ರತೆ ಕಡಿಮೆಯಿದ್ದು, ಈ ರೀತಿಯ ಭೂಕಂಪವು ಸ್ಥಳೀಯರಿಗೆ ಯಾವುದೇ ಹಾನಿಯನ್ನುಂಟು ಮಾಡುವುದಿಲ್ಲ.ಭೂಕಂಪನ ಕೇಂದ್ರಬಿಂದುವು ಭೂಕಂಪನ ವಲಯ ಮೂರರಲ್ಲಿ ಬರುವುದರಿಂದ ಜನರು ಭಯಭೀತರಾಗಬೇಕಾಗಿಲ್ಲ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರವು ಪ್ರಕಟಣೆಯಲ್ಲಿ ತಿಳಿಸಿದೆ.

---

ಮೇಲ್ತೊಟ್ಟಿ ಸ್ವಚ್ಛತೆ ಮರಿಚಿಕೆ, ಆರೋ ಪ್ಲಾಂಟ್ ಇದ್ದರೂ ನೀರು ಇಲ್ಲ

# ಮಸ್ಕನಳ್ಳಿ ಗ್ರಾಮದಲ್ಲಿ ಸಾಂಕ್ರಾಮಿಕ ರೋಗದ ಭೀತಿ.!

• ಉದಯವಾಹಿನಿ ಯಾದಗಿರಿ

ತಾಲ್ಲೂಕಿನ ಹಳಗೇರಾ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಮಸ್ಕನಳ್ಳಿ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಗಂಭೀರ ಕೊರತೆ, ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆ ದಿನೇದಿನೇ ಉಲ್ಬಣಗೊಂಡಿದ್ದು, ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಅಖಿಲ ಭಾರತೀಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಸಾಮಾಜಿಕ ಹೋರಾಟಗಾರ ಉಮೇಶ್ ಕೆ. ಮುದ್ನಾಳ ಅವರು ಜಿಲ್ಲಾಡಳಿತಕ್ಕೆ ಪ್ರಶ್ನಿಸಿದರು.

ಗ್ರಾಮಕ್ಕೆ ಭೇಟಿ ನೀಡಿದ ಅವರು ತಮಟೆ ಬಾರಿಸುವ ಮೂಲಕ ಸ್ಥಳದಲ್ಲೇ ದಿಢೀರ್ ಪ್ರತಿಭಟನೆ ನಡೆಸಿ, ಜನರ ಸಮಸ್ಯೆಗಳತ್ತ ಅಧಿಕಾರಿಗಳ ಗಮನ ಸೆಳೆದರು. ಮಸ್ಕನಳ್ಳಿ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಎರಡು ನೀರಿನ ಮೇಲ್ತೊಟ್ಟಿಗಳನ್ನು ತಕ್ಷಣ ಸ್ವಚ್ಛಗೊಳಿಸಬೇಕು ಹಾಗೂ ಶುದ್ಧ ಕುಡಿಯುವ ನೀರಿನ ಘಟಕ (ಆರೋ ಪ್ಲಾಂಟ್) ಅನ್ನು ಕೂಡಲೇ ಜನಬಳಕೆಗೆ ಆರಂಭಿಸಬೇಕು ಎಂದು ಆಗ್ರಹಿಸಿದರು. ಶುದ್ಧ ನೀರು ಸಿಗದೆ ಜನರು ಹಾಗೂ ಜಾನುವಾರುಗಳು ತೀವ್ರ ಸಂಕಷ್ಟ ಎದುರಿಸುತ್ತಿವೆ ಎಂದು ಹೇಳಿದರು.

ಗ್ರಾಮದಲ್ಲಿ ಕುಡಿಯುವ ನೀರು ಹಲವು ಕಡೆ ಸೋರಿಕೆಯಾಗುತ್ತಿದ್ದು, ಕಲುಷಿತ ನೀರಿನ ಮಿಶ್ರಣದಿಂದ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಚರಂಡಿ ವ್ಯವಸ್ಥೆ ಇಲ್ಲದ ಕಾರಣ ತಗ್ಗು ಪ್ರದೇಶಗಳಲ್ಲಿ ನೀರು ನಿಂತು ಸೊಳ್ಳೆಗಳ ಉತ್ಪತ್ತಿ ಕೇಂದ್ರಗಳಾಗಿವೆ. ಅಲ್ಲದೆ ವಿದ್ಯುತ್ ಕಂಬಗಳು ಬಾಗಿ ನಿಂತಿದ್ದು, ಮನೆಯ ಮೇಲಿಂದ ವಿದ್ಯುತ್ ತಂತಿಗಳು ಜೋತು ಬಿದ್ದಿರುವುದರಿಂದ ಅನಾಹುತದ ಆತಂಕ ನಿರ್ಮಾಣವಾಗಿದೆ ಎಂದು ದೂರಿದರು. ಗ್ರಾಮಕ್ಕೆ ಹೋಗುವ ರಸ್ತೆಯ ಎರಡೂ ಬದಿಯ ಜಾಲಿ ಕಂಟಿ ತೆರವು, ಚರಂಡಿ ಸ್ವಚ್ಛತೆ ಹಾಗೂ ಬ್ಲೀಚಿಂಗ್ ಪೌಡರ್ ಸಿಂಪಡಿಸುವಂತೆ ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಭೀಮಾಶಂಕರ, ಪವನ್, ಮಲ್ಲಿಕಾರ್ಜುನ, ಮಲ್ಲಪ್ಪ, ರಫೀಕ್, ಯಲ್ಲಪ್ಪ, ಶಾಣಪ್ಪ, ಆಂಜನೇಯ, ಖಾಸಿಂಮ್, ಹಣಮಂತ, ಅಲ್ಲಿಸಾಬ, ಮಾಂತೇಶ್, ಜಗಪ್ಪ, ದೈದಪ್ಪ, ಬಸಪ್ಪ, ಚಂದ್ರಕಾಂತ್, ಕಾಶಪ್ಪ, ದೇವಪ್ಪ, ನಾಗಪ್ಪ, ಮಹ್ಮದ್, ಫಕೀರ್, ಶಬೀರ್, ಸುಫೀಸಾಬ್ ವಲ್ಲಿ, ಶೀವರಡ್ಡಿ, ಖಾಜಸಾಬ್, ಮೈಬುಸಾಬ್, ಚೀರಂಜೀವಿ ಸಾಬಯ್ಯ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

**ತಕ್ಷಣ ತಂಡ ರಚಿಸಿ ತನಿಖೆ ನಡೆಸಬೇಕು**

ಕಲುಷಿತ ನೀರಿನಿಂದ ಈ ಹಿಂದೆಯೇ ಜಿಲ್ಲೆಯಲ್ಲಿ ಸಾವು-ನೋವು ಪ್ರಕರಣಗಳು ವರದಿಯಾಗಿವೆ. ಆದ್ದರಿಂದ ಮೇಲ್ತೊಟ್ಟಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೂಡಲೇ ಜನಬಳಕೆಗೆ ಆರಂಭಿಸಬೇಕು. ಇಲ್ಲದಿದ್ದರೆ ಹಳಗೇರಾ ಪಂಚಾಯತ್ ಎದುರು ಜಾಲಿ ಮುಳ್ಳು ಹಚ್ಚಿ ತೀವ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

## ಹಾವೇರಿಯಲ್ಲಿ 1.10 ಲಕ್ಷ ಹಕ್ಕುಪತ್ರ ವಿತರಣೆ: ಸಚಿವ

• ಉದಯವಾಹಿನಿ ಗದಗ

ತಾಂಡಾ ಹಾಗೂ ಹಟ್ಟಿಗಳ ದಾಖಲೆರಹಿತ ವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಕ್ರಮದಡಿ ಹಿಂದಿನ ಆರು ವರ್ಷಗಳಲ್ಲಿ ಒಂದು ಲಕ್ಷ ಹಕ್ಕುಪತ್ರ ವಿತರಿಸಲಾಗಿತ್ತು. ನಮ್ಮ ಸರ್ಕಾರ ಎರಡೂವರೆ ವರ್ಷದ ಅವಧಿಯಲ್ಲಿ 1.10 ಲಕ್ಷ ಜನರಿಗೆ ಹಕ್ಕುಪತ್ರ ನೀಡಲಾಗಿದೆ. ಫೆ.14ರಂದು ಹಾವೇರಿಯಲ್ಲಿ ಸಮಾವೇಶ ನಡೆಸಿ ಇದೇ ಸಂಖ್ಯೆಯ ಹಕ್ಕುಪತ್ರಗಳನ್ನು ವಿತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.



ಕಂದಾಯ ಇಲಾಖೆಯನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಿ ಸಾರ್ವಜನಿಕರಿಗೆ ಪಾರದರ್ಶಕ ಸೇವೆ ಒದಗಿಸುವುದು ಸರ್ಕಾರದ ಗುರಿಯಾಗಿದ್ದು, ಇದರಿಂದ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಬೀಳಲಿದೆ ಎಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದಲ್ಲಿ ಮೃತರ ಹೆಸರಿನಲ್ಲಿ ಉಳಿದಿದ್ದ 49 ಲಕ್ಷ ಜಮೀನುಗಳನ್ನು ಗುರುತಿಸಿ ವಾರಸುದಾರರಿಗೆ ಹಸ್ತಾಂತರಿಸುವ ಕಾರ್ಯ ನಡೆಯುತ್ತಿದೆ. ಈಗಾಗಲೇ 12 ಲಕ್ಷ ಮೂಲ ವಾರಸುದಾರರಿಗೆ ಜಮೀನು ಹಸ್ತಾಂತರಿಸಲಾಗಿದೆ. ಗ್ರಾಮ ಲೆಕ್ಕಾಧಿಕಾರಿಗಳು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದು, ಅವರಿಗೆ ಪ್ರೋತ್ಸಾಹಧನವಾಗಿ ರೂ.5 ಕೋಟಿ ನೀಡಲು ಸರ್ಕಾರ ತೀರ್ಮಾನಿಸಿದೆ ಎಂದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ರಾಜ್ಯದ ತಹಶೀಲ್ದಾರ್ ಕಚೇರಿಗಳಲ್ಲಿ 10,774 ಅವಧಿ ಮೀರಿದ ಪ್ರಕರಣಗಳಿದ್ದವು. ವಿಶೇಷ ಅಭಿಯಾನ ಹಮ್ಮಿಕೊಂಡು ಅವುಗಳನ್ನು ವಿಲೇವಾರಿ ಮಾಡಲಾಗಿದ್ದು, ಸದ್ಯ 478 ಪ್ರಕರಣ ಮಾತ್ರ ಬಾಕಿ ಉಳಿದಿವೆ. ಅವುಗಳನ್ನೂ ಶೀಘ್ರ ಇತ್ಯರ್ಥಗೊಳಿಸಲು ಸೂಚನೆ ನೀಡಲಾಗಿದೆ' ಎಂದರು.

ಬಗರ್ ಹುಕುಂ ರೈತರ ಜಮೀನುಗಳ ಸರ್ವೆ ಮತ್ತು ಆರ್.ಟಿ.ಸಿ ಸಮಸ್ಯೆ ನಿವಾರಣೆಗೆ ನನ್ನ ಭೂಮಿ ಅಭಿಯಾನ' ಆರಂಭಿಸಲಾಗಿದೆ. 2013-18ರ ಅವಧಿಯಲ್ಲಿ 5,842 ಪೋಡಿ ದುರಸ್ತಿ ಆಗಿದ್ದರೆ, 2018-23ರಲ್ಲಿ 8,500 ಪ್ರಕರಣಗಳು ವಿಲೇವಾರಿಯಾಗಿವೆ. ಜನವರಿ 2025ರಿಂದ ಆರಂಭವಾದ ಅಭಿಯಾನದಡಿ ಸದ್ಯ ರಾಜ್ಯದಾದ್ಯಂತ 1,93,615 ಪ್ರಕರಣಗಳಲ್ಲಿ ಸರ್ವೆ ಮತ್ತು ಪೋಡಿ ದುರಸ್ತಿ ನಡೆಯುತ್ತಿದೆ. ಅಧಿಕಾರಿಗಳು ಮನೆಬಾಗಿಲಿಗೆ ತೆರಳಿ ಸೇವೆ ನೀಡುತ್ತಿರುವುದು ಸರ್ಕಾರದ ಬದ್ಧತೆಯ ಕಾರ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಹಳೆ ದಾಖಲೆಗಳ ನಕಲಿ ತಡೆಗಟ್ಟಲು ಭೂಸುರಕ್ಷಾ ಯೋಜನೆ ಅಡಿ 64 ಲಕ್ಷಕ್ಕೂ ಹೆಚ್ಚು ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ. ಸಾರ್ವಜನಿಕರು ಆನ್‌ಲೈನ್‌ನಲ್ಲೇ ಕಂದಾಯ ದಾಖಲೆಗಳನ್ನು ಪಡೆಯುವ ವ್ಯವಸ್ಥೆ ಮಾಡಲಾಗಿದ್ದು, ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಲಿದೆ. ಭೂಮಿಯ ಮಾಲೀಕತ್ವಕ್ಕೆ ಗ್ಯಾರಂಟಿ ನೀಡುವ ಉದ್ದೇಶದಿಂದ ಯೋಜನೆ ಜಾರಿಗೆ ತರಲಾಗಿದೆ ಎಂದರು.

## ಶುದ್ಧ ಕುಡಿಯುವ ನೀರು ಮರೀಚಿಕೆ

• ಉದಯವಾಹಿನಿ ಅಳವಂಡಿ

ಸಮೀಪದ ಮತ್ತೂರು ಗ್ರಾಪಂ ವ್ಯಾಪ್ತಿಯ ಹನಕುಂಟಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಗಿತಗೊಂಡಿದ್ದು, ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಮರೀಚಿಕೆಯಾಗಿದೆ. ಕೊಪ್ಪಳ ತಾಲ್ಲೂಕಿನ ಹನಕುಂಟಿ ಗ್ರಾಮ ಸೂಮಾರು 2000 ಜನಸಂಖ್ಯೆ ಹೊಂದಿದೆ. ಆದರೆ ಗ್ರಾಮದ ಜನರಿಗೆ ಶುದ್ಧ ಕುಡಿಯುವ ನೀರಿನ ಬರ ಕಾಡುತ್ತಿದೆ. ಶುದ್ಧ ಕುಡಿಯುವ ನೀರು ಪೂರೈಕೆಗೆ ಸರ್ಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿದ್ದು, ಅಧಿಕಾರಿಗಳ, ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಸಧ್ಯ ಕುಡಿಯುವ ನೀರಿನ ಘಟಕ ಬಂದ್ ಆಗಿದೆ ಎನ್ನುತ್ತಾರೆ ಗ್ರಾಮಸ್ಥರು.

ಘಟಕ ಸ್ಥಾಪನೆಯಾದಾಗ ಕೆಲವು ದಿನ ಮಾತ್ರ ಆರಂಭ ಇತ್ತು. ಕುಡಿಯುವ ನೀರಿನ ಘಟಕ ಬಂದ್ ನಂತರ ಘಟಕದಲ್ಲಿನ ಸಾಮಾಗ್ರಿಗಳು ತುಕ್ಕು ಹಿಡಿಯುತ್ತಿವೆ ಎಂದು ಸಾರ್ವಜನಿಕರು ಆರೋಪಿಸುತ್ತಾರೆ.

ಸದ್ಯ ಗ್ರಾಮಸ್ಥರು ಕುಡಿಯಲು ಬೋರವೇರ್ ನೀರನ್ನು ಅವಲಂಬಿಸಿದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕ ಪ್ರಾರಂಭಿಸುವಂತೆ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಹಲವಾರು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎನ್ನುತ್ತಾರೆ ಇಲ್ಲಿನ ಗ್ರಾಮಸ್ಥರು.

---

## ಹೆದ್ದಾರಿ ಬದಿಯ ಅಂಗಡಿಗಳ ತೆರವು: ಸ್ಥಳೀಯಾಡಳಿತ ಲೋಕೋಪಯೋಗಿ ಇಲಾಖೆ ಕಾರ್ಯಾಚರಣೆ

• ಉದಯವಾಹಿನಿ ಉಳ್ಳಾಲ

ಸಾರ್ವಜನಿಕ ದೂರು ಹಾಗೂ ಅಪಘಾತದ ಕಾರಣದಿಂದ ಲೋಕೋಪಯೋಗಿ ಇಲಾಖೆ ಹಾಗೂ ಸ್ಥಳೀಯಾಡಳಿತದ ನೇತೃತ್ವದಲ್ಲಿ ತೊಕ್ಕೊಟ್ಟು- ಮಂಗಳೂರು ವಿಶ್ವವಿದ್ಯಾನಿಲಯ ರಸ್ತೆಯ ತೊಕ್ಕೊಟ್ಟುವಿನಿಂದ ಅಸೈಗೋಳಿವರೆಗೆ ಹೆದ್ದಾರಿ ಬದಿಯ ಗೂಡಂಗಡಿಗಳ ತೆರವು ಕಾರ್ಯಾಚರಣೆ ಸೋಮವಾರ ನಡೆಯಿತು. ಎರಡು ಜೆಸಿಬಿಗಳು ಹಾಗೂ 10 ಮಂದಿ ಕಾರ್ಮಿಕರು ಕಾರ್ಯನಿರ್ವಹಿಸಿ ಸುಮಾರು 50 ಗೂಡಂಗಡಿಗಳನ್ನು ತೆರವು ಗೊಳಿಸಿದರು.

ಹೆದ್ದಾರಿ ಸಮೀಪದ ಗೂಡಂಗಡಿ, ಬೀದಿ ಬದಿ ವ್ಯಾಪಾರದ ಶೆಡ್ ತೆರವುಗೊಳಿಸುವಂತೆ ಸಾರ್ವಜನಿಕರ ದೂರು ಆಧರಿಸಿ ಫೆ.2ರಂದು ಸೂಚನೆ ಅಂಟಿಸಲಾಗಿತ್ತು. ಫೆ.5ರ ಒಳಗೆ ತೆರವು ನಡೆಸುವಂತೆ ಸೂಚನೆ ನೀಡಲಾಗಿತ್ತು. ಉಳ್ಳಾಲ ನಗರಸಭೆ ವ್ಯಾಪ್ತಿಯಲ್ಲಿ ಬಸ್ ನಿಲ್ದಾಣದ 100 ಮೀ. ಅಂತರದಲ್ಲಿ ಎಲ್ಲಿಯೂ ಮೀನು ಮಾರಾಟ ನಡೆಸದಂತೆಯೂ ಸೂಚಿಸಲಾಯಿತು. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪ್ರೀತಮ್, ಸಹಾಯಕ ಇಂಜಿನಿಯರ್ ದಾಸ್ ಪ್ರಕಾಶ್, ಉಳ್ಳಾಲ ನಗರಸಭೆ ಆಯುಕ್ತ ಸಂತೋಷ್, ಆರೋಗ್ಯ ಅಧಿಕಾರಿ ನವೀನ್ ಕುಮಾರ್, ಬೆಳ್ಳ ಅಭಿವೃದ್ಧಿ ಅಧಿಕಾರಿ ರಮೇಶ್, ಉಳ್ಳಾಲ, ಕೊಣಾಜೆ ಮತ್ತು ಸಿಎಆರ್ ಸಿಬ್ಬಂದಿ ಭಾಗಿಯಾಗಿದ್ದರು.


ಉದಯವಾಹಿನಿ ಚಿತ್ರ

## ಭಾರತವನ್ನು ಪ್ರೀತಿಸುವವರೆಲ್ಲ ಹಿಂದೂಗಳೆ: ದಿಲೀಪ ವರ್ಣೇಕರ

• ಉದಯವಾಹಿನಿ ಔರಾದ್

ಭಾರತದಲ್ಲಿ ಹುಟ್ಟಿ ಭಾರತವನ್ನು ಪ್ರೀತಿಸುವ ಪ್ರತಿಯೊಬ್ಬರು ಸಹ ಹಿಂದೂಗಳೆ ಎಂದು ಸಾಮಾಜಿಕ ಕಾರ್ಯಕರ್ತ ದಿಲೀಪ ವರ್ಣೇಕರ ಬೆಳಗಾವಿ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ನಡೆದ ಹಿಂದೂ ಸಮ್ಮೇಳನದಲ್ಲಿ ದಿಕ್ಸೂಚಿ ಭಾಷಣ ನೀಡಿದ ಅವರು ಭಾರತವು ಸಾವಿರಾರು ವರ್ಷಗಳ ಇತಿಹಾಸವಿರುವ, ವೇದಗಳು, ಉಪನಿಷತ್ತುಗಳು, ರಾಮಾಯಣ ಮತ್ತು ಮಹಾಭಾರತಗಳ ಭವ್ಯ ಪರಂಪರೆಯನ್ನು ಹೊಂದಿರುವ ಅನನ್ಯ ಸನಾತನ ಸಂಸ್ಕೃತಿಯ ದೇಶವಾಗಿದೆ. ಪ್ರೀತಿ, ಗೌರವ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಪ್ರತಿಪಾದಿಸುವ, ವಸುಧೈವ ಕುಟುಂಬಕಂ ಎಂಬ ತತ್ವಕ್ಕೆ ಬದ್ಧವಾಗಿದೆ.

ನಮ್ಮ ಭಾರತವನ್ನು ಮತ್ತೆ ಪರಮ ವೈಭವ ಸ್ಥಿತಿಗೆ ಕರೆದೊಯ್ಯುವ ಜವಾಬ್ದಾರಿ ನಮ್ಮ ಮೇಲಿದೆ. ಬ್ರಿಟಿಷರು ವ್ಯಾಪಾರಕ್ಕಾಗಿ ನಮ್ಮಲ್ಲಿ ಬಂದು ನಮ್ಮ ಏಕತೆಯನ್ನು ಒಡೆದು ದೇಶ ಆಳಿದರು, ನಮ್ಮಲ್ಲಿ ಯಾವುದೇ ಜಾತಿ ಇಲ್ಲ ಭಾರತದಲ್ಲಿ ಹುಟ್ಟಿದ ಪ್ರತಿಯೊಬ್ಬರೂ ಕೂಡ ಹಿಂದೂಗಳೆ ಕಾಯಕದಿಂದ ಜಾತಿಗಳು ಹುಟ್ಟಿಕೊಂಡಿದ್ದು, ವಿದೇಶರು ಜಾತಿಗಳ ಹೆಸರನ್ನು ಇಟ್ಟುಕೊಂಡು ಭಾರತವನ್ನು ಒಡೆದು ಆಳಿದರು, ಸ್ವಾಮಿ ವಿವೇಕಾನಂದರು ಛತ್ರಪತಿ ಶಿವಾಜಿ ಮಹಾರಾಜರು ಇಲ್ಲದೆ ಇದ್ದರೆ ನಾವೆಲ್ಲರೂ ಏನಾಗುತ್ತಿದೆಯೋ ಊಹಿಸಲು ಕೂಡ ಆಗದು. ಭಾರತ ಇಡೀ ವಿಶ್ವಕ್ಕೆ ಧರ್ಮವನ್ನು ಕಲಿಸಿಕೊಟ್ಟ ದೇಶ ನಮ್ಮಲ್ಲಿ ಮುಸ್ಲಿಂ ಕ್ರೈಸ್ತ ಎನ್ನುವ ಭೇದವಿಲ್ಲ ಭಾರತದಲ್ಲಿ ಹುಟ್ಟಿ ಭಾರತವನ್ನು ಪ್ರೀತಿಸುವವರನ್ನು ಪೂಜಿಸುವವರನ್ನು ನಾವು ಅಪ್ಪಿಕೊಳ್ಳುತ್ತೇವೆ ನಮ್ಮ ದೇಶದ ಸಂಸ್ಕೃತಿಯನ್ನು ಉಳಿಸುವ ಜೊತೆಗೆ ಪರಿಸರ ಸಂರಕ್ಷಣೆ, ಸ್ವದೇಶಿ ವಸ್ತುಗಳ ಬಳಕೆ ಮಾಡುವ ಮೂಲಕ ಶ್ರೇಷ್ಠ ಭಾರತವನ್ನು ಇನ್ನಷ್ಟು ಶ್ರೇಷ್ಠ ಮಾಡುವ ಕಾರ್ಯ ಪ್ರತಿಯೊಬ್ಬರ ಮಾಡೋಣ ಎಂದು ತಿಳಿಸಿದರು.

ಪಟ್ಟಣದ ದತ್ತ ಮಂದಿರದಿಂದ ಬಸವೇಶ್ವರ ವೃತ್ತದ ವರೆಗೆ ಭವ್ಯ ಶೋಭಾ ಯಾತ್ರೆ ಜರುಗಿತು. ವಾರಕಾರಿ ಸಮಾಜದ ಕೀರ್ತನೆ, ಬಂಜಾರ ನೃತ್ಯ, ಹಲಗೆ ನೃತ್ಯ, ಅನೇಕ ಕಲಾ ತಂಡಗಳು ಮೆರವಣಿಗೆಯಲ್ಲಿ ಮೆರಗು ನೀಡಿದವು. ಭಾರತ ದೇಶದ ಮಹನೀಯರ ವೇಷ ಭೂಷಣ ತೊಟ್ಟ ಮಕ್ಕಳು ಗಮನ ಸೆಳೆದರು.


ಉದಯವಾಹಿನಿ ಚಿತ್ರ

> ಭಾರತೀಯ ಸನಾತನ ಸಂಸ್ಕೃತಿಗೆ ಋಷಿಮುನಿಗಳು, ಸಾಧುಸಂತರು ಭದ್ರ ಬುನಾದಿ ಹಾಕಿದ್ದಾರೆ. ಭಾರತ ವೈವಿಧ್ಯತೆ ಯಲ್ಲಿ ಏಕತೆ ಹೊಂದಿರುವ ದೇಶ. ವಿಶ್ವದ ಯಾವುದೇ ದೇಶದಲ್ಲಿ ಇಂಥ ಏಕತೆ ಕಾಣಲು ಸಾಧ್ಯವಿಲ್ಲ. ಭಾರತೀಯ ಸನಾತನ ಪರಂಪರೆಯನ್ನು ಅಳಿಸಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ.
> - ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮೀಜಿ

## ತಳಮಟ್ಟದಲ್ಲಿ ಹಾರಿದ ಕ್ಯಾಪ್ಟರ್

• ಉದಯವಾಹಿನಿ ಬಾಳೆಹೊನ್ನೂರು

ಬಾಳೆಹೊನ್ನೂರು ಪಟ್ಟಣ, ಖಾಂಡ್ಯ, ಮಾಗುಂಡಿ ವ್ಯಾಪ್ತಿಯಲ್ಲಿ ತಳಭಾಗದಲ್ಲಿ ಹೆಲಿಕ್ಯಾಪ್ಟರ್ ಹಾರಾಟ ನಡೆಸಿದ್ದು ಕೆಲಹೊತ್ತು ಜನರಲ್ಲಿ ಆತಂಕ ಸೃಷ್ಟಿಸಿತ್ತು. ದಿಢೀರ್ ಕಾಣಿಸಿಕೊಂಡ ಕ್ಯಾಪ್ಟರ್ ಭಾರಿ ಸದ್ದಿನೊಂದಿಗೆ ಎಲ್ಲಡೆ ಸಂಚರಿಸಿತು. ಕೆಲವರು ಇದು ಅರಣ್ಯ ಇಲಾಖೆ ಸರ್ವೆ ನಡೆಸಿದ್ದು ಎಂದರೆ, ಇನ್ನೂ ಕೆಲವರು ಬೇರೆಯದೇ ಉದ್ದೇಶಕ್ಕೆ ಬಂದಿದೆ ಎಂದು ಮಾತಾಡಿಕೊಂಡರು. ಯಾವ ಉದ್ದೇಶಕ್ಕೆ ಹಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಇಲ್ಲ. ಅಧಿಕಾರಿಗಳು ಮಾಹಿತಿ ನೀಡಬೇಕು ಎಂದು ಕಡಬಗೆರೆಯ ಚಂದ್ರಶೇಖರ್ ರೈ ಒತ್ತಾಯಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜೀತೆಂದ್ರ ಕುಮಾರ್ ದಯಾಮ್ ಅವರನ್ನು ಸಂಪರ್ಕಿಸಿದಾಗ ಯಾವುದೇ ಮಾಹಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು. ಅರಣ್ಯ ಇಲಾಖೆಯ ಎಸಿಎಫ್ ಮೋಹನ್ ಕುಮಾರ್, ಇದು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಉತ್ತರ ನೀಡಿದ್ದಾರೆ.

---

## ಜಾತಿಗಳು ಮನೆಯೊಳಗೆ ಇರಲಿ ರುದ್ರಮುನಿ ಸ್ವಾಮೀಜಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೆರೂರ

ನಮ್ಮ ಜಾತಿಗಳು ನಮ್ಮ ಮನೆಯ ಹೊಸ್ತಿಲ ಒಳಗೆ ಇರಲಿ, ಹೊಸ್ತಿಲು ದಾಟಿದ ತಕ್ಷಣ ಎದೆ ತಟ್ಟಿ ಹೇಳು ನಾನೊಬ್ಬ ಹಿಂದೂ ಎಂದು. ಅಂದಾಗ ಮಾತ್ರ ಹಿಂದೂ ಧರ್ಮವನ್ನು ಜಾಗೃತಿಗೊಳಿಸಲು ಸಾಧ್ಯ ಎಂದು ದೇವಾಂಗಮಠದ ರುದ್ರಮುನಿ ಸ್ವಾಮೀಜಿ ಹೇಳಿದರು. ಪಟ್ಟಣದಲ್ಲಿ ನಡೆದ ವಿರಾಟ್ ಹಿಂದೂ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.

ಸನಾತನ ಧರ್ಮದ ಉಳಿವಿಗಾಗಿ, ಭಾರತೀಯ ನೆಲದ ಸಂಸ್ಕೃತಿ - ಪರಂಪರೆಯನ್ನು ಉಳಿಸಿ ಬೆಳಸಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ' ಎಂದು ಹೇಳಿದರು. ಪ್ರತಿಯೊಬ್ಬ ತಂದೆ-ತಾಯಿಗಳು ನಿಮ್ಮ ಮಕ್ಕಳಿಗೆ ಮೊದಲು ಸಂಸ್ಕಾರವನ್ನು ಕಲಿಸಿ, ನಂತರ ವಿದ್ಯೆ ಕಲಿಸಿ. ದೇಶವನ್ನು ಮತ್ತು ಹಿಂದೂ ಧರ್ಮವನ್ನು ಗಟ್ಟಿಗೊಳಿಸಲು ಯುವಕರ ಪಾತ್ರ ಪ್ರಮುಖವಾಗಿದೆ' ಎಂದು ಮುಖ್ಯ ವಕ್ತಾರರಾದ ಪ್ರಭು ಹೂಗಾರ ಹೇಳಿದರು. ಸ್ವರೂಪಾನಂದ ಸ್ವಾಮಿಗಳು ಕಗಲಗೊಂಬ, ಶಿವುಕುಮಾರ ಶಿವಾಚಾರ್ಯ ಸ್ವಾಮೀಜಿ ಚರಂತಿಮಠ ಇವರು ಸಾನ್ನಿಧ್ಯ ವಹಿಸಿ ಮಾತನಾಡಿದರು. ಶೋಭಾಯಾತ್ರೆ, ಮೆರುಗು ಪಟ್ಟಣದ ಎಪಿಎಂಸಿ ಮಾರುಕಟ್ಟೆಯಿಂದ ಆರಂಭವಾದ ಶೋಭಾಯಾತ್ರೆ ಪ್ರಮುಖ ಬೀದಿಗಳ ಮೂಲಕ ಸಂಚರಿಸಿತು. ತಾಯಿ ಭಾರತಾಂಬೆ ಭಾವಚಿತ್ರ ಅನೇಕ ಇತಿಹಾಸಕಾರರ ಭಾವಚಿತ್ರ ಕಳಸ ಹೊತ್ತ ಮಹಿಳೆಯರು ಡೊಳ್ಳು ಕುಣಿತ ಮಹಾತ್ಮರ ವೇಷಧಾರಿಗಳು ಶೋಭಾಯಾತ್ರೆಯ ಕಳೆ ಹೆಚ್ಚಿಸಿದರು. ಹಿಂದೂ ಕಾರ್ಯಕರ್ತರು ಕೇಸರಿ ಶಲ್ಯ ತೊಟ್ಟು ಧ್ವಜ ಹಿಡಿದು ಸಂಭ್ರಮಿಸಿದರು.

# ಅಪಘಾತ ವಲಯ ಪತ್ತೆಗೆ ವಾಕರಸಾ ಸಂಸ್ಥೆ ಸಮೀಕ್ಷೆ

**ಸಂಭವನೀಯ ಅಪಘಾತ ಸ್ಥಳಗಳ ಜಿಲ್ಲಾವಾರು ಪಟ್ಟಿಯನ್ನು ಸತೀಶ ಜಾರಕಿಹೊಳಿಯವರಿಗೆ ಸಲ್ಲಿಕೆ**

• ಉದಯವಾಹಿನಿ ಹುಬ್ಬಳ್ಳಿ

ಸರಕಾರಿ ಬಸ್‌ಗಳು ಸೇರಿದಂತೆ ಇತರೆ ವಾಹನಗಳ ಸಂಭವನೀಯ ಅಪಘಾತಗಳನ್ನು ತಪ್ಪಿಸುವ ನಿಟ್ಟಿನಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ (ವಾಕರಸಾ)ಸಂಸ್ಥೆಯು ರಾಜ್ಯದಲ್ಲೇ ಮೊದಲ ಬಾರಿಗೆ ಸಮೀಕ್ಷೆ ನಡೆಸಿ ಅಪಘಾತ ವಲಯಗಳನ್ನು ಗುರುತಿಸಿದೆ. ಈ ಸ್ಥಳಗಳನ್ನು ಅಭಿವೃದ್ಧಿ ಪಡಿಸಿದರೆ ಅಪಘಾತಗಳನ್ನು ನಿಯಂತ್ರಿಸಬಹುದಾಗಿದೆ ಎಂದು ವಾಕರಸಾ ಸಂಸ್ಥೆಯು ಪ್ರತಿಪಾದಿಸಿದೆ. ಸಂಸ್ಥೆಯ ವ್ಯಾಪ್ತಿಯ ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಗದಗ, ಹಾವೇರಿ, ಬಾಗಲಕೋಟೆ ಜಿಲ್ಲೆಗಳ ಒಟ್ಟು 9 ವಿಭಾಗಗಳಲ್ಲಿನ ರಾಜ್ಯ, ರಾಷ್ಟ್ರೀಯ ಹೆದ್ದಾರಿ, ಜಿಲ್ಲಾ ರಸ್ತೆಗಳು ಮತ್ತು ಸಾಮಾನ್ಯ ರಸ್ತೆಗಳಲ್ಲಿ ಸಮೀಕ್ಷೆ ನಡೆಸಿರುವ ವಾಕರಸಾ ಸಂಸ್ಥೆಯು, ರಾಷ್ಟ್ರೀಯ ಹೆದ್ದಾರಿಯ 47, ರಾಜ್ಯ ಹೆದ್ದಾರಿಯ 73 ಹಾಗೂ ಇತರೆ ರಸ್ತೆಗಳ 30 ಪ್ರದೇಶ ಒಳಗೊಂಡು ಒಟ್ಟು 150 ಸ್ಥಳಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ ಎಂಬುದನ್ನು ಪತ್ತೆ ಹಚ್ಚಿದೆ.ಇದಕ್ಕೆ ಮುಖ್ಯವಾಗಿ ರಸ್ತೆಗಳಲ್ಲಿ ನ್ಯೂನತೆ ಹಾಗೂ ಸುರಕ್ಷತಾ ಕ್ರಮಗಳ ಕೊರತೆಯೇ ಕಾರಣ ಎಂಬುದನ್ನು ಕಂಡುಕೊಂಡಿದೆ.

ಈ ಕುರಿತು ಸಂಭವನೀಯ ಅಪಘಾತ ಸ್ಥಳಗಳ ಜಿಲ್ಲಾವಾರು ಪಟ್ಟಿಯನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿಯವರಿಗೆ ಸಲ್ಲಿಸಿದೆ. ಗೊತ್ತು ಮಾಡಿದ ಸ್ಥಳಗಳಲ್ಲಿ ಅಪಘಾತ ನಿಯಂತ್ರಿಸಲು ಕನಿಷ್ಠ ಪಕ್ಷ ಸುರಕ್ಷತಾ ಕ್ರಮವಾಗಿ ಸೂಚನಾ ಫಲಕ, ರೋಡ್ ಮಾರ್ಕಿಂಗ್, ಅಕ್ರಮ ಕಟ್ಟಡ ತೆರವುಗೊಳಿಸುವಿಕೆ, ಬಸ್ ಶೆಲ್ಟರ್ ನಿರ್ಮಾಣ, ರಸ್ತೆ ರೇಲಿಂಗ್/ಬ್ಯಾರಿಕೇಡ್ ಅಳವಡಿಸುವುದು, ಸೋಲಾರ್ ಲೈಟ್ ಸೇರಿದಂತೆ ಇತರೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಇತ್ತೀಚೆಗೆ ವಾಕರಸಾ ಸಂಸ್ಥೆಗೆ ಆಗಮಿಸಿದ್ದ ಪಿಡಬ್ಲ್ಯುಡಿ ಸಚಿವ ಸತೀಶ ಜಾರಕಿಹೊಳಿಯವರಿಗೆ ಮನವಿ ಮಾಡಲಾಗಿದೆ ಎಂದು ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗ ಎಂ. ವಿಜಯ ಕರ್ನಾಟಕಕ್ಕೆ ತಿಳಿಸಿದ್ದಾರೆ.

ಸಕಾರಾತ್ಮಕವಾಗಿ ಸ್ಪಂದಿಸಿರುವ ಸಚಿವರು ಪೈಲೆಟ್ ಪ್ರಾಜೆಕ್ಟ್ ಎಂದು ಬೆಳಗಾವಿ ಜಿಲ್ಲೆಯ ಅಪಘಾತದ ಸ್ಥಳಗಳ ಸುಧಾರಣೆ ಕೈಗೊಳ್ಳುತ್ತೇವೆ. ಯಶಸ್ಸು ನೋಡಿಕೊಂಡು ಇತರೆಡೆಗಳಲ್ಲಿಯೂ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಪೂರಕವಾಗಿ ಇನ್ನಷ್ಟು ವಿವರ ಸಲ್ಲಿಸುವಂತೆ ಸೂಚಿಸಿದ್ದಾರೆ ಎಂದು ಸಂಸ್ಥೆಯ ಉಪಾಧ್ಯಕ್ಷ ಸುನಿಲ ಹನುಮಣ್ಣನವರ ಹೇಳಿದ್ದಾರೆ. ಬಾಗಲಕೋಟೆ ಜಿಲ್ಲೆಯ ಅನಗವಾಡಿ ಬ್ರಿಜ್, ಕೆರೂರ ಬಸ್ ನಿಲ್ದಾಣ ರಸ್ತೆ, ವನಹಳ್ಳಿ ಕ್ರಾಸ್, ಬಾಗಲಕೋಟದ ಸ್ಕ್ಯಾನ್ ಸೆಂಟರ್, ಜಮಖಂಡಿ ದೇಸಾಯಿ ಕ್ರಾಸ್, ಮುಧೋಳ ಶಿವಾಜಿ ಸರ್ಕಲ್, ಅಸುಂಡಿ ಕ್ರಾಸ್, ಗದಗ ಜಿಲ್ಲೆಯ ಕೋಟುಮಚಗಿ ಕ್ರಾಸ್, ಡಂಬಳ ಕ್ರಾಸ್, ಹಾವೇರಿ ಜಿಲ್ಲೆಯ ರಾಣೇಬೆನ್ನೂರು ಜಾನುವಾರು ಮಾರ್ಕೆಟ್ ಮತ್ತು ಬಸ್ ನಿಲ್ದಾಣ, ಸಂಗೂರ ಕಾರ್ಖಾನೆ ಬಳಿ, ಹಿರೇಬಿದರಿ, ಶಿರಸಿ ವಿಭಾಗದ ಮಾವಿನಗುಂಡಿ ರಸ್ತೆ, ಸುಳೇಮುರಕಿ ಕ್ರಾಸ್, ಸಾತೊಡ್ಡಿ ಫಾಲ್ಸ್, ಚಿಕ್ಕಮಾವಳ್ಳಿ, ಮಾಗೋಡ ಕ್ರಾಸ್, ಅರೆಬೈಲ ಘಾಟ್, ರಾಮನಗುಳಿ, ಹಾರವಾಡ ಘಟ್ಟ, ಅಮದಳ್ಳಿ, ರಾಮತೀರ್ಥ ಕ್ರಾಸ್, ದಾಂಡೇಲಿಯ ಕುಳಗಿ ಕ್ರಾಸ್, ಬೀರಂಪಾಳಿ, ಹಳಿಯಾಳದ ದಾಂಡೇಲಿ ಕ್ರಾಸ್ ಬಳಿ ಆಕ್ಸಿಡೆಂಟ್ ಝೋನ್ ಗಳ ಸಂಖ್ಯೆ ಕಂಡು ಬಂದಿದೆ. ಮುಂದುವರೆದಂತೆ, ಧಾರವಾಡದ ಮುರಕಟ್ಟಿ ಕ್ರಾಸ್, ಧಾರವಾಡ ಜಿಲ್ಲೆಯ ಜುಂಜನಬೈಲ್ ಕ್ರಾಸ್, ವರೂರ, ಕೋಳಿವಾಡ ಕ್ರಾಸ್, ಅಣ್ಣಿಗೇರಿ ಬಸಾಪೂರ ಕ್ರಾಸ್, ಕುಸುಗಲ್ಲರಿಂಗ್ ರೋಡ್ ಕ್ರಾಸ್, ಜಿನ್ನೂರ ಬ್ರಿಜ್ ಹತ್ತಿರ, ಗಬ್ಬೂರ ಸರ್ಕಲ್, ಮಿಶ್ರಿ ಕೋಟಿ ಕ್ರಾಸ್, ಹುಬ್ಬಳ್ಳಿಯ ಬಿವಿಬಿ ಕಾಲೇಜು ಬಳಿ ಸಿಗ್ನಲ್, ರಾಯಾಪುರ, ಸಂಜೀವಿನಿ ಪಾರ್ಕ್ ಗಾರ್ಮೆಂಟ್ಸ್ ಹತ್ತಿರ, ಸತ್ತೂರ, ಹೊಸೂರ ಕ್ರಾಸ್, ಬಸವವನ, ಕೇಶ್ವಾಪುರ ಸರ್ಕಲ್ ಸೇರಿದಂತೆ ಹಲವಾರು ಸ್ಥಳಗಳು ಅಪಘಾತ ವಲಯ ಎಂದು ವಾಕರಸಾ ಸಂಸ್ಥೆ ತಿಳಿಸಿದೆ.



ಉದಯವಾಹಿನಿ ಚಿತ್ರ

- ಅಪಘಾತ ವಲಯಗಳ ಪತ್ತೆಗೆ ರಾಜ್ಯದಲ್ಲಿ ಮೊದಲ ಬಾರಿಗೆ ಸಮೀಕ್ಷೆ ನಡೆಸಿದ ವಾಕರಸಾ ಸಂಸ್ಥೆ .
- ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ಜಿಲ್ಲೆಗಳಲ್ಲೇ ಕಂಡುಬಂದಿದೆ 150 ಆ್ಯಕ್ಸಿಡೆಂಟ್ ಝೋನ್.
- ಅಪಘಾತ ಸ್ಥಳಗಳ ಜಿಲ್ಲಾವಾರು ಪಟ್ಟಿ ಪಿಡಬ್ಲ್ಯುಡಿ ಸಚಿವರಿಗೆ ಸಲ್ಲಿಸಿ ಸುರಕ್ಷತಾ ಕ್ರಮ ಕೈಗೊಳ್ಳಲು ಮನವಿ.

> ವಾಯವ್ಯ ಸಾರಿಗೆಯಿಂದ ವಿಶೇಷ ಸಮೀಕ್ಷೆ ನಡೆಸಿ ರಸ್ತೆ ಅಪಘಾತ ಸ್ಥಳಗಳನ್ನು ಗುರುತಿಸಿ ಪಟ್ಟಿ ಮಾಡಿದ್ದೇವೆ. ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದು, ಸೂಚನಾ ಫಲಕ ಸೇರಿ ಇತರ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದರಿಂದ ಅಪಘಾತಗಳನ್ನು ನಿಯಂತ್ರಿಸಬಹುದು. ಈ ಮೂಲಕ ಜೀವ ಹಾನಿ ಹಾಗೂ ಆರ್ಥಿಕ ನಷ್ಟವನ್ನು ತಪ್ಪಿಸಬಹುದು. ಈ ಬಗ್ಗೆ ಪಿಡಬ್ಲ್ಯುಡಿ ಇಲಾಖೆಗೆ ವರದಿ ಸಲ್ಲಿಸಿದ್ದು, ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.
> -ಪ್ರಿಯಾಂಗ ಎಂ., ವ್ಯವಸ್ಥಾಪಕ ನಿರ್ದೇಶಕರು, ವಾಕರಸಾ ಸಂಸ್ಥೆ, ಹುಬ್ಬಳ್ಳಿ

**ಸುರಕ್ಷತಾ ಕ್ರಮ ಕೈಗೊಳ್ಳಲು ಮನವಿ**

## ಅಕ್ರಮ ಸಂಪರ್ಕ ತೆರವು

• ಉದಯವಾಹಿನಿ ಹೂವಿನಹಡಗಲಿ

ಪಟ್ಟಣದ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯ ಪ್ರತ್ಯೇಕ ಎಕ್ಸ್‌ಪ್ರೆಸ್ ಫೀಡರ್ ಲೈನ್‌ಗೆ ಕೊಕ್ಕೆ ಹಾಕಿ ಅಕ್ರಮ ವಿದ್ಯುತ್ ಪಡೆಯುತ್ತಿದ್ದ ಸಂಪರ್ಕಗಳನ್ನು ಜೆಸ್ಕಾಂ ಸಿಬ್ಬಂದಿ ಸೋಮವಾರ ತೆರವುಗೊಳಿಸಿದ್ದಾರೆ. ಕುಡಿಯುವ ನೀರಿನ ಯೋಜನೆಗೆ ನಿರಂತರ ವಿದ್ಯುತ್ ಸೌಲಭ್ಯ ಪಡೆಯಲು ಸಿಂಗಟಾಲೂರು ಬ್ಯಾರೇಜ್ ಹಿನ್ನೀರಿನಲ್ಲಿರುವ ಜಾಕ್‌ವೆಲ್ ಹಾಗೂ ಹೊನ್ನೂರು ಬಳಿ ಇರುವ ಶುದ್ದೀಕರಣ ಘಟಕಕ್ಕೆ ಪ್ರತ್ಯೇಕ ಎಕ್ಸ್‌ಪ್ರೆಸ್ ಲೈನ್ ಹಾಕಲಾಗಿತ್ತು. ಕೆಲ ಭೂ ಮಾಲೀಕರು ಇದಕ್ಕೆ ಕೊಕ್ಕೆ ಹಾಕಿ ಪಂಪ್ ಸೆಟ್‌ಗಳಿಗೆ ದಶಕದಿಂದಲೂ ಅಕ್ರಮವಾಗಿ ವಿದ್ಯುತ್ ಪಡೆಯುತ್ತಿದ್ದರು. ಈ ಅಕ್ರಮಕ್ಕೆ ಜೆಸ್ಕಾಂ ಸಿಬ್ಬಂದಿ ಕೈ ಜೋಡಿಸಿದ್ದರು' ಎಂಬ ಆರೋಪ ಕೇಳಿ ಬಂದಿತ್ತು. ಶಾಸಕ ಕೃಷ್ಣನಾಯ್ಕ, ಜೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ಸತೀಶ್ ಅವರು ಶನಿವಾರ ಪುರಸಭೆ ಹಾಗೂ ಜೆಸ್ಕಾಂ ಸಿಬ್ಬಂದಿಯ ಸಭೆ ನಡೆಸಿ, ಅಕ್ರಮ ಸಂಪರ್ಕಗಳ ತೆರವಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಕುಡಿಯುವ ನೀರಿನ ಯೋಜನೆ ಸಲುವಾಗಿ ನಿರಂತರ ವಿದ್ಯುತ್ ಸರಬರಾಜಿನ ಪ್ರತ್ಯೇಕ ಲೈನ್ ಹಾಕಲಾಗಿದೆ. ಈ ಲೈನ್‌ನಿಂದ ಖಾಸಗಿ ವ್ಯಕ್ತಿಗಳು ಅಕ್ರಮ ಸಂಪರ್ಕ ಪಡೆದರೂ ಏಕೆ ಕಣ್ಣುಮುಚ್ಚಿ ಕುಳಿತುಕೊಂಡಿದ್ದೀರಿ' ಎಂದು ಕಾರ್ಯಪಾಲಕ ಇಂಜಿನಿಯರ್ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಹೀಗಾಗಿ ಅಕ್ರಮ ಸಂಪರ್ಕಗಳ ತೆರವು ಕಾರ್ಯಾಚರಣೆ ಆರಂಭವಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ಇಂದು ಸಾಲಗಾರರು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು. ಇದರ ಬಗ್ಗೆ ತಿಳಿದು ನೀವು ಆಶ್ಚರ್ಯಚಕಿತರಾಗಬಹುದು.

**ವೃಷಭ** ಬಹಳಷ್ಟು ವಿಷಯಗಳು ನೀವು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್ ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು.

**ಮಿಥುನ** ಮಾನಸಿಕ ಸ್ಪಷ್ಟತೆಯನ್ನು ನಿರ್ವಹಿಸಲು ಗೊಂದಲ ಮತ್ತು ಹತಾಶೆಯನ್ನು ತಪ್ಪಿಸಿ ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ಕರ್ಕಾಟಕ** ನಿಮ್ಮ ಪ್ರೀತಿಪಾತ್ರರೊಡನೆ ಪ್ರಯಾಣಕ್ಕೆ ಹೋಗುವ ಮೂಲಕ ನಿಮ್ಮ ಅಮೂಲ್ಯ ಕ್ಷಣಗಳನ್ನು ಪುನಃ ಜೀವಿಸಿ. ಕಾರ್ಯಸ್ಥಾನಗಳಲ್ಲಿ ಹೊಸ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

**ಸಿಂಹ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ, ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ಕನ್ಯಾ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು –ಏಕೆ ಏನನ್ನಾದರೂ ಮಾಡಬಾರದು.

**ತುಲಾ** ಕೆಲವು ಗಂಭೀರ ತೊಂದರೆಗಳನ್ನು ಎದುರಿಸಲು ಸಾಧ್ಯತೆಯಿರುವುದರಿಂದ ನಿಮ್ಮನ್ನು ನಿಯಂತ್ರಿಸಿಕೊಳ್ಳಿ. ವಿಶೇಷವಾಗಿ ಸಣ್ಣ ಹುಚ್ಚಲ್ಲದೇ ಬೇರೇನೂ ಅಲ್ಲದ ನಿಮ್ಮ ಕೋಪವನ್ನು ನಿಯಂತ್ರಿಸಿಕೊಳ್ಳಿ.

**ವೃಶ್ಚಿಕ** ಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ.

**ಧನಸ್ಸು** ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ಬುದ್ಧಿವಂತಿಕೆಯನ್ನಿರಿಸಿದೆ. ಅದನ್ನು ಸಾಧ್ಯವಾದಷ್ಟು ಬಳಸಿಕೊಳ್ಳಿ. ಜೀವನದ ವಾಹನವನ್ನು ಚೆನ್ನಾಗಿ ಚಲಾಯಿಸಲು ಬಯಸುತ್ತಿದ್ದರೆ, ನೀವು ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು.

**ಮಕರ** ಪತ್ನಿ ನೀವು ಹುರಿದುಂಬಿಸಬಹುದು. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಮಕ್ಕಳು ನಿಮ್ಮ ದಿನವನ್ನು ಕಠಿಣಗೊಳಿಸುತ್ತಾರೆ.

**ಕುಂಭ** ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ನಿಮ್ಮ ಸಮರ್ಪಣೆ ಮತ್ತು ಶ್ರಮವನ್ನು ಗಮನಿಸಲಾಗುತ್ತದೆ. ನಿಮಗೆ ಸ್ವಲ್ಪ ಆರ್ಥಿಕ ಪ್ರತಿಫಲಗಳನ್ನು ತರುತ್ತದೆ.

**ಮೀನ** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಹಣಕಾಸಿನಲ್ಲಿ ಸುಧಾರಣೆ ನೀವು ಪ್ರಮುಖ ಖರೀದಿಗಳನ್ನು ಮಾಡುವುದನ್ನು ಅನುಕೂಲಕರವಾಗಿಸುತ್ತದೆ.

### ಮಂಗಳೂರು, ಉಡುಪಿಯಲ್ಲಿ ವ್ಯಾಪಕವಾಗಿರುವ ಮಾದಕ ವಸ್ತುಗಳ ಮಾರಾಟ, ಸಾಗಾಟ, ಸೇವನೆ

# ಡ್ರಗ್ಸ್ ತಡೆಗೆ ಪೊಲೀಸರ ವಿನೂತನ ಕ್ಯೂಆರ್ ಕೋಡ್ ಅಳವಡಿಕೆ ಪ್ಲ್ಯಾನ್

• ಉದಯವಾಹಿನಿ ಮಂಗಳೂರು

ಮಂಗಳೂರು, ಉಡುಪಿಯಲ್ಲಿ ವ್ಯಾಪಕವಾಗಿರುವ ಮಾದಕ ವಸ್ತುಗಳ ಮಾರಾಟ, ಸಾಗಾಟ, ಸೇವನೆ ತಡೆಯಲು ಕಾಲೇಜುಗಳಲ್ಲಿ ಕೈಗೊಂಡಿದ್ದ ಕ್ಯೂಆರ್ ಕೋಡ್ ಇನ್ನು ಸಾರ್ವಜನಿಕರ ಸ್ಥಳಗಳಲ್ಲೂ ಕಾಣಿಸಲಿದೆ.

ಪೊಲೀಸ್ ಇಲಾಖೆ ಡ್ರಗ್ಸ್ ಮಟ್ಟ ಹಾಕಲು ಎಷ್ಟೇ ಪ್ರಯತ್ನಿಸಿದರೂ, ಸಂಘ ಸಂಸ್ಥೆಗಳಿಂದ ಜಾಗೃತಿ ನಡೆಯುತ್ತಿದ್ದರೂ, ಡ್ರಗ್ಸ್ ಹಾವಳಿ ನಿಲ್ಲುತ್ತಿಲ್ಲ. ಪ್ರತಿದಿನ ಗಾಂಜಾ, ಎಂಡಿಎಂಎ ಸಹಿತ ಡ್ರಗ್ಸ್ ಮಾರಾಟ, ಸೇವನೆ ಪ್ರಕರಣ ಪತ್ತೆಯಾಗುತ್ತಲೇ ಇದೆ. ಜೈಲುಗಳಲ್ಲಿ ಆರೋಪಿಗಳು ತುಂಬುತ್ತಿದ್ದಾರೆ. ಹೊಸಬರೂ ಮಾದಕ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ.

- **ಜಿಲ್ಲೆಯಲ್ಲಿ ಡ್ರಗ್ಸ್ ಜಾಲಗಳನ್ನು ಮಟ್ಟ ಹಾಕಲು ವಿನೂತನ ಪ್ರಯೋಗಕ್ಕೆ ಸಜ್ಜಾದ ಮಂಗಳೂರು ಪೊಲೀಸ್ ಇಲಾಖೆ**
- **ನಗರದೆಲ್ಲೆಡೆ ದೂರು ನೀಡಲು 20 ಸಾವಿರ ಕ್ಯೂಆರ್ ಅಳವಡಿಸಿ ಮಾದಕ ಜಾಲದ ವಿರುದ್ಧ ಸಮರ**
- **ಏನಿದು ಕ್ಯೂಆರ್ ಅಳವಡಿಕೆ ಅಭಿಯಾನ?**



ಉದಯವಾಹಿನಿ ಚಿತ್ರ

ಇದನ್ನು ತಡೆಗಟ್ಟಲು ಈಗಾಗಲೇ ಕಾಲೇಜುಗಳಲ್ಲಿ ಕ್ಯೂಆರ್ ಅಳವಡಿಕೆ ಎಂಬ ವಿನೂತನ ಪ್ರಯೋಗ ಉತ್ತಮ ಫಲಿತಾಂಶ ನೀಡಿದೆ. ಅನಾಮಧೇಯವಾಗಿ ಬಂದ ಮಾಹಿತಿಗಳಿಂದ ಅನೇಕರ ಬಂಧನ, ಮೂಲ ಹುಡುಕಿಕೊಂಡು ಹೋಗಲು ಪೊಲೀಸರಿಗೆ ಅನುಕೂಲವಾಗಿದೆ. ಇತ್ತೀಚೆಗೆ ಕೆಲವು ಕಾಲೇಜುಗಳ ಬಸ್‌ಗಳನ್ನು ತಡೆದು, ಹಠಾತ್ ಡ್ರಗ್ಸ್ ತಪಾಸಣೆ ನಡೆಸಿದಾಗ ಎಲ್ಲ ನೆಗೆಟಿವ್ ವರದಿ ಬಂದಿದ್ದು, ಪೊಲೀಸ್ ಆಯುಕ್ತರಲ್ಲಿ ಆಶಾಭಾವನೆ ಮೂಡಿದೆ.

ತಮ್ಮ ಹತ್ತಿರವೇ ಮಾದಕ ವ್ಯಸನಿಗಳಿದ್ದರೂ, ಹಲವು ಸಂದರ್ಭಗಳಲ್ಲಿ ಸಾರ್ವಜನಿಕರು ಮಾಹಿತಿ, ದೂರು ಕೊಡಲು ಬರುತ್ತಿಲ್ಲ. ಹಿಂದೆ ಮಾಹಿತಿ ಕೊಟ್ಟವರ ಕೊಲೆ, ಹಲ್ಲೆ ನಡೆದ ಉದಾಹರಣೆ ಇದೆ. ಈಗಲೂ ಈ ಉಸಾಬರಿ ನಮಗೇಕೆ ಎಂದು ಜನ ಸುಮ್ಮನಿರುತ್ತಾರೆ. ದೂರು ಕೊಟ್ಟವರ ಮಾಹಿತಿ ಗೊತ್ತಾಗದಂತೆ ಕ್ಯೂಆರ್ ಕೋಡ್ ಅಳವಡಿಸಲಾಗುತ್ತದೆ.

**ಸಾರ್ವಜನಿಕರ ಸ್ಥಳಗಳಲ್ಲೂ ಕಾಣಿಸಲಿದೆ**

ಮಂಗಳೂರು ಪೊಲೀಸ್ ಕಮಿಷನರೇಟ್‌ನಿಂದ 20 ಸಾವಿರ ಕ್ಯೂಆರ್ ಕೋಡ್ ಮುದ್ರಣ ಮಾಡುತ್ತಿದ್ದು, ಇಲಾಖೆ ನೇಮಿಸಿದ ಮನೆ ಮನೆ ಪೊಲೀಸ್, ಬೀಟ್ ಪೊಲೀಸರು ಸಾರ್ವಜನಿಕರಿಗೆ ಕ್ಯೂಆರ್ ಕೋಡ್ ವಿತರಿಸಲಿದ್ದಾರೆ. ಇದರ ಜವಾಬ್ದಾರಿಯನ್ನು ಸಿಸಿಆರ್‌ಬಿಗೆ ನೀಡಲಾಗಿದೆ. ಮನೆ, ಶಾಲೆ, ಪಂಚಾಯಿತಿ ಸಹಿತ ಸಾರ್ವಜನಿಕ ಸ್ಥಳಗಳಲ್ಲಿಯೂ ಅಂಟಿಸಲಾಗುತ್ತಿದೆ.

ಸಾರ್ವಜನಿಕರು ಡ್ರಗ್ಸ್ ಕುರಿತ ಯಾವುದೇ ಮಾಹಿತಿ ಕೊಡಲು ಠಾಣೆಗೆ ಹೋಗುವ ಅಗತ್ಯವಿಲ್ಲ. ಫೋನ್ ಮೂಲಕ ತಿಳಿಸಬೇಕೆಂದೂ ಇಲ್ಲ. ಪೊಲೀಸರಿಗೆ ದೂರು ಕೊಟ್ಟರೆ, ತಮ್ಮ ಮಾಹಿತಿ ಡ್ರಗ್ಸ್ ಜಾಲಕ್ಕೆ ಸೋರಿಕೆಯಾಗುತ್ತದೆ ಎಂದು ಭಯಪಡಬೇಕಿಲ್ಲ, ಕ್ಯೂಆರ್ ಕೋಡ್‌ನಲ್ಲಿ ಮಾಹಿತಿ ಕೊಟ್ಟು ಆರಾಮವಾಗಿರಬಹುದು.

ಅಲ್ಲಿ ನೀವು ಯಾವ ರೀತಿಯ ವರದಿ ನೀಡುತ್ತೀರಿ ಎಂಬಲ್ಲಿ, ಎ, ಬಿ, ಸಿ, ಡಿ ವಿಭಾಗದಲ್ಲಿ ಮಾದಕ ವಸ್ತು ಪೂರೈಕೆ ಅಥವಾ ಮಾರಾಟ, ಸಂಗ್ರಹ ಅಥವಾ ಮಾರಾಟ, ಸಾರ್ವಜನಿಕ ಅಥವಾ ಖಾಸಗಿ ಸ್ಥಳ, ಅನುಮಾನಾಸ್ಪದ ಚಟುವಟಿಕೆ ಸಹಿತ ಸುಮಾರು 15 ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗುತ್ತದೆ. ಅಗತ್ಯವಿದ್ದವರು ತಮ್ಮ ಮೊಬೈಲ್, ಇಮೇಲ್ ನೀಡಲು ಅವಕಾಶವಿದೆ. ದೂರವಾಣಿ, ವಾಟ್ಸ್ಯಾಪ್, ಇ-ಮೇಲ್‌ನಲ್ಲಿ ಯಾವುದನ್ನು ಸಂಪರ್ಕಿಸಬಹುದು ಎಂಬ ಆಯ್ಕೆ ನೀಡಬಹುದು.

**ಕ್ಯೂಆರ್ ಕೋಡ್ ಹೇಗೆ ಕೆಲಸ ಮಾಡುತ್ತದೆ?**

ಎಲ್ಲಿಯಾದರೂ ಮಾದಕ ವಸ್ತುಗಳ ಮಾರಾಟ, ಸಾಗಾಟ, ಸೇವನೆ ಕಂಡು ಬಂದರೆ ಕೂಡಲೇ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬೇಕು. ಮಂಗಳೂರು ನಗರ ಪೊಲೀಸ್ ಅಭಿವೃದ್ಧಿಪಡಿಸಿದ 'ಮಾದಕ ವಸ್ತು ಸಂಬಂಧಿತ ಗೌಪ್ಯ ದೂರು ಪ್ರಪತ್ರ' ಪುಟ ತೆರೆದುಕೊಳ್ಳುತ್ತದೆ.

20 ಸಾವಿರ ಕ್ಯೂಆರ್ ಕೋಡ್ ಮುದ್ರಿಸಿ ಪೊಲೀಸರ ಮೂಲಕ ವಿತರಿಸಲಾಗುವುದು. ಅದರಲ್ಲಿ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ ಇದೆ. ನಿರಾತಂಕವಾಗಿ ಮಾಹಿತಿ ಕೊಡಬಹುದು. ಸಾರ್ವಜನಿಕರು ಹಂಚಿಕೊಂಡ ಎಲ್ಲಾ ಮಾಹಿತಿ ಕಾನೂನುಬದ್ಧ ತನಿಖೆ ಮತ್ತು ಮಾದಕ ವಸ್ತು ಸಂಬಂಧಿತ ಅಪರಾಧ ನಿರ್ಮೂಲನೆಗೆ ಮಾತ್ರ ಬಳಸಲಾಗುತ್ತದೆ. **-ಸುಧೀರ್ ಕುಮಾರ್ ರೆಡ್ಡಿ, ಮಂಗಳೂರು ನಗರ ಪೊಲೀಸ್ ಕಮಿಷನರ್**

## ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಆಗ್ರಹ: ಪುರಸಭೆಗೆ ಮನವಿ

• ಉದಯವಾಹಿನಿ ಕೆಂಭಾವಿ

ಪಟ್ಟಣದ ಮೂಲಭೂತ ಸೌಕರ್ಯಗಳ ಕೊರತೆ, ಬೀದಿ ದೀಪಗಳ ದುರಸ್ತಿ ಹಾಗೂ ಸ್ವಚ್ಛತೆಯನ್ನು ಕಾಪಾಡುವಲ್ಲಿ ಪುರಸಭೆ ವಿಫಲವಾಗಿದೆ ಎಂದು ಆರೋಪಿಸಿ ನಮ್ಮ ಕರ್ನಾಟಕ ಸೇನೆ ಕೆಂಭಾವಿ ಹೋಬಳಿ ಘಟಕದ ವತಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆಯ ಮೂಲಕ ಪುರಸಭೆ ಮುಖ್ಯಾಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು. ನಗರದ ಬಸವೇಶ್ವರ ವೃತ್ತದಿಂದ ಪುರಸಭೆ ಕಾರ್ಯಾಲಯದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಸಂಘಟನೆಯ ಪದಾಧಿಕಾರಿಗಳು, ಆಡಳಿತ ವ್ಯವಸ್ಥೆಯ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

**ಪ್ರಮುಖ ಬೇಡಿಕೆಗಳು: ಚರಂಡಿ ಸ್ವಚ್ಛತೆ:** ಪಟ್ಟಣದಾದ್ಯಂತ ಚರಂಡಿಗಳು ಹೂಳು ತುಂಬಿ ನಾರುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಆವರಿಸಿದೆ. ತಕ್ಷಣವೇ ಹೂಳೆತ್ತಿ ಸ್ವಚ್ಛತೆ ಮಾಡಬೇಕು.

**ಬೀದಿ ದೀಪಗಳ ದುರಸ್ತಿ:** ಸುರಪುರ–ಹುನಗುಂದ ರಾಜ್ಯ ಹೆದ್ದಾರಿಯಲ್ಲಿ ಬೀದಿ ದೀಪಗಳು ಸರಿಯಾಗಿ ಬೆಳಗುತ್ತಿಲ್ಲ. ಮುರಿದು ಬಿದ್ದಿರುವ ವಿದ್ಯುತ್ ಕಂಬಗಳಿಂದ ಸಾರ್ವಜನಿಕರ ಪ್ರಾಣಕ್ಕೆ ಅಪಾಯವಿದ್ದು, ಕೂಡಲೇ ಹೊಸ ದೀಪಗಳನ್ನು ಅಳವಡಿಸಬೇಕು.


ಉದಯವಾಹಿನಿ ಚಿತ್ರ

**ಕ್ಯಾನಲ್ ಬ್ರಿಡ್ಜ್ ಸಮಸ್ಯೆ:** ಗುತ್ತಿ ಬಸವಣ್ಣ ನೀರಾವರಿ ಯೋಜನೆಯ ಕ್ಯಾನಲ್ ಬಳಿ ಸಮರ್ಪಕ ಬ್ರಿಡ್ಜ್ ವ್ಯವಸ್ಥೆ ಇಲ್ಲದೆ ವಾಹನ ಸವಾರರು ಪರದಾಡುತ್ತಿದ್ದು, ಸುಗಮ ಸಂಚಾರಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕು.

**ಹೈಮಾಸ್ಟ್ ದೀಪ:** ಪಟ್ಟಣದ ಪ್ರಮುಖ ವೃತ್ತದಲ್ಲಿ ಹೈಮಾಸ್ಟ್ ದೀಪ ಅಳವಡಿಸುವಂತೆ ಈ ಹಿಂದೆ ಮನವಿ ಮಾಡಿದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆಯ ಕೆಂಭಾವಿ ಅಧ್ಯಕ್ಷರಾದ ಶರಣು ಎಸ್. ದೇವರಮನಿ, ಕಾರ್ಮಿಕ ಘಟಕದ ಅಧ್ಯಕ್ಷ ಗುರುರಾಜ ಎಸ್. ಅಂಗಡಿ, ಗೌರವಾಧ್ಯಕ್ಷ ಬಸ್ಸು ಪರಸನಹಳ್ಳಿ, ಕಾರ್ಮಿಕ ಘಟಕದ ಉಪಾಧ್ಯಕ್ಷ ಶಿವು ರಬ್ಬನಳ್ಳಿ, ಮಲ್ಲಾಬಿ ಘಟಕದ ಅಧ್ಯಕ್ಷ ರಫೀಕ ಮುಜಾವಾರ, ಏವರು ಗ್ರಾಮದ ಅಧ್ಯಕ್ಷ ಬಾಪುಗೌಡ ಅನ್ವರ್, ಪದಾಧಿಕಾರಿಗಳಾದ ವೀರೇಶ, ಬಸ್ಸು ದೂರಿ, ಶ್ರೀಕಾಂತ ಕುಂಬಾರ, ಜಗ್ಗು ಮಾನವಿ, ಮಲ್ಲು ಹಂಗರಿಗಿ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

**ಉಗ್ರ ಹೋರಾಟದ ಎಚ್ಚರಿಕೆ**

ಸಾರ್ವಜನಿಕರ ಈ ನ್ಯಾಯಯುತ ಬೇಡಿಕೆಗಳಿಗೆ ಪುರಸಭೆಯು ಸಕಾರಾತ್ಮಕವಾಗಿ ಸ್ಪಂದಿಸಿ, ನಿಗದಿತ ಕಾಲಮಿತಿಯೊಳಗೆ ಕಾಮಗಾರಿ ಆರಂಭಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕರ್ನಾಟಕ ಸೇನೆಯ ವತಿಯಿಂದ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು, ಎಂದು ಸಂಘಟನೆಯ ಮುಖಂಡರು ಎಚ್ಚರಿಸಿದ್ದಾರೆ.

## ಪಿಡಿಒ ವರ್ಗಾವಣೆಗೆ ಒತ್ತಾಯ

• ಉದಯವಾಹಿನಿ ಬೀದರ್

ಔರಾದ್ ತಾಲ್ಲೂಕಿನ ಕೌಠಾ(ಬಿ) ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕು ಎಂದು ದಲಿತ ಸಂಘರ್ಷ ಸಮಿತಿ ಒತ್ತಾಯಿಸಿದೆ. ಸಮಿತಿಯ ಪದಾಧಿಕಾರಿಗಳು ನಗರದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಬರೆದ ಮನವಿ ಪತ್ರವನ್ನು ಉಪ ಕಾರ್ಯದರ್ಶಿಗೆ ಸಲ್ಲಿಸಿದರು. ಪಿಡಿಒ ಸರಿಯಾದ ಸಮಯಕ್ಕೆ ಕಚೇರಿಗೆ ಹಾಜರಾಗುತ್ತಿಲ್ಲ. ಸಾರ್ವಜನಿಕರ ಕುಂದು ಕೊರತೆ ಆಲಿಸುತ್ತಿಲ್ಲ.


ಉದಯವಾಹಿನಿ ಚಿತ್ರ

ಸಮಸ್ಯೆ ಬಗೆಹರಿಸುತ್ತಿಲ್ಲ. ಮನ ಬಂದಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ದೂರಿದರು. ಈ ಕುರಿತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗೆ ಈಗಾಗಲೇ ಮಾಹಿತಿ ನೀಡಲಾಗಿದೆ. ಕೂಡಲೇ ಪಿಡಿಒ ವರ್ಗಾವಣೆಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಮಿತಿಯ ಜಿಲ್ಲಾ ಅಧ್ಯಕ್ಷ ಸತೀಶ್ ವಗ್ಗೆ, ಉಪಾಧ್ಯಕ್ಷ ಶಿವು ಮನ್ನಾಎಖ್ಖೆಳ್ಳಿ, ಗಣಪತಿ ವಾಸುದೇವ ಶೆಂಬೆಳ್ಳಿ, ಹಿರಿಯ ದಲಿತ ಮುಖಂಡ ಉದಯ ನಾಯಕ್, ಸಂಗಮೇಶ ಭಾವಿದೊಡ್ಡಿ, ಮಹೇಶ, ಬಸವರಾಜ ಲಾಧಾ, ವಿಶಾಲ್ ದೊಡ್ಡಿ ಇದ್ದರು.

## ವಿದ್ಯಾರ್ಥಿಗಳಿಗೆ ಸಾಧಿಸುವ ಉತ್ಸಾಹವಿರಲಿ

• ಉದಯವಾಹಿನಿ ಅಂಕೋಲಾ

ವಿದ್ಯಾರ್ಥಿ ಜೀವನದಲ್ಲಿ ಗುರಿ ಸಾಧಿಸುವ ಉತ್ಸಾಹ ಇರಬೇಕು. ನಿಮ್ಮ ಪಾಲಕರ ಕಷ್ಟವನ್ನು ಅರಿಯಬೇಕು ಎಂದು ನಿವೃತ್ತ ಪೊಲೀಸ್ ಅಧಿಕಾರಿ ವಿನಯ ಗಾಂವಕರ್ ಹೇಳಿದರು. ಪಟ್ಟಣದ ಪಿ.ಎಂ.ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ 32ನೇ ವಾರ್ಷಿಕ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಶವ ನಾಯ್ಕ ಮಾತನಾಡಿ, ಈ ಜಿಲ್ಲೆಗೆ ದಿನಕರ ದೇಸಾಯಿ ಅವರ ಕೊಡುಗೆ ದೊಡ್ಡದು, ಅವರು ಈ ಸಂಸ್ಥೆ ಕಟ್ಟದಿದ್ದರೆ ನಾವೆಲ್ಲರೂ ಅಕ್ಷರ ಕಲಿಯುವುದು ಅಸಾಧ್ಯವಾಗಿತ್ತು' ಎಂದರು. ನಾಟಿ ವೈದ್ಯ ಹನುಮಂತ ಗೌಡ, ಶಿಕ್ಷಕಿ ವಿಶಾಲಾಕ್ಷಿ ಶೆಟ್ಟಿ ಮಾತನಾಡಿದರು. ಪ್ರಾಚಾರ್ಯ ರಮಾನಂದ ನಾಯಕ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ವಸಂತ ನಾಯ್ಕ, ಉಪನ್ಯಾಸಕ ಉಲ್ಲಾಸ ಹುದ್ದಾರ, ರಮೇಶ ಗೌಡ, ಶ್ರೀನಿವಾಸ ಯು.ಕೆ. ಜಿನಾಖಾನ್, ರೇಷ್ಮಾ ನಾಯ್ಕ, ಅರ್ಚನಾ ನಾಯ್ಕ, ಇದ್ದರು.

## ಮಾನವ ಕಳ್ಳಸಾಗಣೆ; ಎಚ್ಚರ ಅಗತ್ಯ

• ಉದಯವಾಹಿನಿ ಉಡುಪಿ

ಮಾನವ ಕಳ್ಳಸಾಗಣೆಯಂತಹ ಅಮಾನವೀಯ ಕೃತ್ಯಗಳಿಗೆ ಕಡಿವಾಣ ಹಾಕಲು ಜಾರಿಗೊಳಿಸಲಾದ ಕಾನೂನುಗಳನ್ನು ಕ್ಷೇತ್ರ ಮಟ್ಟದ ಅಧಿಕಾರಿಗಳು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮನು ಪಟೇಲ್ ಬಿ.ವೈ. ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ನಗರದ ಬ್ರಹ್ಮಗಿರಿಯ ಜಿಲ್ಲಾ ಬಾಲಭವನದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಾನವ ಕಳ್ಳ ಸಾಗಣೆಯಂತಹ ದುಷ್ಕೃತ್ಯಗಳು ನಡೆಯದಂತೆ ನೋಡಿಕೊಳ್ಳುವುದು ಭಾಗೀದಾರ ಇಲಾಖೆಗಳ ಕರ್ತವ್ಯವಾಗಿದೆ. ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ಪ್ರತಿಯೊಬ್ಬ ನಾಗರಿಕರು ಬದ್ಧರಾಗಿರಬೇಕು ಎಂದು ತಿಳಿಸಿದರು.

## ತಿಂಗಳಲ್ಲಿ ಅಕ್ರಮ ದಂಧೆಯ 127 ಪ್ರಕರಣ

• ಉದಯವಾಹಿನಿ ಬಳ್ಳಾರಿ

ಜಿಲ್ಲೆಯಲ್ಲಿ ನಡೆಯುತ್ತಿರೋ ಅಕ್ರಮ ದಂಧೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹಲವು ದಾಳಿಗಳನ್ನು ನಡೆಸಿ ಕಳೆದೊಂದು ತಿಂಗಳಲ್ಲಿ ಗಾಂಜಾ, ಮಟ್ಕಾ, ಗ್ಯಾಂಬ್ಲಿಂಗ್, ಸ್ಯಾಂಡ್ , ಟ್ರಾನ್ಸ್‌ಪೋರ್ಟ್ ಸೇರಿದಂತೆ 127 ಕ್ಕೂ ಹೆಚ್ಚು ಪ್ರಕರಣ ದಾಖಲಿಸಿದೆಂದು ಎಸ್ಪಿ ಸುಮನ್ ಡಿ.ಪಿ ಹೇಳಿದ್ದಾರೆ. 47 ಮಟ್ಕಾ ಪ್ರಕರಣ. 24 ಗ್ಯಾಬ್ಲಿಂಗ್, 19 ಅಕ್ರಮ ಮರಳು ಸಾಗಾಣಿಕೆ, 25 ಅಕ್ರಮ ಮದ್ಯ ಮಾರಾಟ, 13 ಪಡಿತರ ಅಕ್ಕಿ ಸಾಗಾಣಿಕೆ ಪ್ರಕರಣ ದಾಖಲಿಸಿ, 22 ಎತ್ತಿನ ಬಂಡಿ 25 ಕಾರ್‌ಗಳನ್ನು ಸೀಜ್ ಮಾಡಿದ್ದೇವೆ. ಮಾಹಿತಿ ಬಂದ ಕೂಡಲೇ ಆ್ಯಕ್ಟಿವ್ ಆಗಿ ಕೆಲಸ ಮಾಡ್ತಿದ್ದೇವೆ.ಕಿಂಗ್ ಪಿನ್ ಮನೆಗಳ ಮೇಲೆ ದಾಳಿ ಮಾಡಿದ್ದೇವೆ. ಸತತವಾಗಿ ಅಪರಾಧದಲ್ಲಿ ಭಾಗಿಯಾಗಿರುವವರನ್ನು ಗಡಿಪಾರು ಮಾಡುವ ಬಗ್ಗೆ ಇರೋ ಕ್ರೈಟಿರಿಯಾ ಮೂಲಕ ಫಾಲೋಅಪ್ ಮಾಡುತ್ತಿದೆಂದು ಹೇಳಿದರು.

ಎನ್‌ಎಂ ಡಿಸಿಯಿಂದ ಅಕ್ರಮವಾಗಿ ಅದಿರನ್ನು ತಂದ ಪ್ರಕರಣದಲ್ಲಿ ಲಾರಿ ಡ್ರೈವರ್ ತಿಪ್ಪೇಸ್ವಾಮಿ ನೀಡಿದ ಮಾಹಿತಿಯಂತೆ ಸಾಯಿಬಾಲಾಜಿ ಮತ್ತು ನೋಬೆಲ್ ಇಸ್ಪಾತ್ ಕಂಪನಿಗಳಿಂದ ಕ್ರಮವಾಗಿ 1050 ಟನ್ 1000 ಟನ್ ಮೆಟೀರಿಯಲ್ಸ್ ಸೀಜ್ ಮಾಡಿದ್ದೇವೆ. ಇದರ ಹಿಂದೆ ಯಾರಿದ್ದಾರೆ ಎನ್ನುವ ಬಗ್ಗೆ ವಿಚಾರಣೆ ಮಾಡ್ತಿದ್ದೇವೆ. ಸಿಐಎಸ್‌ಎಫ್ ಸಿಬ್ಬಂದಿ ಮಾಹಿತಿ ಪಡೆದು ಮುಂದಿನ ತನಿಖೆ ನಡೆಯಲಿದೆಂದರು. ಯೂರಿಯಾ ಹಗರಣದಲ್ಲಿ ಡೀಲರ್‌ಗಳು ಭಾಗಿಯಾಗಿರೋ ಬಗ್ಗೆ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮಾಡ್ತಿದ್ದೇವೆ ಇದನ್ನು ಕೇರಳ ಸೇರಿದಂತೆ ಇನ್ನಿತರ ಕಡೆ ಕಳುಹಿಸುವ ಸಾಧ್ಯತೆ ಇದೆ ಎಂಬುದನ್ನು ತನಿಖೆಗೆ ಒಳಪಡಿಸುತ್ತಿದೆಂದು ಹೇಳಿದರು.

## ಅಧಿಕಾರಿಗಳ ನಿರ್ಲಕ್ಷ್ಯದಿಂದ ಒಡೆದು ಹೋದ ಕಾಲುವೆ : ಬೆಳೆದ ಬೆಳೆ ನೆಲಸಮಾ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೊಲ್ಹಾರ

ಅಧಿಕಾರಿಗಳ ನಿರ್ಲಕ್ಷ ಮತ್ತು ಕಳಪೆ ಕಾಮಗಾರಿ ನಿರ್ಮಿಸಿದ ಹಿನ್ನೆಲೆಯಲ್ಲಿ ಮುಳವಾಡ ಏತ ನೀರಾವರಿ 1ನೇ ಹಂತದ ದೊಡ್ಡ ಕಾಲುವೆ ಕಿತ್ತು ಹೋಗಿ ಬೆಳೆದಂತ ಬೆಳೆಯು ನಾಶವಾಗಿದೆ ಎಂದು ರೈತರು ಆರೋಪಿಸಿರುವ ಘಟನೆ ಸಂಭವಿಸಿದೆ. ಈ ಘಟನೆಯು ಜಿಲ್ಲೆಯ ಕೊಲ್ಹಾರ ತಾಲೂಕಿನ ಹಳ್ಳದ ಗೆಣ್ಣೂರು ಗ್ರಾಮದಲ್ಲಿ ತಡರಾತ್ರಿ ದೊಡ್ಡ ಕಾಲುವೆಯು ಕಿತ್ತು ಹೋಗಿ ಅಕ್ಕಪಕ್ಕದ ಜಮೀನುಗಳಿಗೆ ನೀರು ನುಗ್ಗಿ ಕಬ್ಬು, ಗೋಧಿ, ಈರುಳ್ಳಿ ಬೆಳೆ ಹಾನಿಯಾಗಿದೆ.

ಹಾನಿಯಾಗಿರುವ ಬೆಳೆಗಳಿಗೆ ಪರಿಹಾರ ವಿತರಿಸಬೇಕು ಮತ್ತು ಶೀಘ್ರದಲ್ಲಿ ನಾನಾ ಕಡೆ ಬಿರುಕು ಬಿಟ್ಟಿರುವ ಕಾಲುವೆ, ಮೇಲಿನ ಗಿಡಗಂಟಿಗಳನ್ನು ತೆಗೆದು ದುರಸ್ತಿಗೂಳಸಿ, ಮತ್ತು ಬೆಳೆದಂತ ಈರುಳ್ಳಿಯೂ ಹಾನಿಗೀಡಾಗಿರುವ ರೈತರಿಗೆ ಪರಿಹಾರ ವಿತರಿಸಬೇಕು. ಶೀಘ್ರದಲ್ಲಿ ಕೆಬಿಜೆನಿಲ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಮತ್ತು ಕಳಪೆ ಕಾಮಗಾರಿ ನಿರ್ಮಿಸಿದ ಗುತ್ತಿಗೆದಾರರ ಕಪ್ಪು ಪಟ್ಟಿಗೆ ಸೇರಿಸಬೇಕು, ಶೀಘ್ರದಲ್ಲಿ ಕಾಲುವೆ ದುರಸ್ತಿಗೊಳಿಸಿ ಸ್ಥಳೀಯ ರೈತರು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

**ಕಬ್ಬು ಮತ್ತು ಈರುಳ್ಳಿ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿ ಹತ್ತಾರು ಎಕರೆ ಬೆಳೆ ನಾಶವಾಗಿದೆ. ಶೀಘ್ರದಲ್ಲಿ ಸೂಕ್ತ ಪರಿಹಾರ ವಿತರಿಸಬೇಕು, ಬಿರುಕು ಬಿಟ್ಟಿರುವ ಕಾಲುವೆ ಕಡೆ ಗಮನಹರಿಸಿ ದುರಸ್ತಿಗೆ ಮುಂದಾಗಬೇಕು.**
**- ಮಹೇಶ್ ಪಾಟೀಲ್, ಹಾನಿಯಾಗಿರುವ**

**ಮುಳವಾಡ ಏತ ನೀರಾವರಿ 1ನೇ ಹಂತದ ಕಾಲುವೆಯು ಒಡೆದು ಬೆಳೆದ ಬೆಳೆಯುವ ನೆಲಸಮವಾಗಿರುವುದರಿಂದ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಮತ್ತು ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿಸಬೇಕು ಎಂದು ಆಗ್ರಹಿಸಿದರು.**
**- ರವಿ ಗೂಳಸಂಗಿ. ಕರವೇ ತಾಲ್ಲೂಕಾ ಅಧ್ಯಕ್ಷ**

## ಮಕ್ಕಳಲ್ಲಿ ಹೊಟ್ಟೆನೋವು ನಿರ್ಲಕ್ಷ್ಯ ಬೇಡ: ಡಾ. ನಳಿನಾಕ್ಷಿ ಆಡಳಿತ ವೈದ್ಯಾಧಿಕಾರಿ ಬೆಳಗಟ್ಟ

• ಉದಯವಾಹಿನಿ ಚಿತ್ರದುರ್ಗ

ಮಕ್ಕಳಲ್ಲಿ ಇದ್ದಕ್ಕಿದ್ದಂತೆ ದೇಹದ ತೂಕ ಕಡಿಮೆಯಾಗುವುದು, ರಕ್ತಹೀನತೆ, ಹೊಟ್ಟೆ ನೋವು ಗುದದ್ವಾರದಲ್ಲಿ ತುರಿಕೆ ಇಂತಹ ಸಮಸ್ಯೆಗಳು ಕಂಡು ಬಂದಲ್ಲಿ ಮಕ್ಕನ್ನು ತಕ್ಷಣವೇ ವೈದ್ಯರಲ್ಲಿ ಕರೆತಂದು ಆರೋಗ್ಯ ಪರೀಕ್ಷೆ ಮಾಡಿದುವುದು ಸೂಕ್ತ ಏಕೆಂದರೆ ಇದು ಮಗುವಿನ ದೇಹದಲ್ಲಿ ಜಂತುಹುಳುಗಳ ಸಮಸ್ಯೆಯಾಗಿರಬಹುದು ಇದನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಮಾಡಬಾರದು ಎಂದು ಬೆಳಗಟ್ಟ ಸರ್ಕಾರಿ ಪ್ರಾಥಮಿಕ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ನಳಿನಾಕ್ಷಿ ಸಲಹೆ ನೀಡಿದರು. ಅವರು ರಾಷ್ಟ್ರೀಯ ಜಂತುಹುಳುಗಳ ನಿವಾರಣಾ ದಿನದ ಅಂಗವಾಗಿ ಚಿತ್ರದುರ್ಗ ತಾಲ್ಲೂಕು ಬೆಳಗಟ್ಟ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ ಭಾರತದಂತಹ ದೇಶಗಳಲ್ಲಿ ಪ್ರತಿವರ್ಷ 20 ಕೋಟಿಗೂ ಹೆಚ್ಚು ಮಕ್ಕಳು ಈ ಸಮಸ್ಯೆಗೆ ಒಳಗಾಗುತ್ತಾರೆ ಮಕ್ಕಳಲ್ಲಿ ಜಂತುಹುಳು ಸೋಂಕು ಸಾಮಾನ್ಯ ಸಮಸ್ಯೆಯಾಗಿದ್ದು, ಇದು ಅಶುದ್ಧ ಆಹಾರ, ನೀರು ಅಥವಾ ಮಣ್ಣಿನ ಮೂಲಕ ಹರಡುತ್ತದೆ ಗ್ರಾಮೀಣ ಪ್ರದೇಶಗಳಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡುಬರುವುದು ಆತಂಕಕಾರಿ ವಿಷಯವಾಗಿದೆ ಈ ಸಮಸ್ಯೆಯ ಬಗ್ಗೆ ಜನರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸುವ ಸಲುವಾಗಿ ಪ್ರತಿವರ್ಷ ಫೆಬ್ರವರಿ10ರಂದು ರಾಷ್ಟ್ರೀಯ ಜಂತುಹುಳು ನಿವಾರಣ ದಿನವನ್ನಾಗಿ ಆಚರಿಸಲಾಗುತ್ತದೆ ಈ ದಿನ ಆರೋಗ್ಯ ಇಲಾಖೆಯ ಎಲ್ಲಾ ಆರೋಗ್ಯ ಅಧಿಕಾರಿಗಳು ಆಶಾ ಕಾರ್ಯಕರ್ತೆಯರು ಪ್ರತಿ ಅಂಗನವಾಡಿ ಶಾಲಾ ಕಾಲೇಜುಗಳಿಗೆ ಭೇಟಿನೀಡಿ 1ರಿಂದ 19 ವರ್ಷ ವಯಸ್ಸಿನ ಮಕ್ಕಳಿಗೆ ಜಂತುಹುಳು ಸೋಂಕು ತಡೆಗಟ್ಟುವ ಅಲ್ಬೆಂಡಾಜೋಲ್ ಮಾತ್ರೆಗಳನ್ನು ಉಚಿತವಾಗಿ ನೀಡಲಾಗುತ್ತದೆ ಇದರಿಂದ ಯಾವುದೇ ಮಗುವು ವಂಚಿತವಾಗಬಾರದು ಎಲ್ಲಾ ಮಕ್ಕಳ ಅಲ್ಬೆಂಡಾಜೋಲ್ ಮಾತ್ರೆ ತೆಗೆದುಕೊಳ್ಳಬೇಕು ಈ ಕಾರ್ಯಕ್ರಮ ಯಶಸ್ವಿಗೊಳಲು ಸಮಾಜ ಮತ್ತು ಸಮುದಾಯದ ಎಲ್ಲರ ಸಹಭಾಗಿತ್ವ ಅಗತ್ಯವಾಗಿದೆ ಎಂದು ಹೇಳಿದರು. ಮಹೇಶ್ ಡಿ, ಅರೋಗ್ಯ ನೀರಿಕ್ಷಣಾಧಿಕಾರಿ, ಪಿಎಚ್‌ಸಿಒ ಶುಭಶ್ರೀ, ಟಿ. ನಿರ್ಮಲ, ಅಶಾ ಕಾರ್ಯಕರ್ತೆಯರು, ಇತರರು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

## ಅಹಿಂಸೆ, ವಿಶ್ವಭ್ರಾತೃತ್ವ ಇಂದಿನ ಜೀವಮಂತ್ರ: ವೂಡೆ ಪಿ.ಕೃಷ್ಣ

• ಉದಯವಾಹಿನಿ ಶಿವಮೊಗ್ಗ

ಹಿಂಸೆ, ಅರಾಜಕತೆ, ಭ್ರಷ್ಟಾಚಾರ ತಾಂಡವಾಡುತ್ತಿರುವ ಈ ದಿನಗಳಲ್ಲಿ ಜಗತ್ತಿಗೆ ಅಹಿಂಸೆ, ವಿಶ್ವಭ್ರಾತೃತ್ವ, ಗ್ರಾಮ ಸ್ವರಾಜ್ಯ, ಸಮಾನತೆ, ಸರಳತೆಯ ಪಾಠ ಹೇಳಿಕೊಟ್ಟ ಮಹಾತ್ಮ ಗಾಂಧೀಜಿ ಇಂದಿಗೂ ಪ್ರಸ್ತುತ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೆ ಪಿ. ಕೃಷ್ಣ ಅಭಿಪ್ರಾಯಪಟ್ಟರು. ಇಲ್ಲಿನ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಆರಂಭವಾದ ಗಾಂಧೀಜಿ ಚಿಂತನೆಗಳ ಪ್ರಸ್ತುತತೆ, ಸತ್ಯಶೋಧನೆ 100 ವಿಷಯದ ಬಗ್ಗೆ ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಸಮಾಜ, ಸಾಮಾಜಿಕ, ನೈತಿಕ ಸ್ವಾತಂತ್ರ್ಯ ಹಾಗೂ ಗಾಂಧಿ ಅವರ ಜೀವನ ಸಂದೇಶವನ್ನು ವಿವೇಚನಾತ್ಮಕವಾಗಿ ಚಿಂತಿಸಿದಲ್ಲಿ ಮೂಲಭೂತವಾದಿಗಳ, ಕೋಮುವಾದಿಗಳ ವಿರುದ್ಧ ಹೋರಾಟ ನಡೆಸಬಹುದು. ಬಹುತ್ವದ ಚಿಂತನೆ ನಮ್ಮ ಶಕ್ತಿಯಾಗಿದೆ. ಗಾಂಧೀ ಪ್ರಪಂಚಕ್ಕೆ ಬೆಳಕಾದವರು ಎಂದರು. ವರ್ತಮಾನದಲ್ಲಿ ಗಾಂಧಿ ನಮಗೆ ಪ್ರಸ್ತುತ. ಗಾಂಧೀಜಿಯವರ ಬದುಕಿನ ಸಂದೇಶ ನೀಡಿದ ಸತ್ಯಶೋಧನೆಗೆ 100 ಸಂವತ್ಸರಗಳು ತುಂಬಿರುವ ಆತ್ಮಕಥನವನ್ನು ಇಂದು ಮತ್ತೆ ಮತ್ತೆ ಅಧ್ಯಯನ ಮಾಡಿ ಅರ್ಥೈಸಿಕೊಳ್ಳಬೇಕಿದೆ ಎಂದರು.


ಉದಯವಾಹಿನಿ ಚಿತ್ರ

# ಗ್ರಾಮದ ಪ್ರತಿ ಕುಟುಂಬಕ್ಕೂ ಯೋಜನೆ ರೂಪಿಸಿ: ಲಕ್ಷ್ಮೀ ಹೆಬ್ಬಾಳ್ಕರ್

### ಗ್ರಾಮೀಣ ಅಭಿವೃದ್ಧಿ ಆಗಬೇಕೆಂದರೆ ಮಹಿಳೆಯರ ಅಭಿವೃದ್ಧಿ ಆಗಬೇಕೆಂಬ ಚಿಂತನೆ ಮೂಲಕ ಮುನ್ನಡೆದಿದೆ

• ಉದಯವಾಹಿನಿ ಬೆಳಗಾವಿ

ಕಾಂಗ್ರೆಸ್ ಸರ್ಕಾರ ಹಿಂದಿನಿಂದಲೂ ಗ್ರಾಮೀಣಾಭಿವೃದ್ಧಿಯಲ್ಲಿ ನಂಬಿಕೆ ಇಟ್ಟುಕೊಂಡು ಬಂದಿದೆ. ಗ್ರಾಮ ಪಂಚಾಯಿತಿಗಳನ್ನು ಜಾರಿಗೊಳಿಸಿದ್ದು, ಕೃಷಿ ಸಹಾಯಕಿಯರು, ಪಶು ಸಹಾಯಕಿಯರನ್ನು ನೇಮಕ ಮಾಡಿದ್ದು, ಅಂಗನವಾಡಿ ಕೇಂದ್ರಗಳನ್ನು ಆರಂಭಿಸಿದ್ದು ನಮ್ಮದೇ ಸರ್ಕಾರ. ಈಗಲೂ ಗ್ರಾಮೀಣ ಅಭಿವೃದ್ಧಿ ಆಗಬೇಕೆಂದರೆ ಮಹಿಳೆಯರ ಅಭಿವೃದ್ಧಿ ಆಗಬೇಕೆಂಬ ಚಿಂತನೆ ಮೂಲಕ ಮುನ್ನಡೆದಿದೆ. ನೀವು ಕರ್ತವ್ಯ ಅರಿತು ಕೆಲಸ ಮಾಡಬೇಕು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಕರೆ ನೀಡಿದರು.

**ಪ್ರತಿ ಕುಟುಂಬಕ್ಕೂ ಯೋಜನೆ ಮುಟ್ಟಿಸಬೇಕು**

ತಾಲ್ಲೂಕಿನ ಗ್ರಾಮ ಪಂಚಾಯಿತಿ ಮಟ್ಟದ ಮುಖ್ಯ ಪುಸ್ತಕ ಬರಹಗಾರರು, ಮತ್ತು ಎಲ್‌ಸಿಆರ್‌ಪಿ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ, ಕೃಷಿ ಸಖಿ ಮತ್ತು ಪಶು ಸಖಿಯರ ಜತೆಗೆ, ನಗರದಲ್ಲಿ ಸಮಾಲೋಚನೆ ನಡೆಸಿ ಅವರು ಮಾತನಾಡಿದರು. ಈಗ ಗೃಹಲಕ್ಷ್ಮೀ ಯೋಜನೆ ಜಾರಿಗೆ ತಂದಿದ್ದು ಕಾಂಗ್ರೆಸ್ ಸರ್ಕಾರವೇ. ಇವೆಲ್ಲದರ ಮೂಲ ಉದ್ದೇಶವೇ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ. ನೀವೆಲ್ಲ ಸಕ್ರಿಯವಾಗಿ ತೊಡಗಿಕೊಳ್ಳಬೇಕು. ಹಳ್ಳಿಗಳ ಪ್ರತಿ ಕುಟುಂಬಕ್ಕೂ ಯೋಜನೆ ಮುಟ್ಟಿಸಬೇಕು ಎಂದರು.


ಉದಯವಾಹಿನಿ ಚಿತ್ರ

ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಯಶವಂತ ಕುಮಾರ, ಕಾಡಾ ಅಧ್ಯಕ್ಷ ಯುವರಾಜ ಕದಂ, ಗ್ರಾಮೀಣ ಮುಖಂಡರಾದ ಮನೋಹರ್ ಬಾಂಡಗಿ, ಬಾಳು ದೇಸೂರಕರ್, ಸಿ.ಸಿ.ಪಾಟೀಲ, ಪಶು ಹಾಗೂ ಕೃಷಿ ಸಖಿಯರು ಉಪಸ್ಥಿತರಿದ್ದರು.

**ಶಿವಾಜಿ ಆದರ್ಶ ಪಾಲಿಸಿ:** ನಾವು ಶಿವಾಜಿ ಮಹಾರಾಜರನ್ನು ಪೂಜಿಸುವ ಜೊತೆಗೆ ಅವರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಖನಗಾಂವ ಕೆ.ಎಚ್. ಗ್ರಾಮದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಭವ್ಯ ಮೂರ್ತಿಯ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಸ್ಥಳದ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಧರ್ಮ, ಭಾಷೆ, ಜಾತಿ ಯಾವುದೂ ಅಡ್ಡಿಯಾಗದೇ ಜನರ ಸುರಕ್ಷತೆ, ಸ್ವಾಭಿಮಾನ ಮತ್ತು ಸ್ವರಾಜ್ಯ ಇವು ಶಿವಾಜಿಯವರ ಆಡಳಿತದ ಮೂಲ ತತ್ವಗಳು. ನಾನು ಕೂಡ ಯಾವುದೇ ಭೇದ ಭಾವವಿಲ್ಲದೆ ಜನರ ಸೇವೆ ಮಾಡುತ್ತಿದ್ದೇನೆ' ಎಂದು ಹೇಳಿದರು. ನಂತರ ಅರಿಶಿನ-ಕುಂಕುಮ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

**ಜಾಗ ಮಂಜೂರು**

ಸಚಿವೆಗೆ ಸನ್ಮಾನ ಬೆಳಗಾವಿ ಗ್ರಾಮೀಣ ಕ್ಷೇತ್ರದ ಬೆನಕನಹಳ್ಳಿಯ ಜೈ ಗಣೇಶ ಎಕ್ಸ್ ಸರ್ವಿಸ್ ಮ್ಯಾನ್ ಅಸೋಸಿಯೇಷನ್ (ಸರಸ್ವತಿ ನಗರ) ಕಟ್ಟಡ ನಿರ್ಮಾಣಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಜಾಗ ಮಂಜೂರು ಮಾಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅಸೋಸಿಯೇಷನ್ ಅಧ್ಯಕ್ಷ ಗಣಪತ್ ದೇಸಾಯಿ ಅವರ ನೇತೃತ್ವದ ಮಾಜಿ ಸೈನಿಕರು ಗೃಹ ಕಚೇರಿಗೆ ಆಗಮಿಸಿ ಸನ್ಮಾನಿಸಿದರು. ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹಾಗೂ ಅನೇಕ ಮಾಜಿ ಸೈನಿಕರು ಮತ್ತು ಅವರ ಕುಟುಂಬಸ್ಥರು ಉಪಸ್ಥಿತರಿದ್ದರು.

**ಸಚಿವೆ ಸಮಾಲೋಚನೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಬೆಳಗಾವಿ ಗ್ರಾಮೀಣ ಕ್ಷೇತ್ರದ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಸಮಾಲೋಚನಾ ಸಭೆ ನಡೆಸಿದರು. ಮಕ್ಕಳ ಆರೋಗ್ಯ ಶಿಕ್ಷಣ ಸುಧಾರಣೆಗೆ ಸಲಹೆ ಸೂಚನೆಗಳನ್ನು ನೀಡಿದರು. ಕಾರ್ಯಕರ್ತೆಯರ ಕುಂದು ಕೊರತೆಗಳನ್ನು ಆಲಿಸಿದ ಸಚಿವೆ ಸ್ಥಳೀಯ ಮಟ್ಟದ ಸಮಸ್ಯೆಗಳ ಪರಿಹಾರಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಇಲಾಖೆಯ ಉಪ ನಿರ್ದೇಶಕರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಚನೆ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಚೇತನಕುಮಾರ್ ಉಪಸ್ಥಿತರಿದ್ದರು.

# ದಾಳಿಂಬೆ ಉದಾಹರಣೆ ನೀಡಿ ಪಾಕಿಸ್ತಾನ ಸೇನೆ ಟೀಕಿಸಿದ ಮೌಲಾನಾ

## • ಅಫ್ಘಾನಿಸ್ತಾನ ಗಡಿಯಲ್ಲಿ ಉಗ್ರರ ಉಪಟಳವನ್ನು ನಿಗ್ರಹಿಸುವಲ್ಲಿ ಪಾಕ್ ಸೇನೆ ವಿಫಲವಾಗಿದೆ

**ರಾವಲ್ಪಿಂಡಿ:** ಶಂಖದಿಂದ ಬಂದರಷ್ಟೇ ತೀರ್ಥ ಎಂಬಂತೆ, ಪಾಕಿಸ್ತಾನ ಸರ್ಕಾರ ಮತ್ತು ಸೇನೆಗೆ ಸ್ಥಳೀಯರಿಂದ ವಿರೋಧ ವ್ಯಕ್ತವಾದಾಗಲೇ ವಾಸ್ತವ ಪರಿಚಯವಾಗುತ್ತದೆ. ಅದೇ ರೀತಿ ಪಾಕಿಸ್ತಾನದ ವಿರುದ್ಧ ನಿರಂತರವಾಗಿ ಹೇಳಿಕೆಗಳನ್ನು ನೀಡುವ ಜಮಿಯತ್ ಉಲೇಮಾ-ಇ-ಇಸ್ಲಾಂ (ಎಫ್) ಮುಖ್ಯಸ್ಥ ಮೌಲಾನಾ ಫಜ್ಲುರ್ ರೆಹಮಾನ್, ಮತ್ತೊಮ್ಮೆ ಪಾಕ್ ಸರ್ಕಾರ ಮತ್ತು ಸೇನೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ರಾವಲ್ಪಿಂಡಿಯಲ್ಲಿ ಕಳೆದ ಸಭೆಯನ್ನುದ್ದೇಶಿಸಿ ಮಾತನಾಡಿರುವ ಮೌಲಾನಾ ಫಜ್ಲುರ್ ರೆಹಮಾನ್, ಪ್ರಧಾನಮಂತ್ರಿ ಶೆಹಬಾಜ್ ಷರೀಫ್ ನೇತೃತ್ವದ ಪಾಕಿಸ್ತಾನ ಸರ್ಕಾರ ಅಫ್ಘಾನಿಸ್ತಾನ ಉಗ್ರಗ್ರಾಮಿ ಸಮಸ್ಯೆಯನ್ನು ನಿಭಾಯಿಸಿದ ರೀತಿಯನ್ನು ತೀವ್ರವಾಗಿಖಂಡಿಸಿದರು.

ಉಗ್ರರನ್ನು ಹೊಡೆಯಲು ಪಾಕಿಸ್ತಾನಕ್ಕೆ ಭಾರತ ನುಗ್ಗಿದರೆ

> ಪಾಕಿಸ್ತಾನವನ್ನು ಬಹಿರಂಗವಾಗಿ ಟೀಕಿಸುವ ಮತ್ತು ಭಾರತದ ಪರ ಹೇಳಿಕೆಗಳನ್ನು ನೀಡುವ ಜಮಿಯತ್ ಉಲೇಮಾ-ಇ-ಇಸ್ಲಾಂ (ಎಫ್) ಮುಖ್ಯಸ್ಥ ಮೌಲಾನಾ ಫಜ್ಲುರ್ ರೆಹಮಾನ್, ಮತ್ತೊಮ್ಮೆ ಪಾಕಿಸ್ತಾನ ಸೇನೆಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಅಫ್ಘಾನಿಸ್ತಾನ ಗಡಿಯಲ್ಲಿ ಉಗ್ರರ ಉಪಟಳವನ್ನು ನಿಗ್ರಹಿಸುವಲ್ಲಿ ಪಾಕ್ ಸೇನೆ ವಿಫಲವಾಗಿದೆ ಎಂದಿರುವ ಫಜ್ಲುರ್ ರೆಹಮಾನ್, ಪಾಕ್-ಅಫ್ಘಾನ್ ಗಡಿಯಲ್ಲಿ ಒಂದು ದಾಳಿಂಬ ಹಣ್ಣೂ ಕೂಡ ಸೇನೆಯ ಕಣ್ತಪ್ಪಿಸಿ ಒಳಬರುವಂತಿಲ್ಲ. ಆದರೆ ಉಗ್ರರು ಬರಬಹುದು -ಮೌಲಾನಾ ಫಜ್ಲುರ್ ರೆಹಮಾನ್

- ಪಾಕಿಸ್ತಾನ ಸೇನೆಯನ್ನು ಹಿಗ್ಗಾಮುಗ್ಗಾ ಜಾಡಿಸಿದ ಮೌಲಾನಾ ಫಜ್ಲುರ್ ರೆಹಮಾನ್.
- ಶೆಹಬಾಜ್ ಷರೀಫ್ ಸರ್ಕಾರದ ಅಫ್ಘಾನ್ ನೀತಿಗೆ ಪಾಕ್ ರಾಜಕಾರಣಿ ವಿರೋಧ.
- ಪಾಕಿಸ್ತಾನವನ್ನು ಬಹಿರಂಗವಗಿ ಟೀಕಿಸಿರುವ ಜಮಿಯತ್ ಉಲೇಮಾ-ಇ-ಇಸ್ಲಾಂ (ಎಫ್) ಮುಖ್ಯಸ್ಥ.



ತಪ್ಪಲ್ಲ ಎಂದು ಹೇಳುವ ಮೂಲಕ ಫಜ್ಲುರ್ ರೆಹಮಾನ್ ಇತ್ತೀಚಿಗೆ ಪಾಕಿಸ್ತಾನದಲ್ಲಿ ಸಂಚಲನ ಸೃಷ್ಟಿಸಿದ್ದರು.

ಶೆಹಬಾಜ್ ಷರೀಫ್ ಸರ್ಕಾರ ಅಫ್ಘಾನಿಸ್ತಾನದೊಂದಿಗೆ ವ್ಯಾಪಾರವನ್ನು ನಿರ್ಬಂಧಿಸಿದೆ. ಅಫ್ಘಾನಿಸ್ತಾನದ ಗಡಿಯಿಂದ ಪಾಕಿಸ್ತಾನಕ್ಕೆ ಒಂದು ದಾಳಿಂಬೆ ಅಥವಾ ಕಲ್ಲಂಗಡಿಯೂ ಬರುವಂತಿಲ್ಲ. ಆದರೆ ಭಯೋತ್ಪಾದಕರು ಯಾವುದೇ ಸಮಸ್ಯೆಯಿಲ್ಲದೇ ಗಡಿದಾಟಿ ಒಳಗೆ ಬರುತ್ತಿದ್ದಾರೆ. ಇದು ಪಾಕಿಸ್ತಾನ ಸೇನೆಯ ಅಸಮರ್ಥತೆಗೆ ಸಾಕ್ಷಿ ಎಂದು ಮೌಲಾನಾ ಫಜ್ಲುರ್ ರೆಹಮಾನ್ ಹರಿಹಾಯ್ದಿದ್ದಾರೆ.

ಶೆಹಬಾಜ್ ಷರೀಫ್ ಸರ್ಕಾರದ ಅಫ್ಘಾನಿಸ್ತಾನ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿರುವ ಜಮಿಯತ್ ಉಲೇಮಾ-ಇ-ಇಸ್ಲಾಂ (ಎಫ್) ಮುಖ್ಯಸ್ಥ, ಪಾಕಿಸ್ತಾನ ಸೇನೆ ಗಡಿಯಲ್ಲಿ ನಿತ್ಯವೂ ತಾಲಿಬಾನ್ ಸೇನೆಯಿಂದ ಪೆಟ್ಟು ತಿನ್ನುತ್ತಿದೆ ಎಂದು ಕಿಡಿಕಾರಿದ್ದಾರೆ. ಫಜ್ಲುರ್ ರೆಹಮಾನ್ ಅವರು ಅಫ್ಘಾನಿಸ್ತಾನ-ಪಾಕಿಸ್ತಾನ ಸೇನಾ ಸಂಘರ್ಷ, ಪಾಕ್ ಸೇನೆಯ ಅಸಲಿ ಮುಖವಾಡ ಕಳಚಿದೆ ಎಂದು ಪ್ರತಿಪಾದಿಸಿದ್ದಾರೆ.

ಇದೇ ವೇಳೆ ಶೆಹಬಾಜ್ ಷರೀಫ್ ಸರ್ಕಾರದ ವಿದೇಶಾಂಗ ಮತ್ತು ಆರ್ಥಿಕ ನೀತಿಯನ್ನು ಖಂಡಿಸಿರುವ ಫಜ್ಲುರ್ ರೆಹಮಾನ್, ಭಾರತ ಮಾತ್ರವಲ್ಲದೆ ಅಫ್ಘಾನಿಸ್ತಾನವನ್ನೂ ನಾವು ಶತ್ರು ಮಾಡಿ ಕೊಂಡಿದ್ದೇವೆ. ಇರಾನ್ ಮತ್ತು ಚೀನಾ ಕೂಡ ನಮ್ಮಿಂದ ಅಸಮಧಾನಗೊಂಡಿವೆ.

ಒಂದು ರಾಷ್ಟ್ರವು ತನ್ನ ನೀತಿಗಳಿಂದಾಗಿ ಪ್ರತ್ಯೇಕತೆ, ಅಪನಂಬಿಕೆ ಮತ್ತು ಅಭದ್ರತೆಯನ್ನು ಸೃಷ್ಟಿಸಿಕೊಂಡರೆ ಅಲ್ಲಿ ಬದುಕಲು ಸಾಧ್ಯವಿಲ್ಲ ಎಂದು ಸೂಚ್ಯವಾಗಿ ಹೇಳಿದರು. ದೇಶದ ವಿದೇಶಾಂಗ ನೀತಿಯನ್ನು ನಾಗರಿಕ ಸರ್ಕಾರವು ರೂಪಿಸುತ್ತಿಲ್ಲ, ಬದಲಿಗೆ ಮಿಲಿಟರಿ ಸ್ಥಾಪನೆ ಆ ಕಾರ್ಯ ಮಾಡುತ್ತಿದೆ. ಒಬ್ಬ ಜನರಲ್ ಮಾಧ್ಯಮಗಳ ಮುಂದೆ ಬಂದು ನಾವು ನಿರ್ದಿಷ್ಟ ದೇಶದೊಂದಿಗೆ ಮಾತುಕತೆ ನಡೆಸುತ್ತೇವೆ ಎಂದು ಹೇಳಿದರೆ, ಮತ್ತೊಬ್ಬರು ಬಂದು ನಾವು ನಿರ್ದಿಷ್ಟ ದೇಶದೊಂದಿಗೆ ಯುದ್ಧ ಮಾಡುತ್ತೇವೆ ಎಂದು ಹೇಳುತ್ತಾರೆ ಎಂದು ಫಜ್ಲುರ್ ರೆಹಮಾನ್ ಅವರು ಪಾಕಿಸ್ತಾನ ಸರ್ಕಾರ ಮತ್ತು ಸೇನೆಯ ವಿರುದ್ಧ ಗುಡುಗಿದ್ದಾರೆ.

ಪಾಕಿಸ್ತಾನವನ್ನು ನಿರಂತರವಾಗಿ ಟೀಕಿಸುವ ಮೌಲಾನಾ ಫಜ್ಲುರ್ ರೆಹಮಾನ್, ಭಾರತ ಸೂಪರ್ ಪವರ್ ಆದರೆ ನಾವು ಭಿಕ್ಷೆ ಬೇಡುತ್ತಿದ್ದೇವೆ ಎಂದು ಹೇಳುವ ಮೂಲಕ ಪಾಕ್ ಸರ್ಕಾರದ ನಿದ್ದೆಗೆಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

### ಉಗ್ರರನ್ನು ತಡೆಯುವಲ್ಲಿ ವಿಫಲ

ಪಾಕಿಸ್ತಾನ ಸೇನಾಧಿಕಾರಿಗಳು ಅಫ್ಘಾನಿಸ್ತಾನ ಗಡಿಯಿಂದ ಭಯೋತ್ಪಾದಕರು ಒಳನುಗ್ಗುತ್ತಿದ್ದಾರೆ ಎಂದು ಹೇಳಿದ್ದಾರೆ. ಒಂದು ವೇಳೆ ಅವರು ಗಡಿನುಗ್ಗಿ ಬರುತ್ತಿದ್ದರೆ, ನೀವು ಅವರನ್ನೇಕೆ ತಡೆಯುತ್ತಿಲ್ಲ. ಉಗ್ರರ ವಿರುದ್ಧದ ನಿಮ್ಮ ಕ್ರಮಗಳಿಗೆ ಅಫ್ಘಾನಿಸ್ತಾನ ಸರ್ಕಾರ ಎಂದಿಗೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಆದಾಗ್ಯೂ, ನೀವು ಉಗ್ರರನ್ನು ತಡೆಯುವಲ್ಲಿ ವಿಫಲರಾಗಿದ್ದೀರಿ ಎಂದರೆ ಅದು ನಿಮ್ಮ ಅಸಮರ್ಥತೆಗೆ ಸಾಕ್ಷಿ ಎಂದು ಮೌಲಾನಾ ಫಜ್ಲುರ್ ರೆಹಮಾನ್ ಪಾಕ್ ಸೇನೆಯನ್ನು ಹಿಗ್ಗಾಮುಗ್ಗಾ ಜಾಡಿಸಿದ್ದಾರೆ.

**ಇದಕ್ಕಿಂತ ಅವಮಾನ ಬೇಕಾ?**

# ಬಾಬ್ರಿ ಮಸೀದಿ ಕನಸು ಕಾಣಬೇಡಿ, ಅದು ಎಂದಿಗೂ ನನಸಾಗಲ್ಲ

**ಬರಾಬಂಕಿ:** ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಬಾಬ್ರಿ ಮಸೀದಿ ವಿಚಾರದಲ್ಲಿ ತಮ್ಮ ಕಠಿಣ ನಿಲುವನ್ನು ಮತ್ತೊಮ್ಮೆ ಪುನರುಚ್ಚರಿಸಿದ್ದು, ''ಕಯಾಮತ್ ದಿನದವರೆಗೆ ಕೂಡ ಬಾಬ್ರಿ ರಚನೆ ಪುನರ್ ನಿರ್ಮಾಣವಾಗುವುದಿಲ್ಲ'' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಂಗಳವಾರ ಬರಾಬಂಕಿಯ ಶ್ರೀರಾಮ ಜನಕಿ ದೇವಸ್ಥಾನದಲ್ಲಿ ಆಯೋಜಿಸಲಾದ 10ನೇ ಶ್ರೀ ಹನುಮಾನ್ ವಿರಾಟ್ ಮಹಾಯಜ್ಞ ಹಾಗೂ ಶ್ರೀ ರಾಮಾರ್ಚನಾ ಪೂಜೆಯ ವೇಳೆ ಮಾತನಾಡಿದ ಅವರು, ತಮ್ಮ ಸರ್ಕಾರ ಹೇಳಿದ ಮಾತಿಗೆ ಬದ್ಧವಾಗಿದೆ ಎಂದು ಹೇಳಿದರು. ಈ ಸರ್ಕಾರ ಹೇಳಿದಂತೆ ನಡೆದುಕೊಳ್ಳುತ್ತದೆ, ಮಾಡಿದ ಕೆಲಸವನ್ನೇ ಹೇಳುತ್ತದೆ. ನಾವು 'ರಾಮಲಲ್ಲಾ, ಅಲ್ಲಿಗೆ ಬಂದು ಮಂದಿರ ನಿರ್ಮಿಸುತ್ತೇವೆ' ಎಂದಿದ್ದೆವು. ಅದನ್ನೇ ಮಾಡಿದ್ದೇವೆ ಎಂದು ಅಯೋಧ್ಯೆಯ ರಾಮ ಮಂದಿರ ನಿರ್ಮಾಣವನ್ನು ಉಲ್ಲೇಖಿಸಿದರು.



> ಬಾಬ್ರಿ ಮಸೀದಿ ಕುರಿತು ಮಾತನಾಡಿದ ಯೋಗಿ, ಇಂದು ಮತ್ತೆ ಹೇಳುತ್ತಿದ್ದೇವೆ ಕಯಾಮತ್ ದಿನದವರೆಗೆ. ಆ ದಿನವೇ ಬರಲಿಲ್ಲ ಅಂದರೆ, ಬಾಬ್ರಿ ರಚನೆಯ ಪುನರ್ ನಿರ್ಮಾಣವೂ ಎಂದಿಗೂ ನಡೆಯುವುದಿಲ್ಲ. ಅದನ್ನು ಕನಸು ಕಾಣುವವರು ಭ್ರಮೆಯಲ್ಲಿ ಬದುಕುತ್ತಿದ್ದಾರೆ. -ಯೋಗಿ ಆದಿತ್ಯನಾಥ್

ಕೆಲವು ಅವಕಾಶವಾದಿ ಶಕ್ತಿಗಳನ್ನು ಟೀಕಿಸಿದ ಅವರು, ಸಂಕಷ್ಟದ ಸಮಯದಲ್ಲಿ ಮಾತ್ರ ರಾಮನನ್ನು ಸ್ಮರಿಸುವವರು ಇದ್ದಾರೆ ಎಂದು ಹೇಳಿ, ಅಂಥವರನ್ನು ಈಗಾಗಲೇ ಶ್ರೀರಾಮನೇ ಮರೆತಿದ್ದಾರೆ ಎಂದು ತೀಕ್ಷ್ಣವಾಗ್ದಾಳಿ ನಡೆಸಿದರು. ಹಿಂದಿನ ದಿನಗಳಲ್ಲಿ ರಾಮಭಕ್ತರ ಮೇಲೆ ಗುಂಡು ಹಾರಿಸಿದವರು ಅಥವಾ ಧಾರ್ಮಿಕ ಕಾರ್ಯಗಳಿಗೆ ಅಡ್ಡಿಪಡಿಸಿದವರಿಗೆ ಸಮಾಜದಲ್ಲಿ ಸ್ಥಾನವಿಲ್ಲ ಎಂದು ಹೇಳಿದರು.

**ಕಾನೂನು ಪಾಲನೆಯ ಮಹತ್ವವನ್ನು ಒತ್ತಿಹೇಳಿದ ಮುಖ್ಯಮಂತ್ರಿ:** ಈ ದೇಶದ ಕಾನೂನಿನ ಪ್ರಕಾರ ಬದುಕಿ. ಕಾನೂನು ಪಾಲಿಸಿದರೆ ಲಾಭ, ಉಲ್ಲಂಘಿಸಿದರೆ ಶಿಕ್ಷೆ ಖಚಿತ. ಕಾನೂನು ಮುರಿದು ಸ್ವರ್ಗ ಸಿಗುತ್ತದೆ ಎಂದು ಕನಸು ಕಾಣುವುದು ಭ್ರಮೆ ಎಂದು ಎಚ್ಚರಿಸಿದರು. ರಾಮ ಮಂದಿರ ಚಳವಳಿಯನ್ನು ಭಾರತದ ಸಂಸ್ಕೃತಿ ಮತ್ತು ಸನಾತನ ಪರಂಪರೆಯೊಂದಿಗೆ ಸಂಪರ್ಕಿಸಿದ ಅವರು, ಕಳೆದ ನವೆಂಬರ್ 25ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆಗೆ ಭೇಟಿ ನೀಡಿ ರಾಮ ಮಂದಿರದಲ್ಲಿ ಕೇಸರಿ ಧ್ವಜಾರೋಹಣ ಮಾಡಿದ್ದನ್ನು ನೆನಪಿಸಿದರು. ಕೇಸರಿ ಧ್ವಜವು ಭಾರತದ ಹೆಮ್ಮೆ ಮತ್ತು ವೈಭವಯುತ ಪರಂಪರೆಯ ಪ್ರತೀಕವಾಗಿ ಸದಾ ಹಾರುತ್ತದೆ ಏಳು ತಲೆಮಾರುಗಳು ಶಿಕ್ಷೆಯನ್ನು ನೆನಪಿಸಿಕೊಳ್ಳುವಂತಾಗುತ್ತದೆ' ಎಂದರು.

# ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚ್ಛೇದನ

**ಥಾಣೆ:** ಥಾಣೆ ನ್ಯಾಯಾಲಯವು ಕೆನಡಾ ಮೂಲದ ದಂಪತಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸುವ ಮೂಲಕ ಪರಸ್ಪರ ಒಪ್ಪಿಗೆಯ ಮೂಲಕ ವಿಚ್ಛೇದನ ಮಂಜೂರು ಮಾಡಿದೆ. ದಂಪತಿ ಸ್ವಯಂಪ್ರೇರಣೆಯಿಂದ ಅರ್ಜಿಯನ್ನು ಸಲ್ಲಿಸಿದ್ದರು ಮತ್ತು ಮದುವೆಯನ್ನು ವಿಸರ್ಜಿಸುವುದು ನ್ಯಾಯಯುತ ಮತ್ತು ಸೂಕ್ತ ಎಂದು ಜಿಲ್ಲಾ ನ್ಯಾಯಾಧೀಶ ಆರ್.ಎಸ್ ಭಕರೆ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಪರಿಣಾಮವಾಗಿ, ವಿಚ್ಛೇದನದ ತೀರ್ಪಿನ ಮೂಲಕ ವಿವಾಹವನ್ನು ವಿಸರ್ಜಿಸಲಾಯಿತು, 7 ತಿಂಗಳಿಗಿಂತ ಹೆಚ್ಚು ಕಾಲ ನಡೆದ ಕಾನೂನು ಪ್ರಕ್ರಿಯೆಯನ್ನು ಕೊನೆಗೊಳಿಸಲಾಯಿತು. ಒಂಟಾರಿಯೊದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ 31 ವರ್ಷದ ಸೇವಾ ವೃತ್ತಿಪರ ಮತ್ತು 24 ವರ್ಷದ ಮಹಿಳೆಯಾಗಿರುವ ಅರ್ಜಿದಾರರು ಮಾರ್ಚ್ 9, 2022ರಂದು ಮಹಾರಾಷ್ಟ್ರದ ಥಾಣೆ ನಗರದ ಮೀರಾ ರಸ್ತೆ ಪ್ರದೇಶದಲ್ಲಿ ವಿವಾಹವಾಗಿದ್ದರು.

ಭಿನ್ನಾಭಿಪ್ರಾಯಗಳ ನಂತರ, ಅವರು ಡಿಸೆಂಬರ್ 10, 2023 ರಿಂದ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದರು. ವಿಚ್ಛೇದನಕ್ಕಾಗಿ ಅರ್ಜಿಯನ್ನು ಜೂನ್ 18, 2025 ರಂದು ವಿಶೇಷ ವಿವಾಹ ಕಾಯ್ದೆಯಡಿಯಲ್ಲಿ ಸಲ್ಲಿಸಲಾಯಿತು. ಭಾರತದ ಹೊರಗೆ ಅವರ ಪ್ರಸ್ತುತ ನಿವಾಸವನ್ನು ನೀಡಿದರೆ, ವಿಚಾರಣೆಯನ್ನು ಪವರ್ ಆಫ್ ಅಟಾರ್ನಿ ಮೂಲಕ ಪ್ರಾರಂಭಿಸಲಾಯಿತು. ಆರು 6 ಕಡ್ಡಾಯ ಕಾಯುವಿಕೆ ಅವಧಿಯ ನಂತರ




ದಂಪತಿಗಳು ಬೇರೆಯಾಗುವ ನಿರ್ಧಾರದಲ್ಲಿ ದೃಢವಾಗಿ ಉಳಿದರು ಮತ್ತು ನಿನ್ನೆ ನ್ಯಾಯಾಲಯದ ಮುಂದೆ ವಾಸ್ತವಿಕವಾಗಿ ಹಾಜರಾದರು ಮತ್ತು ತಮ್ಮ ನಿಲುವನ್ನು ದೃಢಪಡಿಸಿದರು.

ನ್ಯಾಯಾಧೀಶ ಭಕರೆ, ಅಫಿಡವಿಟ್‌ಗಳು ಮತ್ತು ವರ್ಚುವಲ್ ಸಾಕ್ಷ್ಯದ ಮೂಲಕ ಒದಗಿಸಲಾದ ಪುರಾವೆಗಳನ್ನು ಪರಿಶೀಲಿಸಿದ ನಂತರ, ಅವರಿಗೆ ವಿಚ್ಛೇದನವನ್ನು ನೀಡಿದರು. ತರಬೇತಿ ಪಡೆದ ಮಧ್ಯವರ್ತಿಯಿಂದ ಮಧ್ಯಸ್ಥಿಕೆ ವಹಿಸಿದ್ದರೂ ಅರ್ಜಿದಾರರು ಪರಸ್ಪರ ಸಹಬಾಳ್ವೆ ನಡೆಸಲು ಆಸಕ್ತಿ ಹೊಂದಿಲ್ಲ. ಅರ್ಜಿದಾರರು ಜೀವನಾಂಶ, ಪರಸ್ಪರರ ಹಿಂದಿನ, ವರ್ತಮಾನ ಮತ್ತು ಭವಿಷ್ಯದ ಜೀವನಾಂಶಕ್ಕೆ ಸಂಬಂಧಿಸಿದ ವಿವಾದಗಳನ್ನು ಪರಸ್ಪರ ಪರಿಹರಿಸಿಕೊಂಡಿದ್ದಾರೆ. ಅರ್ಜಿದಾರರ ನಡುವಿನ ಎಲ್ಲಾ ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ನ್ಯಾಯಾಲಯ ಹೇಳಿದೆ.

# ಫೆ.28ರೊಳಗೆ ಪಶ್ಚಿಮಬಂಗಾಳ ಮತದಾರರ ಪಟ್ಟಿ ಪ್ರಕಟ : ಸಿಇಒ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಅಂತಿಮ ಮತದಾರರ ಪಟ್ಟಿಯನ್ನು ಫೆ.28ರೊಳಗೆ ಬಿಡುಗಡೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಅಗರ್ವಾಲ್ ತಿಳಿಸಿದ್ದಾರೆ. ಸುಪ್ರೀಂ ಕೋರ್ಟ್ ಮತದರರ ವಿಶೇಷ ಪರಿಷ್ಕರಣೆಗೆ ಆದೇಶಿಸಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ ,ಇದೇ ವೇಳೆ ಅಧಿಕಾರಿ , ಸಿಬ್ಬಂದಿಗೆ ನಿಗದಿತ ಕೆಲಸ ಶುರು ಮಾಡುವಂತೆ ತಿಳಿಸಿದೆ. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯ ಸಮಯದಲ್ಲಿ ಬಾಧಿತ ವ್ಯಕ್ತಿಗಳು ಸಲ್ಲಿಸಿದ ದಾಖಲೆಗಳ ಪರಿಶೀಲನೆಗೆ ಫೆ.14 ರ ನಂತರ ಒಂದು ವಾರದವರೆಗೆ



ಪ್ರಕ್ರಿಯೆ ನಡೆಯಲಿದ್ದು ಇದರಿಂದ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ ಎಂದು ಸಿಇಒ ತಿಳಿಸಿದ್ದಾರೆ. ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್ ಒಗಳು) ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಈ ಪ್ರಕ್ರಿಯೆಯು ಸಹಾಯ ಮಾಡುತ್ತದೆ.ಫೆಬ್ರವರಿ 21 ರ ಮೊದಲು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲು ತಿಳಿಸಲಾಗಿತ್ತು ಆದರೆ ಫೆಬ್ರವರಿ 28 ರೊಳಗೆ ನಾವು ಅದನ್ನು ಪ್ರಕಟಿಸಲು ಪ್ರಯತ್ನಿಸುತ್ತೇವೆ ಎಂದು ಅಗರ್ವಾಲ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಪರಿಷ್ಕರಣಾ ಪ್ರಕ್ರಿಯೆಯ ಕುರಿತು ಮಾಹಿತಿ ನೀಡಿದ ಅವರು ಸುಮಾರು 1.39 ಕೋಟಿ ಪ್ರಕರಣಗಳಲ್ಲಿ ವಿಚಾರಣೆಗಳು ಪೂರ್ಣಗೊಂಡಿವೆ ಮತ್ತು ಸುಮಾರು 1.06 ಕೋಟಿ ಪ್ರಕರಣಗಳಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಲಾಗಿದೆ ಎಂದು ಹೇಳಿದರು.

# ಹಗಲಲ್ಲಿ ಟೆಕ್ಕಿ, ರಾತ್ರಿ ಠಕ್ಕ : ಖತರ್ನಾಕ್ ಸಾಫ್ಟ್‌ವೇರ್ ಇಂಜಿನಿಯರ್ ಅರೆಸ್ಟ್

**ವಿಶಾಖಪಟ್ಟಣಂ:** ಬೆಳಿಗ್ಗೆ ಠಾಕುರೀಕಾಗಿ ಕೆಲಸ ಮಾಡಿ ರಾತ್ರಿ ವೇಳೆ ಮನೆಗಳಲ್ಲಿ ನುಗ್ಗಿ ಕಳತನ ಮಾಡುತ್ತಿದ್ದ ಹೈದರಾಬಾದ್ ಮೂಲದ ಸಾಫ್ಟ್‌ವೇರ್ ಇಂಜಿನಿಯರ್‌ನನ್ನು ಇಲ್ಲಿನ ಪೊಲೀಸರು ಬಂಧಿಸಿದ್ದಾರೆ.ಕಾಕಿನಾಡದ ಅಚ್ಚಿ ಮಹೇಶ್ ರೆಡ್ಡಿ ಅಲಿಯಾಸ್ ಸನ್ನಿ ಬಂಧಿತ ಆರೋಪಿ. ಈತ ರಾತ್ರಿ ವೇಳೆ ಸುಮಾರು 26 ಮನೆ ಕಳ್ಳತನಗಳಲ್ಲಿ ಭಾಗಿಯಾಗಿದ್ದು , 15 ಲಕ್ಷ ರೂ.ಗೂ ಹೆಚ್ಚು ಮೌಲ್ಯದ ಚಿನ್ನ, ಬೆಳ್ಳಿ ಮತ್ತು ಇತರ ಕದ್ದ ವಶಪಡಿಸಿಕೊಂಡಿದ್ದೇವೆ ಎಂದು ವಿಜಾಗ್ ಉಪ ಪೊಲೀಸ್ ಆಯುಕ್ತರಾದ ಕೆ. ಲತಾ ಮಾಧುರಿ ತಿಳಿಸಿದ್ದಾರೆ. ತಾಂತ್ರಿಕ ಪುರಾವೆಗಳು ಮತ್ತು ಸಿಸಿಟಿವಿ ವಿಶ್ಲೇಷಣೆಯ ಆಧಾರದ ಮೇಲೆ, ಪೊಲೀಸರು ಗಾಜುವಾಕದ ಆರ್ಚ್ ರಸ್ತೆಯ ಬಳಿ ಆರೋಪಿಯನ್ನು ಬಂಧಿಸಿ, 699 ಗ್ರಾಂ ಚಿನ್ನ, 3.8 ಕೆಜಿ ಬೆಳ್ಳಿ, ಕದ್ದ ಹಣದಿಂದ ಖರೀದಿಸಿದ ಬಿಎಂಡಬ್ಲ್ಯು ಕಾರು ಮತ್ತು ಮನೆ ದರೋಡೆಗೆ ಬಳಸುವ ಉಪಕರಣಗಳನ್ನು ವಶಪಡಿಸಿಕೊಂಡರು. ಆರೋಪಿಯು ಅಪರಾಧ ಸ್ಥಳದಲ್ಲಿ ಬೆರಳಚ್ಚು ಅಥವಾ ಯಾವುದೇ ಇತರ ಪುರಾವೆಗಳನ್ನು ಬಿಡದಂತೆ ಜಾಣತನದಿಂದ ಕಳತನ ಮಾಡಿದ್ದ ಎಂದು ಮಾಧುರಿ ಹೇಳಿದರು.

ಆರೋಪಿ ಹಗಲಿನ ವೇಳೆಯಲ್ಲಿ ತಪಾಸಣೆ ನಡೆಸಿ,ರಾತ್ರಿಯ ಸಮಯದಲ್ಲಿ ಮನೆಗೆ ನುಗ್ಗುತ್ತಿದ್ದ ಎಂದು ಶಂಕಿಸಲಾಗಿದೆ ಆದರೆ ಅವನು ಇಲ್ಲಿಯವರೆಗೆ ಅದನ್ನು ಒಪ್ಪಿಕೊಂಡಿಲ್ಲ.ಅಪರಾಧಗಳಿಗೆ ಬಳಸಲಾದ ದ್ವಿಚಕ್ರ ವಾಹನವು ಮಹೇಶ್ ಎಂಬ ವ್ಯಕ್ತಿಗೆ ಸೇರಿದ್ದು ಎಂದು ಪೊಲೀಸರಿಗೆ ಗೊತ್ತಾಗಿದೆ. ಕಳೆದ ಅ.14 ರಂದು ಗಾಜುವಾಕದ ನಿವಾಸಿಯೊಬ್ಬರು ತಮ್ಮ ಕುಟುಂಬ ಸಮೇತ ಹೊರಗೆ ಇದ್ದಾಗ ಕಳತನ ನಡೆದಿತ್ತು ಈ ಬಗ್ಗೆ ಗಾಜುವಾಕ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದರು.




ಗಾಜುವಾಕ, ಅರಿಲೋವಾ, ಮಲ್ಕಪುರಂ, ಪೆಂದುರ್ತಿ ಮತ್ತು ದುವ್ವಾಡ ಪ್ರದೇಶಗಳಲ್ಲಿ ಇದೇ ತರ ಕಳ್ಳತನಗಳು ವರದಿಯಾಗಿವೆ ಎಂದು ಮಾಧುರಿ ಹೇಳಿದರು, ವಿಶಾಖಪಟ್ಟಣ ನಗರದೊಳಗಿನ 26 ಪ್ರಕರಣಗಳಿಗೆ ದಾಖಲಾಗಿದೆ. ಈ ಪ್ರಕರಣಗಳಲ್ಲಿ,1ಕೆಜಿಗೂ ಹೆಚ್ಚು ಚಿನ್ನ, ಸುಮಾರು 6,333 ಗ್ರಾಂ ಬೆಳ್ಳಿ ಮತ್ತು 40,500 ರೂ. ಮೌಲ್ಯದ ನಗದು ಕಳವು ಮಾಡಲಾಗಿದ್ದು ಎಂದು ಅಂದಾಜಿಸಲಾಗಿದೆ.

# ಕೀನ್ಯಾದಲ್ಲಿ ಬರ, ವಿಶ್ವಸಂಸ್ಥೆ ಕಳವಳ

**ಕಂಪಾಲ :** ಕೀನ್ಯಾದಲ್ಲಿ ಬರ ಪರಿಸ್ಥಿತಿ ತೀವ್ರವಾಗಿದ್ದು, ಇಪ್ಪತ್ತು ಲಕ್ಷಕ್ಕೂ ಅಧಿಕ ಮಂದಿ ಕಂಗಾಲಾಗಿದ್ದಾರೆ. ಈಶಾನ್ಯ ಭಾಗದ ಪಶು ಸಾಕಣೆದಾರರು ಭಾರಿ ತೊಂದರೆಗೊಳಗಾಗಿದ್ದಾರೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಇತ್ತೀಚಿನ ದಿನಗಳಲ್ಲಿ ಸೋಮಾಲಿಯಾ ಗಡಿ ಭಾಗದ ಬರ ಪ್ರದೇಶದಲ್ಲಿ ಮೇವು ನೀರಿಲ್ಲದೇ ಜಾನುವಾರುಗಳು ಮೃತಪಟ್ಟಿರುವ ದೃಶ್ಯಗಳ ಚಿತ್ರಗಳು, ಹವಾಮಾನ ವೈಪರೀತ್ಯದಿಂದ ಇಲ್ಲಿ ಉಂಟಾಗಿರುವ ಸನ್ನಿವೇಶದ ಚಿತ್ರಣ ನೀಡುತ್ತಿದ್ದು ಆಘಾತಕಾರಿಯಾಗಿವೆ. ಇತ್ತೀಚಿನ ವರ್ಷಗಳಲ್ಲಿ ಮಳೆಯಾಗುವುದು ತೀವ್ರ ಕಡಿಮೆಯಾಗಿದ್ದು ಕೆಲವು ಸಮುದಾಯಗಳಿಗೆ ಭಾರಿ ಬರಪರಿಸ್ಥಿತಿ ಎದುರಿಸುವಂತಾಗಿದೆ. ಸಾಧಾರಣವಾಗಿ ಪ್ರಾಣಿಗಳೇ ಮೊದಲು ಪ್ರಾಣಬಿಡುತ್ತಿವೆ.

ಜಾನುವಾರುಗಳ ಮರಣವು 2020 ರಿಂದ 2023ರ ನಡುವೆ ಈ ಪ್ರದೇಶದಲ್ಲಿ ಮಿಲಿಯಾಂತರ ಪ್ರಾಣಿಗಳು ಸಾವಿಗೀಡಾಗಿದ್ದನ್ನು ಪ್ರತಿಧ್ವನಿಸುತ್ತವೆ. ಈ ಪ್ರದೇಶವು ಕೀನ್ಯಾದಿಂದ ಇಥಿಯೋಪಿಯಾ ಮತ್ತು ಸೋಮಾಲಿಯಾದ ಕೆಲವು ಭಾಗಗಳ ತನಕ ವಿಸ್ತರಿಸುತ್ತದೆ. ಆ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಸಮುದಾಯ ನೀಡಿದ ಸಕಾಲಿಕ ನೆರವಿನಿಂದಾಗಿ ಸೋಮಾಲಿಯಾ ಸಂಭಾವ್ಯ ಬರ ಸಂಕಷ್ಟದಿಂದ ಪಾರಾಗಿತ್ತು.

ಆಫ್ರಿಕಾದ ಕೊಂಬು ಎಂದು ಕರೆಯಲಾಗುವ, ಹಿಂದೂ ಮಹಾಸಾಗರದೊಂದಿಗೆ ಸಂಪರ್ಕಿಸುವ ಈ ಭಾಗದಲ್ಲಿ ಸತತ ನಾಲ್ಕು ಮಳೆಯ ಋತುಗಳು ವಿಫಲವಾಗಿವೆ. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಬೀಳಬೇಕಾಗಿದ್ದ ಮಳೆ ಬೀಳದೆ ಈ ಅವಧಿಯು ಇದುವರೆಗಿನ ಅತ್ಯಂತ ಒಣ ಹವಾಮಾನ ದಾಖಲಿಸಿದೆ ಎಂದು ವಿಶ್ವಸಂಸ್ಥೆಯ ಆರೋಗ್ಯ ಸಂಸ್ಥೆ ತಿಳಿಸಿದೆ.



**ಆಹಾರ ಕೊರತೆ : ಮಕ್ಕಳು ಕಂಗಾಲು**

ಮಳೆ ಕಡಿಮೆಯಾಗುತ್ತಿರುವುದರಿಂದಾಗಿ ಪೂರ್ವ ಕೀನ್ಯಾ 1981ರಿಂದೀಚೆಗಿನ ಅತ್ಯಂತ ಶುಷ್ಕ ವಾತಾವರಣ ಎದುರಿಸುವಂತಾಗಿದೆ.

ರಾಷ್ಟ್ರೀಯ ಬರ ನಿರ್ವಹಣಾ ಪ್ರಾಧಿಕಾರದ ಪ್ರಕಾರ ಕೀನ್ಯಾದ10 ಕೌಂಟಿಗಳು ಬರಪರಿಸ್ಥಿತಿಗೀಡಾಗಿವೆ. ಸೋಮಾಲಿಯಾ ಗಡಿಯಲ್ಲಿರುವ ಈಶಾನ್ಯ ಕೌಂಟಿ ಮಂಡೇರಾ ಕಟ್ಟೆಚ್ಚರ ಘೋಷಿಸುವ ಮಟ್ಟ ತಲುಪಿದೆ. ನೀರಿನ ಸೆಲೆಗಳು ಬತ್ತಿ ಹೋಗಿದ್ದು, ನೀರಿಗಾಗಿ ಹಾಹಾಕಾರ ಉಂಟಾಗಿದೆ. ಜಾನುವಾರುಗಳು ಮೇವು-ನೀರು ಇಲ್ಲದೇ ಸಾವನ್ನಪ್ಪುತ್ತಿರುವ ಸನ್ನಿವೇಶ ಘೋರವಾಗಿದೆ. ಆಹಾರ ಕೊರತೆ ತಲೆದೋರಿದ್ದು ಮಕ್ಕಳು ಕಂಗಾಲಾಗಿದ್ದಾರೆ.

ಈ ನರಳಿಕೆ ಸೋಮಾಲಿಯಾ, ತಾಂಜಾನಿಯಾ ಮತ್ತು ಉಗಾಂಡಕ್ಕೂ ಸಹ ವಿಸ್ತರಿಸಿದೆ. ಅಲ್ಲಿಯೂ ಇದೇ ರೀತಿಯ ಹವಾಮಾನ ವೈಪರೀತ್ಯ ಉಂಟಾಗಿದ್ದು,ನೀರಿಗಾಗಿ ಜನ-ಜಾನುವಾರು ಬಾಯಾರಿಪರಿತಪಿಸುವಂತಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

# ಯುಎಸ್ ವಾಣಿಜ್ಯ ಹಡಗುಗಳೇ ಇರಾನ್ ಜಲಪ್ರದೇಶದಿಂದ ದೂರವಿರಿ

## ಇರಾನ್‌ನಲ್ಲಿರುವ ಎಲ್ಲಾ ಅಮೆರಿಕನ್ನರು ಕೂಡಲೇ ದೇಶ ತೊರೆದು ತಾಯ್ನಾಡಿಗೆ ಮರಳಬೇಕು:ಯುಎಸ್

**ವಾಷಿಂಗ್ಟನ್:** ಅಮೆರಿಕಾ-ಇರಾನ್ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆ ಬೆನ್ನಲ್ಲೇ, ಇತ್ತ ಒಮಾನ್ ನಲ್ಲಿ ಉಭಯದೇಶಗಳ ನಡುವೆ ಮಾತುಕತೆಗೆಗಳು ವಿಫಲವಾಗಿದೆ ಎಂಬ ವರದಿಗಳು ಸಹ ಕೇಳಿ ಬರುತ್ತಿದೆ. ಈ ನಡುವೆ ಇರಾನ್ ಕರಾವಳಿಯತ್ತ ಈಗಾಗಲೇ ಯುಎಸ್ ನ ಯುದ್ಧನೌಕೆಗಳು ಸಾಗುತ್ತಿದ್ದು, ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡ ಆವರಿಸಿದೆ. ಈ ಬೆನ್ನಲ್ಲೇ, ಸದ್ಯ ಅಮೆರಿಕಾ ತನ್ನ ವಾಣಿಜ್ಯ ನೌಕೆಗಳಿಗೆ ಇರಾನ್ ಜಲ ಪ್ರದೇಶದಿಂದ ದೂರವಿರುವಂತೆ ಸಲಹೆಯನ್ನು ನೀಡಿ ಮಹತ್ವದ ಆದೇಶವನ್ನು ಹೊರಡಿಸಿದೆ.

ಇನ್ನೇನೂ, ಅಮೆರಿಕಾ ಈಗ ಇರಾನ್ ಮೇಲೆ ದಾಳಿ ಮಾಡುತ್ತೆ, ಆಗ ದಾಳಿ ಮಾಡುತ್ತೆ. ಒಂದು ವೇಳೆ ಇದು ಸಂಭವಿಸಿದ್ದೇ ಆದಲ್ಲಿ 3ನೇ ಮಹಾಯುದ್ಧ ಪಕ್ಕಾ ಎಂಬ ಆತಂಕದಲ್ಲಿ ಜಾಗತಿಕ ಶಕ್ತಿಗಳು ಅದರಲ್ಲೂ ಪ್ರಮುಖವಾಗಿ ಆ ಪ್ರದೇಶದಲ್ಲಿರುವ ಗಲ್ಫ್ ದೇಶಗಳು ಇದ್ದಾವೆ. ಅದರಂತೇ ಅಮೆರಿಕಾ ಸಹ ಆಗಿಂದಾಗ್ಗೆ ಮಿಲಿಟರಿ ದಾಳಿ ಎಂದೆಲ್ಲಾ ಬೆದರಿಕೆಯನ್ನೂ ಒಡ್ಡುತ್ತಿದ್ದು, ಸದ್ಯ ವಾಣಿಜ್ಯ ಹಡುಗುಗಳಿಗೆ ಇರಾನ್ ನಿಂದ ದೂರ ಉಳಿಯುವಂತೆ ಹಾಗೂ ಇರಾನಿ ಪಡೆಗಳು ಹಡಗನ್ನು ಹತ್ತದಂತೆ ಜಾಗ್ರತೆ ವಹಿಸುವಂತೆ ಆದೇಶ ನೀಡಿದೆ.

- ಇರಾನ್ ಜಲಪ್ರದೇಶದಿಂದ ಆದಷ್ಟು ದೂರವೇ ಇರಿ ಎಂದು ಅಮೆರಿಕಾದ ವಾಣಿಜ್ಯ ಹಡುಗುಗಳಿಗೆ ಯುಎಸ್ ಸಲಹೆ
- ಹೊರ್ಮುಜ್ ಜಲಸಂಧಿಯಲ್ಲಿ ಸಾಗುವಾಗ ಒಮಾನ್‌ನ ಪ್ರಾದೇಶಿಕ ಸಮುದ್ರದ ಹತ್ತಿರ ಸಾಗಿ ಎಂದಿದ್ದೇಕೆ ಅಮೆರಿಕಾ?
- ಅಂದು ಅಮೆರಿಕಾದ ಜನತೆ..ಇಂದು ಅಮೆರಿಕನ್ ವಾಣಿಜ್ಯ ಹಡಗುಗಳು, ಯುದ್ಧದಿಂದ ಅಮೆರಿಕನ್ನರಿಗೆ ನಷ್ಟವಾಗದಂತೆ ಸಿದ್ಧತೆ ನಡೆಸುತ್ತಿದ್ಯಾ ಯುಎಸ್?



**ಶೀಘ್ರವೇ ಇರಾನ್ ಮೇಲೆ ದಾಳಿ**

**ಇರಾನ್ ಜಲಪ್ರದೇಶದಿಂದ ದೂರವಿರಿ ಎಂದು ಯುಎಸ್ ವಾಣಿಜ್ಯ ಹಡಗುಗಳಿಗೆ ಸಲಹೆ:** ಇರಾನ್ ಕರಾವಳಿಯತ್ತ ಸಾಗುತ್ತಿರುವ ಯುಎಸ್ ನ ವಾಣಿಜ್ಯ ಹಡಿಗಿನ ಕ್ಯಾಪ್ಟನ್ ಗಳಿಗೆ ಅಮೆರಿಕದ ಕಡಲ ಆಡಳಿತವು ಆದೇಶವೊಂದನ್ನು ಹೊರಡಿಸಿದೆ. ಈ ಆದೇಶದಲ್ಲಿ ಇರಾನಿನ ಪಡೆಗಳಿಗೆ ತಮ್ಮ ಹಡಗುಗಳನ್ನು ಹತ್ತಲು ಅನುಮತಿ ನೀಡಬಾರದು ಎಂದು ಸೂಚಿಸಿದ್ದು, ಇರಾನಿನ ಪಡೆಗಳು ಅಮೆರಿಕ ಧ್ವಜ ಹೊತ್ತ ವಾಣಿಜ್ಯ ಹಡಗನ್ನು ಹತ್ತಿದರೆ,ಸಿಬ್ಬಂದಿ ಬಲವಂತವಾಗಿ ಬೋರ್ಡಿಂಗ್ ತಂಡವನ್ನು ವಿರೋಧಿಸಬಾರದು. ಬಲವಂತದ ಪ್ರತಿರೋಧದಿಂದ ದೂರವಿರುವುದು ಆ ಬೋರ್ಡಿಂಗ್‌ಗೆ ಒಪ್ಪಿಗೆ ಅಥವಾ ಒಪ್ಪಿಗೆಯನ್ನು ಸೂಚಿಸುವುದಿಲ್ಲ ಎಂದು ತಿಳಿಸಿದೆ.

ಮುಂದುವರೆದು ಈ ಪ್ರದೇಶದಲ್ಲಿ ಸಾಗುವ ಅಮೆರಿಕಾದ ಧ್ವಜವಿರುವ ವಾಣಿಜ್ಯ ಹಡಗುಗಳು ಸಂಚರಣೆಯ ಸುರಕ್ಷತೆಗೆ ಧಕ್ಕೆಯಾಗದಂತೆ ಇರಾನ್‌ನ ಪ್ರಾದೇಶಿಕ ಸಮುದ್ರದಿಂದ ಸಾಧ್ಯವಾದಷ್ಟು ದೂರವಿರಲು ಶಿಫಾರಸು ಮಾಡಲಾಗಿದೆ.

### ಅಮೆರಿಕನ್ನರಿಗೆ ಇರಾನ್ ತೊರೆಯುವಂತೆ ಆದೇಶ, ದಾಳಿಗೆ ಯುಎಸ್ ಸಿದ್ಧತೆ

ಒಮಾನ್‌ನಲ್ಲಿ ಮಾತುಕತೆಗಳ ವಿಫಲ ಬೆನ್ನಲ್ಲೇ, ಯುದ್ಧಕ್ಕೆ ಕಾಲುಕೆರೆದು ನಿಂತಿರುವ ಯುಎಸ್ ಯಾವ ಕ್ಷಣದಲ್ಲಿ ಬೇಕಾದರೂ ಇರಾನ್ ಮೇಲೆ ದಂಡೆತ್ತಿ ಹೋಗಬಹುದು ಎಂಬ ಆತಂಕವನ್ನು ಹಿಮ್ಮಡಿಗೊಳಿಸುವಂತೆ ಮಾಡಿದೆ. ಅಲ್ಲದೆ, ಇದಕ್ಕೂ ಕೆಲ ದಿನಗಳ ಮೊದಲ ಇರಾನ್‌ನಲ್ಲಿರುವ ಎಲ್ಲಾ ಅಮೆರಿಕನ್ನರು ಕೂಡಲೇ ದೇಶ ತೊರೆದು ತಾಯ್ನಾಡಿಗೆ ಮರಳಬೇಕು ಎಂದು ಸಹ ಆದೇಶ ಹೊರಡಿಸಿತ್ತು.

ಅಲ್ಲದೆ, ಹೊರ್ಮುಜ್ ಜಲಸಂಧಿಯಲ್ಲಿ ಪೂರ್ವಕ್ಕೆ ಸಾಗಿಸುವಾಗ, ಹಡಗುಗಳು ಒಮಾನ್‌ನ ಪ್ರಾದೇಶಿಕ ಸಮುದ್ರದ ಹತ್ತಿರ ಸಾಗಲು ಶಿಫಾರಸು ಮಾಡಲಾಗಿದೆ ಎಂದು ಸಲಹೆ ನೀಡಿದೆ. ಇದು ಸದ್ಯ ಇರಾನ್ ಅಮೆರಿಕಾ ನಡುವೆ ಯುದ್ಧದ ವಾತವರಣವಿದ್ದು, ಇದಕ್ಕೆ ಪುಷ್ಠಿ ನೀಡುವಂತೆ ಯುಎಸ್ ಬೆಂಬಲಕ್ಕೆ ಇಸ್ರೇಲ್ ನಿಂತಿದ್ದು, ಇರಾನ್ ತನ್ನ ಬ್ಯಾಲಿಸ್ಟಿಕ್ ಕ್ಷಿಪಣಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಕೆಂಪು ರೇಖೆಯನ್ನು ದಾಟಿದರೆ ಇರಾನ್ ವಿರುದ್ಧ ಏಕಪಕ್ಷೀಯ ಮಿಲಿಟರಿ ದಾಳಿ ನಡೆಸಲು ಸಿದ್ಧವಾಗಿದೆ ಎಂದು ಹೇಳಿಕೊಂಡಿದೆ. ಇವೆಲ್ಲಾ ಬೆಳವಣಿಗೆಗಳು ಈ ಪ್ರದೇಶದಲ್ಲಿ ಯುದ್ಧದ ಆತಂಕ ಹೆಚ್ಚಳ ಮಾಡಿದ್ದು, ಮುಂದೇನಾಗಲಿದೆ ಎಂದು ಕಾಲವೇ ಉತ್ತರಿಸಬೇಕಿದೆ.

# ಮಿನಿ ನ್ಯೂಸ್

## ಅತ್ತೆ ಮೇಲೆ ಅತ್ಯಾಚಾರ ನಡೆಸಿ ಹತ್ಯೆಗೈದ ಅಳಿಯ

**ಹೈದರಾಬಾದ್:** ಹೆಣ್ಣು ಕೊಟ್ಟ ಅತ್ತೆ ಕಣ್ಣು ಕೊಟ್ಟ ದೇವರು ಇದ್ದಂತೆ ಎನ್ನುತ್ತಾರೆ ಆದರೆ, ಇಲ್ಲೊಬ್ಬ ಕಾಮುಕ ಅಳಿಯ ತನ್ನ ಅತ್ತೆ ಮೇಲೆ ಅತ್ಯಾಚಾರ ನಡೆಸಿ ಆಕೆಯನ್ನು ಕೊಲೆ ಮಾಡಿದ್ದಾನೆ. 60 ವರ್ಷದ ಅತ್ತೆ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿದ ವ್ಯಕ್ತಿಯನ್ನು ನಾಗರ್ಕರ್ನೂಲ್ ಜಿಲ್ಲೆಯ ಕಲ್ವಕುರ್ತಿ ಮಂಡಲದ 40 ವರ್ಷದ ನಿವಾಸಿ ಎಂದು ಗುರುತಿಸಲಾಗಿದೆ. ಕಲ್ವಕುರ್ತಿ ಮಂಡಲದಲ್ಲಿ ವೃದ್ಧ ಮಹಿಳೆ ಮನೆಯಲ್ಲಿ ಒಬ್ಬಂಟಿಯಾಗಿದ್ದಾಗ ಈ ಘಟನೆ ನಡೆದಿದೆ.

ಕುಡಿಯುವ ಚಟ ಹೊಂದಿದ್ದ 40 ವರ್ಷದ ಆರೋಪಿ ಕಾರ್ಮಿಕ, 60 ವರ್ಷದ ತನ್ನ ಅತ್ತೆಯ ಮೇಲೆ ಅತ್ಯಾಚಾರ ಮಾಡಿ, ಮನೆಯಲ್ಲಿಯೇ ಕೊಲೆ ಮಾಡಿದ್ದಾನೆ ಎಂದು ಸಂತ್ರಸ್ತೆಯ ಮಗಳು ಮತ್ತು ಆರೋಪಿಯ ಪತ್ನಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸಾವಿಗೆ ಕಾರಣವೇನೆಂದು ತಿಳಿಯಲು ಹೆಚ್ಚಿನ ತನಿಖೆ ನಡೆಯುತ್ತಿದೆ. ಆರೋಪಿ ಕುಡಿದ ಅಮಲಿನಲ್ಲಿದ್ದಾಗ ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ದೂರಿನ ಆಧಾರದ ಮೇಲೆ, ಕಲ್ವಕುರ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಅಕ್ರಮ ಹಣ ವರ್ಗಾವಣೆ ಪ್ರಕರಣ : ಟೀನಾ ಅಂಬಾನಿಗೆ ಇಡಿ ನೋಟಿಸ್

**ನವದೆಹಲಿ:** ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗಾಗಿ ರಿಲಯನ್ಸ್ ಗ್ರೂಪ್ ಅಧ್ಯಕ್ಷ ಅನಿಲ್ ಅಂಬಾನಿ ಅವರ ಪತ್ನಿ ಟೀನಾ ಅಂಬಾನಿಗೆ ಜಾರಿ ನಿರ್ದೇಶನಾಲಯ (ಇಡಿ) ಶೀಘ್ರದಲ್ಲೇ ಹೊಸ ಸಮನ್ಸ್ ಜಾರಿ ಮಾಡಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಾಜಿ ನಟಿ ಟೀನಾ (68) ಅವರನ್ನು ಫೆಡರಲ್ ಸಂಸ್ಥೆಯು ಹೇಳಿಕೆ ನೀಡಲು ಕೇಳಿಕೊಂಡಿತ್ತು. ಆದರೆ ಅವರು ಹಾಜರಾಗಿರಲಿಲ್ಲ. ಶೀಘ್ರದಲ್ಲೇ ಅವರನ್ನು ಮತ್ತೆ ಕರೆಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನ್ಯೂಯಾರ್ಕ್‌ನ ಮ್ಯಾನ್‌ಹ್ಯಾಟನ್‌ನಲ್ಲಿ ಸಐಷಾರಾಮಿ ಕಾಂಡೊಮಿನಿಯಂ ಖರೀದಿಗೆ ಸಂಬಂಧಿಸಿದ ಹಣದ ಹಾದಿ ಕುರಿತು ಅವರನ್ನು ವಿಚಾರಣೆಗೆ ಕರೆಯಲಾಗಿದೆ ಎಂದು ತಿಳಿದುಬಂದಿದೆ. ಪ್ರಕರಣದಲ್ಲಿ ಇಡಿ ಇತ್ತೀಚೆಗೆ ಮಾಜಿ ಆರ್‌ಕಾಮ್ ಅಧ್ಯಕ್ಷ ಪುನೀತ್ ಗಾರ್ಗ್ ಅವರನ್ನು ವಿಚಾರಣೆಗೆ ಒಳಪಡಿಸಿತ್ತು. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್ (ಎಡಿಎಜಿ) ವಿರುದ್ಧದ ಬ್ಯಾಂಕ್ ವಂಚನೆ ಹಾಗೂ ಸಂಬಂಧಿತ ಹಣಕಾಸು ಅಕ್ರಮಗಳ ಹಲವು ಪ್ರಕರಣಗಳ ತನಿಖೆಗೆ ಇತ್ತೀಚೆಗೆ ಸಂಸ್ಥೆ ಎಸ್‌ಐಟಿಯನ್ನು ರಚಿಸಿದೆ.

## ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದ ಬಾಂಗ್ಲಾದೇಶ

**ಢಾಕಾ:** ಅಮೆರಿಕ ಮತ್ತು ಬಾಂಗ್ಲಾದೇಶ ಮಧ್ಯೆ ವ್ಯಾಪಾರ ಒಪ್ಪಂದ ಏರ್ಪಟ್ಟಿದೆ. ಎರಡೂ ದೇಶಗಳು ಒಪ್ಪಂದಕ್ಕೆ ಸಹಿಹಾಕಿವೆ. ಅದರ ಪ್ರಕಾರ, ಬಾಂಗ್ಲಾದೇಶಕ್ಕೆ ವಿಧಿಸುವ ಟ್ಯಾರಿಫ್ ಅನ್ನು ಅಮೆರಿಕ ಶೇ. 19ಕ್ಕೆ ಇಳಿಸಲಿದೆ. ಅಮೆರಿಕದ ಸಾಮಗ್ರಿಗಳಿಂದ ತಯಾರಾದ ಕೆಲ ಜವಳಿ ಮತ್ತು ಉಡುಪುಗಳ ಮೇಲೆ ಅಮೆರಿಕ ಟ್ಯಾರಿಫ್‌ನಿಂದ ಪೂರ್ಣ ವಿನಾಯಿತಿ ಕೊಡಲಿದೆ.

ಇದಕ್ಕೆ ಬದಲಾಗಿ, ಅಮೆರಿಕದ ಹೆಚ್ಚಿನ ಉತ್ಪನ್ನಗಳಿಗೆ ಬಾಂಗ್ಲಾದೇಶದ ಮಾರುಕಟ್ಟೆಗೆ ಮುಕ್ತ ಪ್ರವೇಶ ಸಿಗಲಿದೆ. ಸೋಯಾ ಉತ್ಪನ್ನಗಳು, ಡೈರಿ ಉತ್ಪನ್ನಗಳು, ಬೀಫ್, ಯಂತ್ರೋಪಕರಣ, ವಾಹನ, ವಾಹನ ಬಿಡಿಭಾಗಗಳು, ರಾಸಾಯನಿಕ, ಹಣ್ಣು, ವೈದ್ಯಕೀಯ ಸಾಧನ ಇತ್ಯಾದಿ ಅಮೆರಿಕದ ಕೈಗಾರಿಕಾ ಮತ್ತು ಕೃಷಿ ಉತ್ಪನ್ನಗಳಿಗೆ ಬಾಂಗ್ಲಾದೇಶ ಆದ್ಯತೆಯ ಮೇಲೆ ಅವಕಾಶ ಕಲ್ಪಿಸಲಿದೆ. ಹಾಗೆಯೇ, ಅಮೆರಿಕದ ವಾಹನ ಸುರಕ್ಷತೆ ಮತ್ತು ಆಹಾರ ಗುಣಮಟ್ಟದ ಪ್ರಮಾಣಪತ್ರ, ಮತ್ತು ಮಾನದಂಡಗಳನ್ನು ಬಾಂಗ್ಲಾದೇಶ ಸ್ವೀಕರಿಸಲಿದೆ. ಮರುತಯಾರಿತ ಸರುಕಗಳ ಮೇಲಿನ ಆಮದು ನಿರ್ಬಂಧವನ್ನು ತೆಗೆದುಹಾಕಲಿದೆ ಎಂದು ಅಮೆರಿಕದ ಶ್ವೇತಭವನ ಹೇಳಿಕೆಯಲ್ಲಿ ತಿಳಿಸಿದೆ.

## ಜಾರ್ಜಿಯಾದ ಜನನಿಬಿಡ ರಸ್ತೆಯಲ್ಲಿ ವಿಮಾನ ತುರ್ತು ಭೂಸ್ಪರ್ಶ, ಬಹು ವಾಹನಗಳಿಗೆ ಡಿಕ್ಕಿ

**ಜಾರ್ಜಿಯಾ:** ಜಾರ್ಜಿಯಾದ ಗೈನೆಸ್ ವಿಲ್ಲೆಯಲ್ಲಿ ಜನದಟ್ಟಣೆಯ ರಸ್ತೆಯಲ್ಲಿ ಸಣ್ಣ ವಿಮಾನವೊಂದನ್ನು ತುರ್ತು ಭೂಸ್ಪರ್ಶ ಮಾಡಲಾಗಿದ್ದು, ಇದರ ಪರಿಣಾಮ ವಿಮಾನವು ಹಲವು ವಾಹನಗಳಿಗೆ ಡಿಕ್ಕಿ ಹೊಡೆದಿರುವ ವಿಡಿಯೋ ವೈರಲ್ ಆಗಿದೆ. ಒಂದೇ ಇಂಜಿನ್ ಹೊಂದಿರುವ ವಿಮಾನವು ಜನನಿಬಿಡ ರಸ್ತೆಯಲ್ಲಿ ಅಪಘಾತಕ್ಕೀಡಾಗಿ ಮೂರು ವಾಹನಗಳಿಗೆ ಡಿಕ್ಕಿ ಹೊಡೆದಿರುವುದನ್ನು ವಿಡಿಯೋದಲ್ಲಿ ಕಾಣಬಹುದು.

ವಿಮಾನವು ಟೇಕ್ ಆಫ್ ಆದ ಸ್ವಲ್ಪ ಸಮಯದ ಬಳಿಕ ಇಂಜಿನ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡಿತ್ತು. ನಂತರ ತುರ್ತು ಭೂಸ್ಪರ್ಶ ಮಾಡಲಾಯಿತು. ವಿಮಾನವು ನಿಲ್ದಾಣಕ್ಕೆ ಹಿಂದಿರುಗಲು ಸಾಕಷ್ಟು ಶಕ್ತಿಯನ್ನು ಹೊಂದಿರಲಿಲ್ಲ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ. ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಯಾರಿಗೂ ಗಂಭೀರ ಗಾಯಗಳಾಗಿಲ್ಲ ಎನ್ನುವ ಮಾಹಿತಿ ಲಭ್ಯವಾಗಿದೆ. ಫೆಡರಲ್ ವಿಮಾನಯಾನ ಆಡಳಿತ ಮತ್ತು ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯು ಘಟನೆಯ ಬಗ್ಗೆ ತನಿಖೆ ನಡೆಸುತ್ತಿವೆ.

## ಬಾಂಗ್ಲಾದೇಶದಲ್ಲಿ ಮತ್ತೊಬ್ಬ ಹಿಂದೂ ಉದ್ಯಮಿಯ ಬರ್ಬರ ಹತ್ಯೆ

**ಢಾಕಾ:** ಬಾಂಗ್ಲಾದೇಶದಲ್ಲಿ ಮತ್ತೊಬ್ಬ ಹಿಂದೂ ವ್ಯಕ್ತಿಯ ಹತ್ಯೆಯಾಗಿದೆ. ದೇಶದ ರಾಷ್ಟ್ರೀಯ ಸಂಸತ್ತಿನ ಚುನಾವಣೆಗೆ ಮತದಾನಕ್ಕೆ ಇನ್ನೆರಡು ದಿನ ಬಾಕಿ ಇರುವಾಗಲೇ ಅಪರಿಚಿತ ದಾಳಿಕೋರರು ಹಿಂದೂ ಉದ್ಯಮಿಯೊಬ್ಬರನ್ನು ಕ್ರೂರವಾಗಿ ಹತ್ಯೆ ಮಾಡಿದ್ದಾರೆ. ಬಾಂಗ್ಲಾದೇಶದ ಮೈಮೆನ್ಸಿಂಗ್ ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ. 62 ವರ್ಷದ ಸುಶೇನ್ ಚಂದ್ರ ಸರ್ಕಾರ್ ಕೊಲೆಯಾದವರು. ಇವರು ದಕ್ಷಿಣಕಂದ ಗ್ರಾಮದ ನಿವಾಸಿಯಾಗಿದ್ದು, ಅಕ್ಕಿ ವ್ಯಾಪಾರಿಯಾಗಿದ್ದರು. ಉಪ ಜಿಲ್ಲೆಯ ಬೋಗರ್ ಬಜಾರ್ ಬಳಿ ಭಾಯ್ ಭಾಯ್ ಎಂಟರ್‌ಪ್ರೈಸ್ ಅನ್ನು ಹೊಂದಿದ್ದರು. ರಾತ್ರಿ 11 ಗಂಟೆಗೆ ಮಾರುಕಟ್ಟೆ ಬಳಿ ಕೊಲೆ ನಡೆದಿದೆ. ಅಪರಿಚಿತ ದುಷ್ಕರ್ಮಿಗಳು ಸರ್ಕಾರ್ ಅವರನ್ನು ಹರಿತವಾದ ಆಯುಧದಿಂದ ಹೊಡೆದು, ಅಂಗಡಿಯೊಳಗೆ ಹಾಕಿ ಬಾಗಿಲು ಮುಚ್ಚಿದ್ದಾರೆ.

ಸರ್ಕಾರ್ ಅವರನ್ನು ಕೊಲೆ ಮಾಡಿದ ನಂತರ ಅಂಗಡಿಯಿಂದ ಲಕ್ಷಾಂತರ ರೂಪಾಯಿ ಹಣವನ್ನು ಕದ್ದಿದ್ದಾರೆ. ಕುಟುಂಬವು ಅಂಗಡಿಯೊಳಗೆ ಹುಡುಕುತ್ತಿದ್ದಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದ ಸರ್ಕಾರ್ ಮೃತದೇಹ ಪತ್ತೆಯಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಅವರನ್ನು ಮೈಮೆನ್ಸಿಂಗ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸಾಗಿಸಲಾಯಿತು. ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದರು. ಕೊಲೆಗಾರರು ನನ್ನ ತಂದೆಯನ್ನು ಕೊಂದ ನಂತರ ಅಂಗಡಿಯಿಂದ ಹಣವನ್ನು ಕದ್ದಿದ್ದಾರೆ. ಬಹಳ ವರ್ಷಗಳಿಂದ ಅಕ್ಕಿ ವ್ಯಾಪಾರ ಮಾಡಿಕೊಂಡು ಬಂದಿದ್ದೇವೆ. ಯಾರಿಗೂ ನಮ್ಮ ಮೇಲೆ ದ್ವೇಷವಿರಲಿಲ್ಲ. ನನ್ನ ತಂದೆಯನ್ನು ಕ್ರೂರವಾಗಿ ಕೊಂದ ನಂತರ ಅಪರಾಧಿಗಳು ಅಂಗಡಿಯಿಂದ ಲಕ್ಷಾಂತರ ಟಾಕಾಗಳನ್ನು ಕದ್ದಿದ್ದಾರೆ ಎಂದು ಮಗ ಆರೋಪಿಸಿದ್ದಾರೆ.



# ಮತ್ತೆ ಬರುತ್ತಿದ್ದಾನೆ ಬೆಂಗಳೂರು ರೌಡಿ 'ರಂಗ'



ಈ ಬಾರಿ ಡಬಲ್ ಮ್ಯಾಡ್‌ನೆಸ್

ಫಹಾದ್ ಫಾಸಿಲ್ ನಟಿಸಿದ್ದ 'ಆವೇಶಂ' ಸಿನಿಮಾ 2024ರಲ್ಲಿ ಬಿಡುಗಡೆ ಆಗಿತ್ತು. ಸಿನಿಮಾ ಭಾರಿ ದೊಡ್ಡ ಯಶಸ್ಸು ಗಳಿಸಿತು. ಸಿನಿಮಾದಲ್ಲಿ ಫಹಾದ್ ನಿರ್ವಹಿಸಿದ್ದ ರಂಗ ಪಾತ್ರವಂತೂ ಐಕಾನಿಕ್ ಆಗಿಬಿಟ್ಟಿದೆ. ಅಭಿಮಾನಿಗಳು ಆಗಿನಿಂದಲೂ ಸಿನಿಮಾದ ಸೀಕ್ವೆಲ್‌ಗೆ ಬೇಡಿಕೆ ಇಡುತ್ತಲೇ ಇದ್ದರು.

ಇದೀಗ ಸಿನಿಮಾದ ಸೀಕ್ವೆಲ್ ಘೋಷಣೆ ಆಗಿದೆ. ಫಹಾದ್ ಫಾಸಿಲ್‌ಗೆ ದೇಶದಾದ್ಯಂತ ಅಭಿಮಾನಿಗಳಿದ್ದಾರೆ. ಯಾವ ಪಾತ್ರದಲ್ಲಿ ನಟಿಸಿದರೂ ಆ ಪಾತ್ರದ ಮೇಲೆ ತಮ್ಮ ಛಾಪು ಉಳಿಸುತ್ತಾರೆ, ಫಹಾದ್ ಹೊರತಾಗಿ ಇನ್ಯಾರನ್ನೂ ಪಾತ್ರದಲ್ಲಿ ಊಹಿಸಲಾರದಂತೆ ನಟಿಸುತ್ತಾರೆ ಈ ಮಲಯಾಳಿ ನಟ. ಫಹಾದ್ ಹಲವು ಅತ್ಯುತ್ತಮ ಪಾತ್ರಗಳಲ್ಲಿ ನಟಿಸಿದ್ದಾರೆ ಆದರೆ ಅವರ 'ಆವೇಶಂ' ಸಿನಿಮಾದ ರಂಗ ಪಾತ್ರಕ್ಕೆ ಇರುವಷ್ಟು ಅಭಿಮಾನಿಗಳು ಇನ್ಯಾವ ಪಾತ್ರಕ್ಕೂ ಇದ್ದಂತಿಲ್ಲ. ಬೆಂಗಳೂರಿನ ಡಾನ್ ರಂಗ ಪಾತ್ರದಲ್ಲಿ ಸಖತ್ ಆಗಿ ಮಿಂಚಿದ್ದರು ಫಹಾದ್ ಫಾಸಿಲ್. ಸಿನಿಮಾ ಬಿಡುಗಡೆ ಆಗಿ ಎರಡು ವರ್ಷವಾಗುತ್ತಾ ಬಂದಿದ್ದು ಈಗಲೂ ಸಿನಿಮಾದ ಮೀಮ್‌ಗಳು ಹರಿದಾಡುತ್ತಿರುತ್ತವೆ.

ಇದೀಗ 'ಆವೇಶಂ 2' ಸಿನಿಮಾದ ಬಗ್ಗೆ ಅಪ್‌ಡೇಟ್ ಹೊರಬಿದ್ದಿದ್ದು ಫಹಾದ್ ಅವರು ಮತ್ತೆ ರಂಗನ ಪಾತ್ರದಲ್ಲಿ ಮಿಂಚಲಿದ್ದಾರೆ. 'ಆವೇಶಂ' ಸಿನಿಮಾ 2024ರ ಏಪ್ರಿಲ್ ನಲ್ಲಿ ಬಿಡುಗಡೆ ಆಗಿತ್ತು. ಸಿನಿಮಾ ಮಲಯಾಳಂ ಮಾತ್ರವಲ್ಲ ಬಿಡುಗಡೆ ಆದ ಎಲ್ಲಾ ರಾಜ್ಯಗಳಲ್ಲಿಯೂ ಸೂಪರ್ ಹಿಟ್ ಆಗಿತ್ತು. ಒಟಿಟಿಯಲ್ಲಿ ಹಲವು ದಿನಗಳ ಕಾಲ ಟಾಪ್ ಟ್ರೆಂಡಿಂಗ್‌ನಲ್ಲಿತ್ತು ಸಿನಿಮಾ. ಆಗಿನಿಂದಲೂ ಸಿನಿಮಾದ ಸೀಕ್ವೆಲ್‌ಗಾಗಿ ಬೇಡಿಕೆ ಬರುತ್ತಲೇ ಇತ್ತು. ಫಹಾದ್ ಸಹ 'ಆವೇಶಂ 2' ಬಂದಲ್ಲಿ ನಟಿಸಲು ಉತ್ಸುಕನಾಗಿದ್ದೇನೆ ಎಂದು ಹಿಂದೆ ಸಂದರ್ಶನದಲ್ಲಿ ಹೇಳಿಕೊಂಡಿದ್ದರು. ಇದೀಗ ಆ ಸಮಯ ಬಂದಿದೆ. 'ಆವೇಶಂ 2' ಸಿನಿಮಾ ನಿರ್ಮಾಣಗೊಳ್ಳುವುದು ಪಕ್ಕಾ ಆಗಿದ್ದು, ಫಹಾದ್ ಅವರು ಐಕಾನಿಕ್ 'ರಂಗ' ಪಾತ್ರದಲ್ಲಿ ಮತ್ತೊಮ್ಮೆ ಮಿಂಚಲಿದ್ದಾರೆ. 'ಆವೇಶಂ' ಸಿನಿಮಾ ಬಿಡುಗಡೆ ಆದಾಗ ಆ ಸಿನಿಮಾದ ತೆಲುಗು ರೀಮೇಕ್ ಬಗ್ಗೆ ಬಹಳ ಚರ್ಚೆಗಳು ನಡೆದಿದ್ದವು.





# ಹಿಂದೂ ಧರ್ಮ ನಿಜಕ್ಕೂ ಅದ್ಭುತ

ಹಿಂದೂ ಧರ್ಮದ ಬಗ್ಗೆ ನಿಕ್ ಜೋನಸ್ ಮಾತು

ನಿಕ್ ಜೋನಸ್ ಭಾರತದ ಅಳಿಯ ಸಹ ಹೌದು, ಪ್ರಿಯಾಂಕಾ ಚೋಪ್ರಾ ಪತಿಯಾಗಿರುವ ನಿಕ್ ಜೋನಸ್, ಭಾರತದೊಂದಿಗೆ ಹತ್ತಿರದ ಬಂಧ ಹೊಂದಿದ್ದಾರೆ. ನಟಿ ಪ್ರಿಯಾಂಕಾ, ನಿಕ್ ಜೋನಸ್‌ಗೆ ಭಾರತೀಯ ಸಂಸ್ಕೃತಿ ಮತ್ತು ಹಿಂದೂ ಧರ್ಮದ ಬಗ್ಗೆ ಕಲಿಸಿಕೊಟ್ಟಿದ್ದಾರೆ. ಇತ್ತೀಚೆಗಿನ ಸಂದರ್ಶನದಲ್ಲಿ ಭಾರತ ಮತ್ತು ವಿಶೇಷವಾಗಿ ಹಿಂದೂ ಧರ್ಮದ ಬಗ್ಗೆ ನಿಕ್ ಜೋನಸ್ ಮಾತನಾಡಿದ್ದಾರೆ, ಹಿಂದೂ ಧರ್ಮದ ಬಗ್ಗೆ ಅಪಾರ ಗೌರವವನ್ನು ಅವರು ವ್ಯಕ್ತಪಡಿಸಿದ್ದಾರೆ.

ನಿಕ್ ಜೋನಸ್ , ಹಾಲಿವುಡ್‌ನ ಖ್ಯಾತ ಪಾಪ್ ಗಾಯಕ ಮತ್ತು ನಟ. ಇತ್ತೀಚೆಗೆ 'ಸ್ಯಾಚ್ ಸಂಗ್ ಶೋ'ನಲ್ಲಿ ಮಾತನಾಡಿರುವ ನಿಕ್ ಜೋನಸ್, 'ನಾನು ಹಿಂದೂ ಧರ್ಮದ ಬಗ್ಗೆ ಸಾಕಷ್ಟು ಕಲಿಯುತ್ತಿದ್ದೇನೆ. ಹಿಂದೂ ಧರ್ಮ ನಿಜಕ್ಕೂ ಅದ್ಭುತವಾಗಿದೆ. ವಿಶೇಷವಾಗಿ ಹಿಂದೂ ಧರ್ಮದ ಕರ್ಮದ ಸಿದ್ಧಾಂತ ನನ್ನನ್ನು ಹೆಚ್ಚು ಪ್ರಭಾವಿಸಿದೆ. ನಾವು ಇತರರಿಗೆ ಒಳ್ಳೆಯದನ್ನು ಮಾಡಿದರೆ ಅದು ನಮಗೆ ಮರಳಿ ಬರುತ್ತದೆ, ಕೆಟ್ಟದು ಮಾಡಿದರೆ ನಮಗೆ ಕೆಟ್ಟದು ಆಗುತ್ತದೆ ಎಂಬ ತತ್ವವು ನನಗೆ ತುಂಬಾ ಇಷ್ಟ' ಎಂದಿದ್ದಾರೆ. ಜೊತೆಗೆ ಅಲ್ಲದೆ ಭಾರತದ ಹಬ್ಬಗಳು ಮತ್ತು ಸಂಪ್ರದಾಯಗಳು ಈಗ ತಮ್ಮ ಮನೆಯ ಅವಿಭಾಜ್ಯ ಅಂಗವಾಗಿವೆ, ನಾನು ಭಾರತೀಯ ಹಬ್ಬಗಳನ್ನು ಬಹಳ ಇಷ್ಟಪಟ್ಟು ಆಚರಿಸುತ್ತೇನೆ' ಎಂದಿದ್ದಾರೆ ನಿಕ್. ತಮ್ಮ ಪುತ್ರಿ ಮಾಲತಿ ಮೇರಿ ಅವರನ್ನು ಹಿಂದೂ ಮತ್ತು ಕ್ರಿಶ್ಚಿಯನ್ ಎರಡು ಧರ್ಮಗಳ ಸಮನ್ವಯದೊಂದಿಗೆ ಬೆಳೆಸುತ್ತಿರುವುದಾಗಿ ನಿಕ್ ತಿಳಿಸಿದ್ದಾರೆ.

# ರಜನಿಕಾಂತ್ ಸಿನಿಮಾದ ನಿರ್ಮಾಪಕರಿಗೆ ಸಂಕಷ್ಟ

ರಜನೀಕಾಂತ್ ಅವರ ಪುತ್ರಿ ಸೌಂದರ್ಯ ರಜನೀಕಾಂತ್ ನಿರ್ದೇಶನ ಮಾಡಿದ್ದ ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಹೀನಾಯ ಸೋಲು ಕಂಡಿತ್ತು. ಸಿನಿಮಾ ಬಿಡುಗಡೆ ಆಗಿ 12 ವರ್ಷಗಳ ಬಳಿಕ ಇದೀಗ ಈ ಸಿನಿಮಾದ ನಿರ್ಮಾಪಕರಿಗೆ ದೊಡ್ಡ ಸಂಕಷ್ಟವೊಂದು ಎದುರಾಗಿದೆ.

ನ್ಯಾಯಲಯದ ಆದೇಶದಲ್ಲಿ ಕೋಟ್ಯಂತರ ಹಣ ಕಟ್ಟಬೇಕಿದೆ ಅಥವಾ ಜೈಲು ಪಾಲಾಗಬೇಕಿದೆ. ರಜನೀಕಾಂತ್ ವೃತ್ತಿ ಜೀವನದಲ್ಲಿ ಬಹಳ ಕಡಿಮೆ ಸಿನಿಮಾಗಳು ಫ್ಲಾಪ್ ಎನಿಸಿಕೊಂಡಿವೆ.

ರಜನೀಕಾಂತ್ ಅವರ ಸಿನಿಮಾ ಫ್ಲಾಪ್ ಆದರೂ ಹಾಕಿರುವ ಬಂಡವಾಳಕ್ಕಿಂತಲೂ ತುಸು ಹೆಚ್ಚೇ ವಾಪಸ್ ಬಂದಿರುತ್ತದೆ. ಆದರೆ ರಜನೀಕಾಂತ್ ಅವರ ಕೆಲ ಸಿನಿಮಾಗಳಿವೆ, ಅವು ಇನ್ನಿಲ್ಲದಂತೆ ಬಾಕ್ಸ್ ಆಫೀಸ್‌ನಲ್ಲಿ ಸೋತಿವೆ. ಅವುಗಳಲ್ಲಿ 'ಕೊಚಡಿಯನ್' ಸಹ ಒಂದು. ರಜನೀಕಾಂತ್ ಅವರ ಪುತ್ರಿ ಸೌಂದರ್ಯ ರಜನೀಕಾಂತ್ ನಿರ್ದೇಶನ ಮಾಡಿದ್ದ ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಹೀನಾಯ ಸೋಲು ಕಂಡಿತ್ತು. ಸಿನಿಮಾ ಬಿಡುಗಡೆ ಆಗಿ 12 ವರ್ಷಗಳ ಬಳಿಕ ಇದೀಗ ಈ ಸಿನಿಮಾದ ನಿರ್ಮಾಪಕರಿಗೆ ದೊಡ್ಡ ಸಂಕಷ್ಟವೊಂದು ಎದುರಾಗಿದೆ. 'ಕೊಚಡಿಯನ್' ಸಿನಿಮಾನಲ್ಲಿ ರಜನೀಕಾಂತ್ ನಾಯಕರಾದರೂ ಇದು ಕಾರ್ಟೂನ್ ಮಾದರಿಯ ಸಿನಿಮಾ. ಹಾಲಿವುಡ್‌ನಲ್ಲಿ ಆಗಷ್ಟೆ ಬಳಕೆಗೆ ಬಂದಿದ್ದ ಲೈವ್ ಆಕ್ಷನ್ ಅಥವಾ ಫರ್ಫಾರ್ಮೆನ್ಸ್ ಕ್ಯಾಪ್ಚರ್ ತಂತ್ರಜ್ಞಾನ ಬಳಸಿ ನಿರ್ಮಿಸಲಾಗಿದ್ದ ಅನಿಮೇಷನ್ ಸಿನಿಮಾ ಇದಾಗಿತ್ತು. ಸಿನಿಮಾನಲ್ಲಿ ರಜನೀಕಾಂತ್ ನಾಯಕ, ದೀಪಿಕಾ ಪಡುಕೋಣೆ ನಾಯಕಿ. 'ಅವತಾರ್', 'ಅಡ್ವೆಂಚರ್ ಆಫ್ ಟಿನ್‌ಟಿನ್' ಅಂಥಹಾ ಕೆಲವು ಸಿನಿಮಾಗಳು ಅದಾಗಲೇ ಈ ತಂತ್ರಜ್ಞಾನ ಬಳಸಿದ್ದವು. 'ಕೊಚಡಿಯನ್' ತಂತ್ರಜ್ಞಾನ ಬಳಸಲಾಗಿತ್ತಾದರೂ ಸಿನಿಮಾದ ಗುಣಮಟ್ಟ ಬಹಳ ಕಳಪೆಯಾಗಿತ್ತು.

# 'ಜನ ನಾಯಗನ್' ಮುಂದಿನ ನಡೆ ಏನು?

ವಿಜಯ್ ನಟನೆಯ 'ಜನ ನಾಯಗನ್' ಸಿನಿಮಾ ರಿಲೀಸ್‌ಗೆ ಸಾಕಷ್ಟು ಅಡಚಣೆಗಳು ಎದುರಾಗಿವೆ. ಮದ್ರಾಸ್ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಕೆವಿಎನ್ ಸಂಸ್ಥೆ ಹಿಂದಕ್ಕೆ ಪಡೆದಿದೆ. ಇದೀಗ ಚಿತ್ರ ತಂಡ ಸೆನ್ಸಾರ್ ಪ್ರಮಾಣಪತ್ರಕ್ಕಾಗಿ ಪರಿಷ್ಕರಣಾ ಸಮಿತಿ ಮೊರೆ ಹೋಗಲು ನಿರ್ಧರಿಸಿದೆ. ಫೆಬ್ರವರಿ 25ರೊಳಗೆ ಪ್ರಮಾಣಪತ್ರ ಸಿಕ್ಕರೆ ರಿಲೀಸ್ ಸಾಧ್ಯತೆ.

'ಜನ ನಾಯಗನ್' ಸಿನಿಮಾ ರಿಲೀಸ್ ಆಗಲು ಸಾಕಷ್ಟು ಅಡಚಣೆ ಉಂಟಾಗುತ್ತಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮದ್ರಾಸ್ ಹೈಕೋರ್ಟ್‌ನಲ್ಲಿ ಕೆವಿಎನ್ ಸಂಸ್ಥೆ ಅರ್ಜಿ ಸಲ್ಲಿಕೆ ಮಾಡಿತ್ತು. ಆದರೆ, ಈಗ ಅರ್ಜಿಯನ್ನು ಕೆವಿಎನ್ ಸಂಸ್ಥೆ ಹಿಂದಕ್ಕೆ ಪಡೆದಿದೆ. ಈ ಮೂಲಕ ತಂಡದ ಮುಂದಿನ ನಡೆ ಏನು ಎಂಬ ಕುತೂಹಲ ಮೂಡಿದೆ. ಸಿನಿಮಾ ಶೀಘ್ರವೇ ತೆರೆಗೆ ಬರುತ್ತದೆಯೇ ಎಂಬ ಪ್ರಶ್ನೆ ಕಾಡುತ್ತಿದೆ.ಜನವರಿ 9ರಂದು ವಿಜಯ್ ನಟನೆಯ 'ಜನ ನಾಯಗನ್' ರಿಲೀಸ್ ಆಗಬೇಕಿತ್ತು. ಹೀಗಾಗಿ ಸೆನ್ಸಾರ್ ಪ್ರಮಾಣ ಪತ್ರಕ್ಕಾಗಿ ಡಿಸೆಂಬರ್‌ನಲ್ಲೇ ಅರ್ಜಿ ಸಲ್ಲಿಕೆ ಮಾಡಿತ್ತು. ಆದರೆ, ತಂಡಕ್ಕೆ ಸೆನ್ಸಾರ್ ಪ್ರಮಾಣಪತ್ರ ಸಿಕ್ಕಿರಲಿಲ್ಲ. ಸಿನಿಮಾ ರಿಲೀಸ್‌ಗೆ ಕೆಲವೇ ದಿನ ಬಾಕಿ ಇರುವಾಗ ನಿರ್ಮಾಣ ಸಂಸ್ಥೆ ಕೆವಿಎನ್ ಮದ್ರಾಸ್ ಹೈಕೋರ್ಟ್‌ನಲ್ಲಿ ತುರ್ತು ಅರ್ಜಿ ಸಲ್ಲಿಕೆ ಮಾಡಿತ್ತು.



ಜನವರಿ 9ರಂದು 'ಸೆನ್ಸಾರ್ ಪ್ರಮಾಣ ಪತ್ರ ನೀಡಿ' ಎಂದು ಕೋರ್ಟ್ ಸೆನ್ಸಾರ್ ಮಂಡಳಿಗೆ ಆದೇಶ ನೀಡಿತ್ತು.

ಅದೇ ದಿನ ಸಂಜೆ ಮುಖ್ಯ ನ್ಯಾಯಮೂರ್ತಿ ಎಂಎಂ ಶ್ರೀವಾಸ್ತವ ಮತ್ತು ನ್ಯಾಯಮೂರ್ತಿ ಅರುಲ್ ಮುರುಗನ್ ಅವರು ಈ ಆದೇಶಕ್ಕೆ ತಡೆ ನೀಡಿದರು. ಈಗ ಪ್ರಕರಣ ಕೋರ್ಟ್‌ನಲ್ಲೇ ಇದ್ದು ತಿಂಗಳಾಗಿದೆ. ಆದರೆ, ಈವರೆಗೆ ಆದೇಶ ಹೊರ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಅರ್ಜಿಯನ್ನು ಕೆವಿಎನ್ ಹಿಂಪಡೆದಿದೆ. ಅಲ್ಲದೆ, ಈ ವಿಷಯವಾಗಿ ತಂಡ ಪರಿಷ್ಕರಣಾ ಸಮಿತಿ ಮೆಟ್ಟಿಲು ಹತ್ತಲಿದೆ. ಅಲ್ಲಿ ಸಿನಿಮಾ ವೀಕ್ಷಣೆ ಆದ ಬಳಿಕ ಸಿನಿಮಾ ರಿಲೀಸ್ ಮಾಡುವ ಆಲೋಚನೆ ತಂಡಕ್ಕೆ ಇದೆ. ವಿಮರ್ಶೆ ಸಮಿತಿಗೆ ಸಿನಿಮಾ ಸಲ್ಲಿಕೆ ಆದ ಬಳಿಕ 15 ದಿನಗಳಲ್ಲಿ ಸಿನಿಮಾ ರಿವ್ಯೂ ಆಗಿ ಸೆನ್ಸಾರ್ ಪ್ರಮಾಣಪತ್ರ ನೀಡಬೇಕು. ಹೀಗಾಗಿ, ಫೆಬ್ರವರಿ 25ರವೇಳೆಗೆ ಸಿನಿಮಾ ಪ್ರಮಾಣ ಪತ್ರ ಕೈ ಸೇರಿದರೆ ಆ ಬಳಿಕ ಸಿನಿಮಾ ರಿಲೀಸ್ ಆಗುವ ಸಾಧ್ಯತೆ ಇದೆ. ಈ ಮಧ್ಯೆ ತಂಡಕ್ಕೆ ಮತ್ತೊಂದು ಭಯ ಕೂಡ ಇದೆ. ತಮಿಳುನಾಡಲ್ಲಿ ಶೀಘ್ರವೇ ವಿಧಾನಸಭೆ ಚುನಾವಣೆ ನಡೆಯಲಿದೆ. ಅದರ ದಿನಾಂಕ ಘೋಷಣೆ ಆದರೆ, 'ಜನ ನಾಯಗನ್' ರಿಲೀಸ್ ಮತ್ತಷ್ಟು ವಿಳಂಬ ಆಗಲಿದೆ.



# ಕಮಿಡಿಯನ್ ಸಹಾಯಕ್ಕೆ ಧಾವಿಸಿದ ಸೋನು

ಸೋನು ಸೂದ್, ತಮ್ಮದೇ ಚಿತ್ರರಂಗದ ಸಹನಟನಿಗೆ ಸಹಾಯ ಘೋಷಿಸಿದ್ದಾರೆ. ಇತ್ತೀಚೆಗಷ್ಟೆ ಜೈಲುಪಾಲಾದ ಖ್ಯಾತ ಹಾಸ್ಯ ನಟ ರಾಜ್‌ಪಾಲ್ ಯಾದವ್ ಅವರಿಗೆ ತಾವು ಸಹಾಯ ಮಾಡುವುದಾಗಿ ಸೋನು ಸೂದ್ ಹೇಳಿದ್ದಾರೆ. ಮಾತ್ರವಲ್ಲದೆ ಚಿತ್ರರಂಗದ ಇತರರು ಸಹ ರಾಜ್‌ಪಾಲ್ ಯಾದವ್ ಅವರಿಗೆ ಸಹಾಯ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಸೋನು ಸೂದ್ , ಕೋವಿಡ್ ಸಮಯದಲ್ಲಿ ಮಾಡಿದ ಅಭೂತಪೂರ್ವ ಸಮಾಜ ಸೇವೆ ಅವರಿಗೆ 'ಮಸೀಹ' (ದೇವರ ಅವತಾರ) ಎಂಬ ಹೆಸರು ತಂದುಕೊಟ್ಟಿದೆ. ಕೋವಿಡ್ ಬಳಿಕವೂ ಸಹ ಸೋನು ಸೂದ್ ಅವರು ತಮ್ಮ ಸಾಮಾಜಿಕ ಕಾರ್ಯವನ್ನು ಮುಂದುವರೆಸಿದ್ದಾರೆ. ಹಲವಾರು ಮಕ್ಕಳ ಶಿಕ್ಷಣ, ಆರೋಗ್ಯ ಚಿಕಿತ್ಸೆಗಳಿಗೆ ನೆರವಾಗುತ್ತಲೇ ಇದ್ದಾರೆ. ಇದೀಗ ಸೋನು ಸೂದ್, ತಮ್ಮದೇ ಚಿತ್ರರಂಗದ ಸಹನಟನಿಗೆ ಸಹಾಯ ಘೋಷಿಸಿದ್ದಾರೆ. ಇತ್ತೀಚೆಗಷ್ಟೆ ಜೈಲುಪಾಲಾದ ಖ್ಯಾತ ಹಾಸ್ಯ ನಟ ರಾಜ್‌ಪಾಲ್ ಯಾದವ್ ಅವರಿಗೆ ತಾವು ಸಹಾಯ ಮಾಡುವುದಾಗಿ ಸೋನು ಸೂದ್ ಹೇಳಿದ್ದಾರೆ.

9 ಕೋಟಿ ರೂಪಾಯಿ ಚೆಕ್ ಬೌನ್ಸ್ ಪ್ರಕರಣದಲ್ಲಿ ನ್ಯಾಯಾಲಯವು ರಾಜ್‌ಪಾಲ್ ಯಾದವ್ ಅವರು ಅಪರಾಧಿ ಎಂದು ತೀರ್ಪು ನೀಡಿದ್ದು, ರಾಜ್‌ಪಾಲ್ ಅವರಿಗೆ ಶಿಕ್ಷೆ ವಿಧಿಸಿದೆ. ಜೈಲಿಗೆ ಹೋಗುವ ಮುಂಚೆ ಹೇಳಿಕೆ ನೀಡಿದ್ದ ರಾಜ್‌ಪಾಲ್ ಯಾದವ್, ತಮ್ಮ ಬಳಿ ಹಣವೂ ಇಲ್ಲ, ಯಾರೂ ಸ್ನೇಹಿತರೂ ಇಲ್ಲ' ಎಂದಿದ್ದರು. ಇದೀಗ ಸೋನು ಸೂದ್, ರಾಜ್‌ಪಾಲ್ ಯಾದವ್ ಅವರಿಗೆ ನೆರವಾಗಲು ಮುಂದೆ ಬಂದಿದ್ದಾರೆ. ರಾಜ್‌ಪಾಲ್ ಯಾದವ್‌ಗೆ ಸಹಾಯ ಮಾಡಲು ಮುಂದೆ ಬಂದಿರುವ ಸೋನು ಸೂದ್, ರಾಜ್‌ಪಾಲ್ ಅವರಿಗೆ ತಮ್ಮ ಸಿನಿಮಾನಲ್ಲಿ ಪಾತ್ರ ನೀಡುವ ಜೊತೆಗೆ ಅವರಿಗೆ ಒಳ್ಳೆಯ ಮೊತ್ತವನ್ನು ಮುಂಗಡವಾಗಿ ನೀಡುವುದಾಗಿಯೂ ಸಹ ಹೇಳಿದ್ದಾರೆ.



# ಭಯಂಕರ ಬ್ರಿಯಾನ್ ವಾಟ್ ಎ ಕ್ಯಾಚ್

ಒಮಾನ್ ವಿರುದ್ಧದ ಪಂದ್ಯದಲ್ಲಿ ಝಿಂಬಾಬ್ವೆ ತಂಡವು ಭರ್ಜರಿ ಜಯ ಸಾಧಿಸಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಒಮಾನ್ ತಂಡವು 103 ರನ್‌ಗಳಿಸಿ ಆಲೌಟ್ ಆಗಿತ್ತು.

ಈ ಗುರಿಯನ್ನು ಬೆನ್ನತ್ತಿದ ಝಿಂಬಾಬ್ವೆ ತಂಡ 13.3 ಓವರ್‌ಗಳಲ್ಲಿ 106 ರನ್‌ಗಳಿಸಿ 8 ವಿಕೆಟ್‌ಗಳ ಗೆಲುವು ದಾಖಲಿಸಿದೆ. ಇನ್ನು ಝಿಂಬಾಬ್ವೆ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಟಿ20 ವಿಶ್ವಕಪ್‌ನ 8ನೇ ಪಂದ್ಯದಲ್ಲಿ ಝಿಂಬಾಬ್ವೆ ಆಟಗಾರ ಬ್ರಿಯಾನ್ ಬೆನೆಟ್ ಅದ್ಭುತ ಕ್ಯಾಚ್ ಹಿಡಿದು ಎಲ್ಲರನ್ನು ನಿಬ್ಬೆರಗಾಗಿಸಿದ್ದಾರೆ.

ಕೊಲಂಬೊದ ಸಿಂಹಳೀಸ್ ಸ್ಪೋರ್ಟ್ಸ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಒಮಾನ್ ಹಾಗೂ ಝಿಂಬಾಬ್ವೆ ತಂಡಗಳು ಮುಖಾಮುಖಿಯಾಗಿದ್ದವು. ಈ ಮ್ಯಾಚ್‌ನಲ್ಲಿ ಟಾಸ್ ಗೆದ್ದ ಝಿಂಬಾಬ್ವೆ ತಂಡದ ನಾಯಕ ಸಿಕಂದರ್ ರಾಝ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಒಮಾನ್ ತಂಡವು ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಕೇವಲ 27 ರನ್‌ಗಳಿಸುವಷ್ಟರಲ್ಲಿ ಅಗ್ರ ಕ್ರಮಾಂಕದ ಐವರು ಬ್ಯಾಟರ್‌ಗಳನ್ನು ಕಳೆದುಕೊಂಡಿದ್ದರು.

ಈ ಹಂತದಲ್ಲಿ ಕಣಕ್ಕಿಳಿದ ನದೀಮ್ ಖಾನ್ 18 ಎಸೆತಗಳಲ್ಲಿ 20 ರನ್ ಬಾರಿಸಿದರು. ಆದರೆ ಕೊನೆಯ ಓವರ್‌ನಲ್ಲಿ ನದೀಮ್ ಖಾನ್ ಅವರ ವಿಕೆಟ್ ಪಡೆಯುವಲ್ಲಿ ಬ್ರಾಡ್ ಇವನ್ಸ್ ಯಶಸ್ವಿಯಾದರು.

ಅದು ಕೂಡ ಬ್ರಿಯಾನ್ ಬೆನೆಟ್ ಹಿಡಿದ ಅತ್ಯದ್ಭುತ ಕ್ಯಾಚ್ ಮೂಲಕ ಎಂಬುದು ವಿಶೇಷ. 20ನೇ ಓವರ್‌ನ ಐದನೇ ಎಸೆತದಲ್ಲಿ ನದೀಮ್ ಖಾನ್ ಡೀಪ್ ಮಿಡ್ ವಿಕೆಟ್‌ನತ್ತ ಬಾರಿಸಿದ್ದರು. ಅತ್ತ ಬೌಂಡರಿ ಲೈನ್‌ನಿಂದ ಓಡಿ ಬಂದ ಬ್ರಿಯಾನ್ ಬೆನೆಟ್ ಅದ್ಭುತ ಡೈವಿಂಗ್ ಮೂಲಕ ಚೆಂಡನ್ನು ಬಂಧಿಸಿದರು.

ಬ್ರಿಯಾನ್ ಬೆನೆಟ್ ಹಿಡಿದ ಈ ಅದ್ಭುತ ಕ್ಯಾಚ್ ನೋಡಿ ಪ್ರೇಕ್ಷಕರು ನಿಬ್ಬೆರಗಾದರು. ಇದೀಗ ಈ ಕ್ಯಾಚ್ ಅನ್ನು 2026 ಟಿ20 ವಿಶ್ವಕಪ್‌ನ ಬೆಸ್ಟ್ ಕ್ಯಾಚ್ ಎಂದು ಬಣ್ಣಿಸಲಾಗುತ್ತಿದೆ.

ಇನ್ನು ಮುಂಬರುವ ಪಂದ್ಯಗಳಲ್ಲಿ ಇದಕ್ಕಿಂತ ಉತ್ತಮ ಕ್ಯಾಚ್ ಹಿಡಿಯುವವರು ಯಾರು ಎಂಬ ಕುತೂಹಲ ಕೂಡ ಕ್ರಿಕೆಟ್ ಪ್ರೇಮಿಗಳಲ್ಲಿ ಮೂಡಿದೆ.ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಒಮಾನ್ ತಂಡವು 19.5 ಓವರ್‌ಗಳಲ್ಲಿ 103 ರನ್ ಬಾರಿಸಿ ಆಲೌಟ್ ಆಗಿದ್ದರು. ಈ ಗುರಿಯನ್ನು ಬೆನ್ನತ್ತಿದ ಝಿಂಬಾಬ್ವೆ ಪರ ಆರಂಭಿಕನಾಗಿ ಕಣಕ್ಕಿಳಿದ ಬ್ರಿಯಾನ್ ಬೆನೆಟ್ 36 ಎಸೆತಗಳಲ್ಲಿ 7 ಫೋರ್‌ಗಳೊಂದಿಗೆ ಅಜೇಯ 48 ರನ್ ಬಾರಿಸಿದರು. ಬೆನೆಟ್ ಅವರ ಈ ಜವಾಬ್ದಾರಿಯುತ ಇನಿಂಗ್ಸ್‌ನೊಂದಿಗೆ ಝಿಂಬಾಬ್ವೆ ತಂಡವು 13.3 ಓವರ್‌ಗಳಲ್ಲಿ 106 ರನ್ ಬಾರಿಸಿ 8 ವಿಕೆಟ್‌ಗಳ ಜಯ ಸಾಧಿಸಿದೆ. ಇನ್ನು ಝಿಂಬಾಬ್ವೆ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದ್ದು, ಈ ಪಂದ್ಯವು ಫೆಬ್ರವರಿ 13 ರಂದು ನಡೆಯಲಿದೆ. ಆಸ್ಟ್ರೇಲಿಯಾ ವಿರುದ್ಧದ ಪಂದ್ಯದ ಬಳಿಕ ಝಿಂಬಾಬ್ವೆ ಐರ್ಲೆಂಡ್ ಹಾಗೂ ಶ್ರೀಲಂಕಾ ತಂಡಗಳನ್ನು ಎದುರಿಸಲಿದೆ. ಅಂದರೆ ಝಿಂಬಾಬ್ವೆ ಆಸೀಸ್ ಪಡೆ ವಿರುದ್ಧ ಸೋತರೂ ಶ್ರೀಲಂಕಾ ಮತ್ತು ಐರ್ಲೆಂಡ್ ತಂಡಗಳನ್ನು ಮಣಿಸಿ ಸೂಪರ್-8 ಹಂತಕ್ಕೇರಲು ಉತ್ತಮ ಅವಕಾಶವಿದೆ. ಹೀಗಾಗಿ ಮುಂದಿನ ಪಂದ್ಯಗಳಲ್ಲೂ ಝಿಂಬಾಬ್ವೆ ಕಡೆಯಿಂದ ಭರ್ಜರಿ ಪೈಪೋಟಿ ನಿರೀಕ್ಷಿಸಬಹುದು.

# 3 ಭರ್ಜರಿ ಸಿಕ್ಸ್, 7 ಫೋರ್: ಸ್ಫೋಟಕ ಹಾಫ್ ಸೆಂಚುರಿ ಸಿಡಿಸಿದ ಶಮಿ

ರಣಜಿ ಟೂರ್ನಿಯ ಮೂರನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೊಹಮ್ಮದ್ ಶಮಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಗಮನ ಸೆಳೆದಿದ್ದಾರೆ. ಬೆಂಗಾಲ್ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಆಂಧ್ರಪ್ರದೇಶ್ ವಿರುದ್ಧದ ಈ ಪಂದ್ಯದಲ್ಲಿ ಟಾಸ್ ಗೆದ್ದ ಬೆಂಗಾಲ್ ತಂಡದ ನಾಯಕ ಅಭಿಮನ್ಯು ಈಶ್ವರನ್ ಬೌಲಿಂಗ್ ಆಯ್ದುಕೊಂಡಿದ್ದರು.



ಅದರಂತೆ ಮೊದಲು ಬ್ಯಾಟ್ ಮಾಡಿದ ಆಂಧ್ರ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ 295 ರನ್‌ಗಳಿಸಿ ಆಲೌಟ್ ಆಯಿತು. ಇದಕ್ಕುತ್ತರವಾಗಿ ಮೊದಲ ಇನಿಂಗ್ಸ್ ಆಡಿದ ಬೆಂಗಾಲ್ ಪರ ಸುದೀಪ್ ಕುಮಾರ್ ದ್ವಿಶತಕ ಸಿಡಿಸಿದರು.

ಇನ್ನು ಸುಮಂತ ಗುಪ್ತಾ 81 ರನ್ ಬಾರಿಸಿದರೆ, ಶಕೀರ್ ಹಬೀಬಿ 95 ರನ್‌ಗಳ ಇನಿಂಗ್ಸ್ ಆಡಿದರು.

ಹಾಗೆಯೇ ಕೆಳ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಮೊಹಮ್ಮದ್ ಶಮಿ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು.

ಹೊಡಿಬಡಿ ಬ್ಯಾಟಿಂಗ್‌ನೊಂದಿಗೆ ಗಮನ ಸೆಳೆದ ಶಮಿ 33 ಎಸೆತಗಳಲ್ಲಿ 3 ಭರ್ಜರಿ ಸಿಕ್ಸ್ ಹಾಗೂ 7 ಫೋರ್‌ಗಳೊಂದಿಗೆ 53 ರನ್ ಚಚ್ಚಿದರು. ಈ ಅರ್ಧಶತಕದ ನೆರವಿನೊಂದಿಗೆ ಬೆಂಗಾಲ್ ತಂಡವು ಮೊದಲ ಇನಿಂಗ್ಸ್‌ನಲ್ಲಿ ಬರೋಬ್ಬರಿ 629 ರನ್ ಕಲೆಹಾಕಿದೆ. ಇದೀಗ ದ್ವಿತೀಯ ಇನಿಂಗ್ಸ್ ಶುರು ಮಾಡಿರುವ ಆಂಧ್ರ ತಂಡವು 30 ಓವರ್‌ಗಳ ಮುಕ್ತಾಯದ ವೇಳೆಗೆ 3 ವಿಕೆಟ್ ಕಳೆದುಕೊಂಡು 83 ರನ್ ಕಲೆಹಾಕಿದೆ. ಇತ್ತ ಐದನೇ ದಿನದಾಟ ಚಾಲ್ತಿಯಲ್ಲಿರುವ ಕಾರಣ ಈ ಪಂದ್ಯವು ಡ್ರಾನಲ್ಲಿ ಅಂತ್ಯಗೊಳ್ಳುವ ಅಥವಾ ಬೆಂಗಾಲ್ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು.

ಹೀಗಾಗಿ 3ನೇ ಕ್ವಾರ್ಟರ್ ಫೈನಲ್ ಮೂಲಕ ಬೆಂಗಾಲ್ ತಂಡವು ಸೆಮಿಫೈನಲ್‌ಗೆ ಅರ್ಹತೆ ಪಡೆಯುವುದನ್ನು ನಿರೀಕ್ಷಿಸಬಹುದು.

# ಐಪಿಎಲ್‌ಗೆ ಯುಪಿ ವಾರಿಯರ್ಸ್ ತಂಡ ಎಂಟ್ರಿ

ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳ ಮಾಲೀಕರು ಬದಲಾಗುವ ಸಾಧ್ಯತೆಯಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ಆರಂಭಕ್ಕೂ ಮುನ್ನ ಎರಡು ಫ್ರಾಂಚೈಸಿಗಳ ಮಾಲೀಕರು ಬದಲಾಗುವುದು ಬಹುತೇಕ ಖಚಿತವಾಗಿದೆ. ಈಗಾಗಲೇ ಡಿಯಾಜಿಯೋ ಕಂಪೆನಿಯು ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯ ಮಾರಾಟಕ್ಕೆ ಬಿಡ್ಡಿಂಗ್ ಆಹ್ವಾನಿಸಿದೆ.

ಇದರ ಬೆನ್ನಲ್ಲೇ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯನ್ನು ಸಹ ಮಾರಾಟ ಮಾಡಲು ರಾಯಲ್ಸ್ ಸ್ಪೋರ್ಟ್ಸ್ ಗ್ರೂಪ್ ಮುಂದಾಗಿದೆ. ಅದರಂತೆ ಇದೀಗ ಆರ್‌ಆರ್ ತಂಡದ ಖರೀದಿಗೂ ಬಿಡ್ಡಿಂಗ್‌ಗಳನ್ನು ಆಹ್ವಾನಿಸಲಾಗಿದೆ. ಹೀಗಾಗಿ ಐಪಿಎಲ್ ಆರಂಭಕ್ಕೂ ಮುನ್ನ ಆರ್‌ಸಿಬಿ ಮತ್ತು ಆರ್ ಆರ್ ತಂಡಗಳ ಮಾಲೀಕರು ಬದಲಾಗುವ ಸಾಧ್ಯತೆ ಹೆಚ್ಚಿದೆ. ಇಲ್ಲಿ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯ ಖರೀದಿಗೆ ಕ್ಯಾಪ್ರಿ ಗ್ಲೋಬಲ್ ಆಸಕ್ತಿ ತೋರಿರುವುದು ವಿಶೇಷ. ಐಪಿಎಲ್‌ನಲ್ಲಿ 18 ವರ್ಷಗಳನ್ನು ಪೂರೈಸಿರುವ ಹಳೆಯ ಫ್ರಾಂಚೈಸಿಯನ್ನು ಬಹುಪಾಲನ್ನು ಖರೀದಿಸಲು ಕ್ಯಾಪ್ರಿ ಗ್ಲೋಬಲ್ ಮಾತುಕತೆ ನಡೆಸಿದೆ. ಹೀಗಾಗಿ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯು ಕ್ಯಾಪ್ರಿ ಗ್ಲೋಬಲ್ ಪಾಲಾಗುವ ಸಾಧ್ಯತೆ ಹೆಚ್ಚಿದೆ.



ಕುತೂಹಲಕಾರಿ ವಿಷಯ ಎಂದರೆ, ಕ್ಯಾಪ್ರಿ ಗ್ಲೋಬಲ್ ಕಂಪೆನಿಯು ಈಗಾಗಲೇ ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಯುಪಿ ವಾರಿಯರ್ಸ್ ಹೆಸರಿನ ತಂಡವೊಂದನ್ನು ಕಣಕ್ಕಿಳಿಸುತ್ತಿದೆ.

ಹೀಗಾಗಿ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯನ್ನು ಕ್ಯಾಪ್ರಿ ಗ್ಲೋಬಲ್ ಖರೀದಿಸಿದರೆ ಆರ್‌ಆರ್ ತಂಡದ ಹೆಸರು ಬದಲಾವಣೆಯಾಗುವುದು ಖಚಿತ. ಅದರಂತೆ ರಾಜಸ್ಥಾನ್ ರಾಯಲ್ಸ್ ಬದಲಿಗೆ ಐಪಿಎಲ್‌ನಲ್ಲಿ ಯುಪಿ ವಾರಿಯರ್ಸ್ ಹೆಸರಿನ ತಂಡ ಕಣಕ್ಕಿಳಿಯಲಿದೆ.

ಮತ್ತೊಂದೆಡೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯ ಖರೀದಿಗೆ ಮ್ಯಾಂಚೆಸ್ಟರ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ಮಾಲೀಕರಾದ ಅವ್ರಾಮ್ ಗ್ಲೇಝರ್ ಬಿಡ್ ಸಲ್ಲಿಸಿದ್ದಾರೆ. ಇವರೊಂದಿಗೆ ಅದಾನಿ ಗ್ರೂಪ್, ಆದಾರ್ ಪೂನವಾಲ ಸೇರಿದಂತೆ ಕೆಲ ಉದ್ಯಮಿಗಳು ಆರ್‌ಸಿಬಿ ಫ್ರಾಂಚೈಸಿಯ ಖರೀದಿಗೆ ಆಸಕ್ತಿ ತೋರಿದ್ದಾರೆ.

# ಮೊದಲ ಪಂದ್ಯದಲ್ಲಿ ಎದ್ದು ಬಿದ್ದು ಗೆದ್ದ ಪಾಕಿಸ್ತಾನಕ್ಕೆ ನಡುಕ!

2ನೇ ಪಂದ್ಯ ಆಡಲು ಪಾಕ್ ಸಜ್ಜು

ಟಿ20 ವಿಶ್ವಕಪ್‌ನ 12ನೇ ಪಂದ್ಯದಲ್ಲಿ ಪಾಕಿಸ್ತಾನ್ ತಂಡವು ಯುಎಸ್‌ಎ ತಂಡವನ್ನು ಎದುರಿಸಲಿದೆ. ಈ ಪಂದ್ಯದ ಬಳಿಕ, ಅಂದರೆ ಫೆಬ್ರವರಿ 15 ರಂದು ಭಾರತ ಮತ್ತು ಪಾಕಿಸ್ತಾನ್ ಮುಖಾಮುಖಿಯಾಗಲಿದೆ. ಇನ್ನು ಟೀಮ್ ಇಂಡಿಯಾ ವಿರುದ್ಧದ ಮ್ಯಾಚ್ ಬಳಿಕ ಪಾಕ್ ಪಡೆ ನಮೀಬಿಯ ತಂಡವನ್ನು ಎದುರಿಸಲಿದೆ.

ಟಿ20 ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಗೆಲ್ಲುವ ಮೂಲಕ ಪಾಕಿಸ್ತಾನ್ ಶುಭಾರಂಭ ಮಾಡಿದೆ. ಈ ಶುಭಾರಂಭ ರೋಚಕ ಗೆಲುವಿನೊಂದಿಗೆ ಎಂಬುದು ಇಲ್ಲಿ ಉಲ್ಲೇಖಾರ್ಹ.

ಅಂದರೆ ನೆದರ್‌ಲೆಂಡ್ಸ್ ವಿರುದ್ಧದ ಈ ಪಂದ್ಯದಲ್ಲಿ ಪಾಕ್ ಪಡೆ ಅಂತಿಮ ಓವರ್‌ನಲ್ಲಿ ಗೆಲುವು ದಾಖಲಿಸಿತ್ತು. ಅದು ಸಹ 3 ವಿಕೆಟ್‌ಗಳಿಂದ. ಕೊಲಂಬೊದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಪಾಕ್ ತಂಡದ ನಾಯಕ ಸಲ್ಮಾನ್ ಅಲಿ ಅಘಾ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ನೆದರ್‌ಲೆಂಡ್ಸ್ ತಂಡವು ಕಲೆಹಾಕಿದ್ದು ಕೇವಲ 147 ರನ್‌ಗಳು ಮಾತ್ರ. ಆದರೆ ಈ ಗುರಿಯನ್ನು ಬೆನ್ನತ್ತುವಲ್ಲಿ ಪಾಕ್ ಪಡೆ ಅಕ್ಷರಶಃ



ಒದ್ದಾಡಿದರು. ಅದರಲ್ಲೂ ಕೊನೆಯ 2 ಓವರ್‌ಗಳಲ್ಲಿ ಪಾಕಿಸ್ತಾನ್ ತಂಡಕ್ಕೆ 29 ರನ್‌ಗಳ ಅವಶ್ಯಕತೆಯಿತ್ತು. ಈ ವೇಳೆ ಮ್ಯಾಕ್ಸ್ ಒಡೌಡ್ ಬಿಟ್ಟ ಕ್ಯಾಚ್ ನೆದರ್‌ಲೆಂಡ್ಸ್ ಪಾಲಿಗೆ ಮುಳುವಾಯಿತು. ಅಂತಿಮ ಹಂತದಲ್ಲಿ ಸಿಕ್ಕ ಜೀವದಾನವನ್ನು ಬಳಸಿಕೊಂಡ ಫಯೀಮ್ ಅಶ್ರಫ್ 19ನೇ ಓವರ್‌ನಲ್ಲಿ 24 ರನ್ ಚಚ್ಚಿದರು. ಅಲ್ಲದೆ ಕೊನೆಯ ಓವರ್‌ನ 3ನೇ ಎಸೆತದಲ್ಲಿ ಫೋರ್ ಬಾರಿಸಿ ಪಾಕಿಸ್ತಾನ್ ತಂಡಕ್ಕೆ 3 ವಿಕೆಟ್‌ಗಳ ರೋಚಕ ಗೆಲುವು ತಂದು ಕೊಟ್ಟರು. ಅಂದರೆ ಇಲ್ಲಿ ನೆದರ್‌ಲೆಂಡ್ಸ್ ಫೀಲ್ಡರ್ ಮಾಡಿದ ತಪ್ಪಿನಿಂದಾಗಿ ಪಾಕಿಸ್ತಾನ್ ತಂಡ ಗೆಲ್ಲುವಂತಾಯಿತು ಎಂದರೆ ತಪ್ಪಾಗಲಾರದು.

ಏಕೆಂದರೆ ಫಯೀಮ್ ಅಶ್ರಫ್ ವಿಕೆಟ್ ಪಡೆದಿದ್ದರೆ, ಪಂದ್ಯವು ಸಂಪೂರ್ಣ ನೆದರ್‌ಲೆಂಡ್ಸ್ ಪರ ವಾಲುತ್ತಿತ್ತು. ಆದರೆ ಅಂತಿಮ ಹಂತದಲ್ಲಿ ಮ್ಯಾಕ್ಸ್ ಒಡೌಡ್ ಮಾಡಿದ ತಪ್ಪಿನಿಂದಾಗಿ ನೆದರ್‌ಲೆಂಡ್ಸ್ ಸೋಲನುಭವಿಸಿತು. ಇದೀಗ ಪಾಕಿಸ್ತಾನ್ ತಂಡವು ತನ್ನ 2ನೇ ಪಂದ್ಯವಾಡಲು ಸಜ್ಜಾಗಿದೆ. ಟಿ20 ವಿಶ್ವಕಪ್‌ನ 12ನೇ ಪಂದ್ಯದಲ್ಲಿ ಪಾಕಿಸ್ತಾನ್ ಹಾಗೂ ಯುಎಸ್‌ಎ ಮುಖಾಮುಖಿಯಾಗಲಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966